ಶ್ರೀಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತಮಹಾದೇಶಿಕಾಯ ನಮಃ



ಮುಮುಕ್ಷುತ್ವಾಧಿಕಾರಃ. ೭.

ಕಾಲಾವರ್ತ್ತ ಪ್ರಕೃತಿವಿಕೃತೀಃ ಕಾಮಭೋಗೇಷು ದೋಷಾ
ನ್ಜ್ಞಪ್ಲಾಗರ್ತ್ತಪ್ರತಿಮದುರಿತೋದರ್ಕದುಃಖಾನುಭೂತಿಂ॥

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಹಿಂದೆ ನಾಲ್ಕಾದ ಪ್ರಧಾನಪ್ರತಿತನ್ತ್ರ, ಅರ್ಥಪಞ್ಚಕ, ತತ್ವತ್ರಯ, ಪರದೇವತಾಪಾರಮಾರ್ಥ್ಯಾಧಿಕಾರಗಳಿಂದ, ಮೋಕ್ಷಾರ್ಥಿಗೆ ಆವಶ್ಯಕವಾದ ಜ್ಞಾನವು ಉಪದೇಶಿಸಲ್ಪಟ್ಟಿತು. ಅರ್ಥಪಞ್ಚಕಾಧಿಕಾರದಲ್ಲಿ ಪ್ರಾಪ್ಯ, ಪ್ರಾಪ್ತೃಸ್ವರೂಪಗಳನ್ನು ವಿಶದವಾಗಿ ತಿಳಿಯಪಡಿಸಿ, ಪ್ರಾಪ್ತಿವಿರೋಧಿಯ ವಿಷಯದಲ್ಲೂ ಬಹು ವಿಸ್ತಾರವಾಗಿ ಉಪಪಾದನೆ ಮಾಡಿ, ದುಷ್ಕರ್ಮಗಳಿಂದ ಭಗವನ್ನಿಗ್ರಹವನ್ನು ಸಂಪಾದಿಸಿಕೊಳ್ಳದೆ ಭಗವದನುಗ್ರಹವನ್ನು ಸಂಪಾದಿಸಿಕೊಳ್ಳತಕ್ಕದ್ದೆಂದು ಹಿತಬೋಧನೆಯನ್ನು ಮಾಡಿದರು. ಪ್ರಾಪ್ತ್ಯುಪಾಯವನ್ನೂ ಫಲಸ್ವರೂಪವನ್ನೂ ಆ ಅಧಿಕಾರದಲ್ಲಿ ಹೇಳದೆ ಈ ಗ್ರಂಥದಲ್ಲಿ ಅವುಗಳೇ ಮುಖ್ಯವಾದ ವಿಷಯಗಳಾದುದರಿಂದ ಅವುಗಳನ್ನು ಸವಿಸ್ತಾರವಾಗಿ ತಿಳಿಸುವ ಅಭಿಪ್ರಾಯದಿಂದ **"ಪ್ರಾಪ್ತ್ಯುಪಾಯಮು ಮಿದಿನ್ ಪರಿಕರಜ್ಞಪ್ತಿಯುಮ್, ಫಲಸ್ವರೂಪಮಿರುಕ್ಕಂ ಪಡಿಯುಮ್, ಮೇಲೆ ಪ್ರಾಪ್ತಸ್ಥಳಜ್ಞಪ್ತಿಯಿಲೆ ಪರಕ್ಕಚ್ಚೊಲ್ಲಕ್ಕಡವೋಂ"** ಎಂದು ಹೇಳಿದರು. ಈಗ ಪ್ರಾಪ್ತ್ಯುಪಾಯ ವಿಷಯವಾದ ಚರ್ಚೆಯನ್ನು ಪ್ರಾರಂಭಿಸಿದವರಾಗಿ ಮುಂದಿನ ಆರು ಅಧಿಕಾರಗಳಿಂದ ಆ ಉಪಾಯಗಳ ಅನುಷ್ಠಾನಕ್ಕೆ

ಯಾಥಾತಥ್ಯಂ ಸ್ವಪರನಿಯತಂ ಯಚ್ಚ ದಿವ್ಯಂ ಪದಂ ತ
ತ್ಕಾರಾಕಲ್ಪಂ ವಪುರಪಿ ವಿದನ್ಕಸ್ತಿತಿಕ್ಷೇತ ಬನ್ಧಂ ॥೧೪॥

ಅಧಿಕಾರಿಗಳು ಯಾರು, ಆ ಉಪಾಯಗಳು ಯಾವುವು, ಅವುಗಳ ಪರಿಕರಗಳು ಯಾವುವು ಇವೇ ಮೊದಲಾದ ವಿಷಯಗಳು ಚರ್ಚಿಸಲ್ಪಡುವವು. ಪ್ರಥಮತಃ ಈ ಅಧಿಕಾರದಲ್ಲಿ ಮೋಕ್ಷಾರ್ಥಿಯಾಗಿ ಉಪಾಯಾನುಷ್ಠಾನಕ್ಕೆ ಯೋಗ್ಯನಾಗಲು ತಾನು ದೇಹಾತಿರಿಕ್ತನಾದುದರಿಂದ ನಶ್ವರಗಳಾದ ದೇಹಸುಖಗಳಲ್ಲಿ ಮಮತೆಯನ್ನು ನೀಗಿ, ಸಮಸ್ತವಾದ ಐಹಿಕ ವಿಷಯದಲ್ಲೂ ದೋಷಾಧಿಕ್ಯವಿರುವದರಿಂದ ವಿರಕ್ತಿ ಆವಶ್ಯಕವೆಂದೂ, ಅಂತಹ ಜ್ಞಾನವೈರಾಗ್ಯಾತಿಶಯಯುಕ್ತನು ಎಂದಿಗೂ ಸಂಸಾರಬಂಧವನ್ನು ಸಹಿಸಿಕೊಂಡಿರಲಾರನೆಂದೂ, ಹೇಳುತ್ತಾರೆ.

ಅರ್ಥ—(೧) **ಕಾಲಾವರ್ತ್ತ** - ಕಾಲದಸುಳಿಗಳನ್ನೂ ಎಂದರೆ ಚಕ್ರದ ಹಾಗೆ ಸ್ಥಿತವು ಸ್ವಲ್ಪವೂ ಇಲ್ಲದೆ, ಕ್ಷಣ, ಘಟಿಕಾ, ಅಹೋರಾತ್ರಿಗಳು, ಮಾಸ, ವರುಷ, ಯುಗ, ಕಲ್ಪಾದಿರೂಪವಾಗಿ ಸುತ್ತುವಿಕೆಗಳನ್ನೂ (೨) **ಪ್ರಕೃತಿ ವಿಕೃತೀಃ** - ಎಂಟಾದ ಪ್ರಕೃತಿಗಳನ್ನೂ ಮತ್ತು ಅವುಗಳ ವಿಕಾರಗಳಾದ ವಿಕೃತಿ ಎಂದು ಹೇಳಿಸಿಕೊಳ್ಳುವ ಹದಿನಾರು ತತ್ವಗಳನ್ನೂ, (೩) **ಕಾಮುಭೋಗೇಷು ದೋಷಾ** - ಐಹಿಕ ಮತ್ತು ಸ್ವರ್ಗಾದಿ ಲೋಕಗಳ ಭೋಗಗಳಲ್ಲಿರುವ ದೋಷಗಳನ್ನೂ, (೪) **ಜ್ವಾಲಾಗರ್ತ್ತ ಪ್ರತಿಮುದುರಿತೋದರ್ಕ ದುಃಖಾನುಭೂತಿಂ,** ಇಲ್ಲಿ ಜ್ವಾಲಾಗರ್ತ್ತಪ್ರತಿಮವೆಂಬುವದು, ದುಃಖವೆಂಬುವದಕ್ಕೆ ವಿಶೇಷಣವು. **ಜ್ವಾಲಾಗರ್ತ್ತಪ್ರತಿಮ** - ಜ್ವಾಲೆಯಿಂದ ಪೂರ್ಣವಾದ ಅಗಾಧವಾದ ಹಳ್ಳಕ್ಕೆ ಸಮಾನವಾದ, **ದುರಿತೋದರ್ಕದುಃಖ** – ದುಷ್ಕರ್ಮಗಳ ಉತ್ತರಫಲರೂಪವಾದ ದುಃಖಗಳ, **ಅನುಭೂತಿಂ** – ಅನುಭವವನ್ನೂ, (೫) **ಸ್ವಪರ ನಿಯತಂ** – **ಸ್ವ** ಎಂದರೆ ಜೀವಾತ್ಮನಾದ ತನಗೂ, **ಪರ** - ಸರ್ವೋತ್ಕೃಷ್ಟನಾದ ಈಶ್ವರನಿಗೂ, **ನಿಯತಂ**-ನಿಯತವಾದ, ಸ್ವಭಾವವಾದ, **ಯಾಥಾತಥ್ಯಂ**- ವಾಸ್ತವವಾದ ಸ್ವರೂಪವನ್ನೂ, (೬) **ಯಚ್ಚ** - ಯಾವ ಪ್ರಸಿದ್ಧವಾದ, **ದಿವ್ಯಂ ಪದಂ** – ಉತ್ಕೃಷ್ಟವಾದ ಪರಮಪದವೋ **ತತ್** - ಅದನ್ನೂ, (೭) **ಕಾರಾಕಲ್ಪಂ** - ಕಾರಾಗೃಹಕ್ಕೆ ಸಮಾನವಾದ, **ವಪುರಪಿ** - ಈ ದೇಹವನ್ನೂ ಕೂಡ, ಈ ಏಳು ವಿಷಯಗಳನ್ನೂ ಸಹ, **ವಿದನ್** – ಇವುಗಳ ಗುಣದೋಷಗಳನ್ನೂ ಚನ್ನಾಗಿ ಪರ್ಯಾಲೋಚಿಸಿ ತಿಳಿದವನಾಗಿ, **ಕಃ**-ಯಾರುತಾನೇ, **ಬನ್ಧಂ**- ಇಹಲೋಕದ ಈ ಸಂಸಾರಬಂಧವನ್ನು, **ತಿತಿಕ್ಷೇತ** - ಸಹಿಸಿಕೊಳ್ಳು

ವನು? ಎಂದಿಗೂ ಸಹಿಸಿಕೊಳ್ಳುವದಿಲ್ಲವೆಂಬ ಭಾವವು. ಅಂತಹ ಬಂಧನದಿಂದ ತಪ್ಪಿಸಿಕೊಳ್ಳಲು ಉಪಾಯವನ್ನೂ ಹುಡುಕುವನು ಎಂಬುವದು ಸಿದ್ಧವು.

ತಾತ್ಪರ್ಯವು:—ಈ ಶ್ಲೋಕದಲ್ಲಿ ಏಳು ವಿಷಯಗಳು ಉಪಪಾದಿತವಾಗಿವೆ. ಅವುಗಳಲ್ಲಿ **ಸ್ವಪರ ನಿಯತವಾದ ಯಾಥಾತಥ್ಯ** ವನ್ನೂ ಪರಮಪದದಲ್ಲುಂಟಾಗುವ ಉತ್ಕೃಷ್ಟದೆಸೆಯನ್ನೂ ಚನ್ನಾಗಿ ವಿಮರ್ಶಿಸಿ ತಿಳಿದವನು, ಮಿಕ್ಕ ಉಪಪಾದಿತಗಳಾದ ವಿಷಯಗಳನ್ನೆಲ್ಲಾ ನರಕತುಲ್ಯವಾಗಿ ಭಾವಿಸುವನು. ಅಂಥಾವನು ಸಂಸಾರದಲ್ಲಿರುವದನ್ನು ಕಾರಾಗೃಹವಾಸವಾಗಿ ಭಾವಿಸಿ ಅದರಿಂದ ತಪ್ಪಿಸಿಕೊಂಡು ಪರಮಪದಪ್ರಾಪ್ತಿಗೆ ಮಾರ್ಗವನ್ನು ಹುಡುಕುವನು ಎಂಬ ಭಾವವು.

ಈ ಲೀಲಾ ವಿಭೂತಿಯಲ್ಲಿ ಕಾಲವು ಪ್ರಭುವೆಂದೂ, ಆ ಕಾಲದಿಂದ, **"ಪರಿಣಾಮಹೇತುಃ"** ಎಂದು ಹೇಳಿರುನ ಹಾಗೆ ಸಕಲ ವಿಧ ಪರಿಣಾಮಗಳೂ ಜರುಗುತ್ತವೆ ಎಂದು ಹಿಂದೆ ತತ್ವತ್ರಯಾಧಿಕಾರದಲ್ಲಿ ಹೇಳಲ್ಪಟ್ಟಿರುತ್ತದೆ. ಅಂತಹ ಕಾಲದ ಆವರ್ತಕ್ಕೆ ಸಿಕ್ಕಿ ನಾವೂ ಸಹ ಗರ್ಭಜನ್ಮಜರಾಮರಣಾದಿಗಳ ಪರಿಭ್ರಮಣಗಳಿಗೆ ವಶವಾಗಿ ಅತಿದುಸ್ಸಹವಾದ ದುಃಖಗಳನ್ನನುಭವಿಸುತ್ತೇವೆ. ಇವುಗಳನ್ನು ತಿಳಿದವನುಈ ಕಾಲಚಕ್ರದ ಪರಿಭ್ರಮಣಕ್ಕೆ ವಶಪಟ್ಟಿರುವ ಲೀಲಾವಿಭೂತಿಯಿಂದ ತಪ್ಪಿಸಿಕೊಳ್ಳಲು ಯತ್ನಿಸುವನು.

ಪ್ರಕೃತಿವಿಕೃತೀಃ – ಪ್ರಕೃತಿ, ಮಹತ್, ಅಹಙ್ಕಾರ, ಪಂಚತನ್ಮಾತ್ರೆಗಳು ಇವುಎಂಟು **ಪ್ರಕೃತಿ**ಶಬ್ದದಲ್ಲಿ ಅಂತರ್ಗತಗಳು. ಪಂಚಭೂತಗಳೂ, ಪಂಚಜ್ಞಾನೇಂದ್ರಿಯಗಳೂ, ಪಂಚಕರ್ಮೇಂದ್ರಿಯಗಳೂ, ಮನಸ್ಸೂ ಸಹ ೧೬ **ವಿಕೃತಿ**ಗಳು, ಆ ಪ್ರಕೃತಿಗಳ ವಿಕಾರದಿಂದುಂಟಾದವು. ಸಾರದೀಪವ್ಯಾಖ್ಯಾನದಲ್ಲಿ ಪ್ರಕೃತಿಯು ಒಂದೆಂದಿಟ್ಟುಕೊಂಡು ಇನ್ನೂ ೨೩ನ್ನೂ ವಿಕೃತಿಗಳಾಗಿ ಭಾವಿಸಿರುತ್ತಾರೆ. ಮೇಲಿನ ವಿಭಾಗವು **"ಅಷ್ಟೌಪ್ರಕೃತಯಃಷೋಡಶವಿಕಾರಾಃ"** ಎಂಬ ವಾಕ್ಯರೀತ್ಯಾ ಮಾಡಲ್ಪಟ್ಟಿರುತ್ತದೆ. ಪರಿಶುದ್ಧನಾದ ಆತ್ಮನಿಗೆ ಇಂತಹ ವಿಕಾರಗಳನ್ನ ಹೊಂದುವ ತತ್ವಗಳ ರೂಪಾಂತರಗಳಾದ ಇಂದ್ರಿಯ ಮನಸ್ಸುಗಳ ಸಂಬಂಧವು ದೊರೆತು ಕ್ಲೇಶಪಡುತ್ತಾ ಇರುವನು. ಆದುದರಿಂದ ಅಂತಹ ದುರವಸ್ಥೆಯನ್ನು **ಕಸ್ತಿತಿಕ್ಷೇತ** – ಯಾವನು ಸಹಿಸಿಕೊಂಡಿರುವನು ಎಂಬ ಭಾವವು.

ಕಾಮಭೋಗೇಷು ದೋಷಾ-ಆ ಇಂದ್ರಿಯಗಳಿಂದ ಕೂಡಿದ ಶರೀರವು ಪ್ರಾಪ್ತವಾದ ಒಡನೆಯೇ, ಕಾಮಭೋಗಗಳಲ್ಲಿ ಅತ್ಯಾಶೆಯು ಈ ಆತ್ಮನಿಗೆ ಉಂಟಾಗುತ್ತದೆ. ಯಾವಯಾವ ಸುಖಗಳನ್ನು ಈತನು ಅಪೇಕ್ಷಿಸಿದರೂ ಇವನ ದುಷ್ಕರ್ಮಪರಿಪಾಕದಿಂದ ಕೊನೆಗೆ ಅವು ದುಃಖವನ್ನುಂಟುಮಾಡುವವುಗಳಾಗಿಯೇ

ಆಗುತ್ತವೆ. ಸಮಸ್ತವೂ ಈ ಲೋಕದಲ್ಲಿ (೧) **"ಭಯನಿದಾನಮೇವ"** ಭಯಕ್ಕೆ ಕಾರಣಭೂತವಾದವು. ಹಾಗೆಯೇ ಸ್ವರ್ಗಾದಿ ಭೋಗಗಳೂ ಕೂಡ ಭಯಕ್ಕೆ ಕಾರಣಭೂತವಾದವು.

"ಆಬ್ರಹ್ಮಭುವನಾದೇತೇ ದೋಷಾಸ್ಸಂತಿ ಮಹಾಮುನೇ।
ಅತ ಏವ ಹಿ ನೇಚ್ಛನ್ತಿ ಸ್ವರ್ಗಪ್ರಾಪ್ತಿಮ್ಮನೀಷಿಣಃ ॥"

ಬ್ರಹ್ಮಸ್ವರ್ಗಾದಿ ಲೋಕಪ್ರಾಪ್ತಿಯಲ್ಲೂ ದೋಷಗಳುಂಟು. ಆದುದರಿಂದ ಜ್ಞಾನಿಗಳು ಸ್ವರ್ಗಪ್ರಾಪ್ತಿಯನ್ನಪೇಕ್ಷಿಸುವದಿಲ್ಲವು. ಹಾಗೆಯೇ ಗೀತೆಯಲ್ಲೂ **"ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋರ್ಜುನ"** ಎಂದೂ, **"ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ"** ಎಂದೂ ಹೇಳಿರುವದರಿಂದ ಸ್ವರ್ಗಾನುಭವವೂ ಕೂಡ ಅಲ್ಪಾಸ್ಥಿರವಾದುದು. ಇವುಗಳನ್ನು, **ವಿದ್ವಾನ್** – ತಿಳಿದವನು ಎಂದಿಗೂ ಐಹಿಕ ಸ್ವರ್ಗ ಮೊದಲಾದ ಸುಖಾನುಭವಗಳಿಗೆ ಮನಕೊಡನು.

ಜ್ವಾಲಾಗರ್ಭಪ್ರತಿಮ ದುರಿತೋದರ್ಕ ದುಃಖಾನುಭೂತಿಂ – ಇಹ ಲೋಕ ಸಂಸಾರದಲ್ಲಿ ಉಂಟಾಗುವ ದುಃಖವು ಜ್ವಾಲೆಗಳಿಂದ ಪೂರ್ಣವಾದ ಗರ್ತದಲ್ಲಿ ಬೀಳುವದರಿಂದುಂಟಾಗುವ ತಾಪಕ್ಕೆ ಹೋಲಿಸಲ್ಪಟ್ಟಿರುತ್ತದೆ.(೨)**"ಇತಿ ಸಂಸಾರದುಃಖಾರ್ಕತಾಪತಾಪಿತಚೇತಸಾಂ"** ಸಂಸಾರದುಃಖವೆಂಬುವದೇ ಒಬ್ಬ ಸೂರ್ಯನು, ಆ ತಾಪದಿಂದ ಬೆಂದುಹೋದ ಚೇತನರು ಎಂದು ಶ್ರೀಪರಾಶರಮಹರ್ಷಿಯು ಪ್ರಯೋಗನಿರುತ್ತದೆ. ಹೀಗೆ ಇಂತಹ ತಾಪವುಂಟು ಎಂದು **ವಿದ್ವಾನ್** ತಿಳಿದವನಾದರೆ, ಇಂತಹ ಬಂಧವನ್ನು ಸಹಿಸುತ್ತಾನೆಯೇ ಎಂಬ ತಾತ್ಪರ್ಯವು.

ಹೀಗೆ ಇಲ್ಲಿ ಅನೇಕ ದುಃಖಗಳುಂಟೆಂದೂ, ಹಾಗೆಯೇ ಸ್ವರ್ಗಾದಿ ಐಶ್ವರ್ಯಗಳೂ ಕೂಡ ಅಸ್ಥಿರಗಳೆಂದೂ, ಈ ಜೀವಾತ್ಮನ ನೈಜವಾದ ಸ್ವರೂಪವು ಉತ್ಕೃಷ್ಟವಾದುದೆಂದೂ, ಪರಮಾತ್ಮನ ದಿವ್ಯಸ್ವರೂಪವು ಸರ್ವೋತ್ಕೃಷ್ಟವಾದುದೆಂದೂ ವೈಕುಂಠದಲ್ಲಿ ಈತನಿಗೆ ಪ್ರಾಪ್ತವಾಗುವ ಆನಂದವು ನಿರತಿಶಯವಾದುದೆಂದೂ ತಿಳಿದರೆ, ಈ ಪೃಥಿವಿ ಎಂಬ ಕಾರಾಗೃಹದಲ್ಲಿರಲು ಎಂದಿಗೂ ಈ ಮನುಷ್ಯನು ಒಪ್ಪಲಾರನೆಂದು ಹೇಳಿರುತ್ತಾರೆ.

ಯಾಥಾತಥ್ಯಂ ಸ್ವಪರನಿಯತಂ-ಜೀವನಾದ ತಾನು, ಮಹಾಪರಿಶುದ್ಧನಾಗಿ ಹೇಯಗುಣ ಸಂಬಂಧವಿಲ್ಲದವನಾಗಿ, ಜ್ಞಾನತ್ವ ಆನಂದತ್ವಾದಿಗಳಿಂದ ಯುಕ್ತನಾಗಿ ಸರ್ವೇಶ್ವರನಾದ ಲೋಕಪಿತಾವಿನೊಂದಿಗೆ ನಿರತಿಶಯ ಭೋಗಗ

---

(೧) ಅಭೀತಿಸ್ತವ (೨) ವಿ.ಪು. ೬. ೫. ೫೭.

ಳನ್ನು ಹೊಂದಲು ಯೋಗ್ಯನಾದ ರಾಜಕುಮಾರನಾಗಿ, ಆತನಿಗೆ ಶೇಷಭೂತನಾಗಿ ಕೈಂಕರ್ಯವನ್ನೆಸಗುವದೇ ತನಗೆ ಪುಣ್ಯೋದಯವೆಂದು ತಿಳಿದ ನಂತರವೂ, ಅದೂ ಅಲ್ಲದೆ ಸರ್ವೇಶ್ವರನು ಅನುಗ್ರಹಮಯಳಾದ ಲಕ್ಷ್ಮ್ಯಾಯೊಂದಿಗೆ ಇದ್ದುಕೊಂಡು ಪರಿಪೂರ್ಣ ಕಾಮನಾಗಿ, ನಿರತಿಶಯಸ್ವರೂಪರೂಪಗುಣವಿಭವೈಶ್ವರ್ಯಾದಿಗಳಿಂದ ಯುಕ್ತನಾಗಿ, ಹೇಯಪ್ರತ್ಯನೀಕನಾಗಿ, ಆಶ್ರಿತರಕ್ಷಣೋಪಯುಕ್ತವಾದ ದಯಾ ಶಕ್ತಿ ಸೌಶೀಲ್ಯ ಸೌಲಭ್ಯಾದಿ ಕಲ್ಯಾಣಗುಣಗಳಿಂದ ಯುಕ್ತನಾಗಿ, ತನ್ನನ್ನು ರಕ್ಷಿಸಲು ಅವಸರಪ್ರತೀಕ್ಷೆಯನ್ನು ಮಾಡಿಕೊಂಡಿದ್ದಾನೆಂದೂ ತಿಳಿದನಂತರವೂ ಕೂಡ, **ಕಸ್ತಿ ತಿಷ್ಠೇತಬಂಧಂ** ಎಂದು ಹೇಳುತ್ತಾರೆ. ಈಗ ಜೀವನಾದ ತಾನು ಇರುವ ದುಸ್ಥಿತಿಯನ್ನು ಕುರಿತು ಹೇಳಲೇ ಆವಶ್ಯಕವಿಲ್ಲವು. ಆ ದುಸ್ಥಿತಿಯು ಎಂಥಾದ್ದೆಂಬುವದು ಉಪೋದ್ಘಾತಾಧಿಕಾರದಲ್ಲಿ ಬಹು ಸ್ವಾರಸ್ಯವಾಗಿ ಉಪಪಾದಿಸಿರುತ್ತಾರೆ. ಆದುದರಿಂದ ಹೀಗೆ ಬಂಧಕ್ಕೆ ಸಿಲುಕಿ, ಕರ್ಮವಶ್ಯನಾಗಿ, ದುಃಖಭಾಕ್ಕಾಗಿರುವ ತನ್ನ ಕಾರಾಗೃಹಸದೃಶವಾದ ಈಗಿನ ದುಸ್ಥಿತಿಗೂ, ತನಗೆ ದಿವ್ಯವೈಕುಂಠದಲ್ಲಿ ಉಂಟಾಗುವ ಪರಬ್ರಹ್ಮಪ್ರಾಪ್ತಿರೂಪ ಮಹದೈಶ್ವರ್ಯಕ್ಕೂ ಹೋಲಿಸಿದರೆ, ಯಾವನೊಬ್ಬನೂ ಒಂದು ನಿಮಿಷವಾದರೂ ಈ ಕಾರಾಗೃಹದಲ್ಲಿರುವದಕ್ಕೆ ಒಪ್ಪಲಾರೆನೆಂಬ ಭಾವವು. ಇಲ್ಲಿನ ಮತ್ತು ಸ್ವರ್ಗಾದಿಗಳ ಸುಖವೆಲ್ಲಾ ವಿಷಮಿಶ್ರ ಮಧುರೂಪದಲ್ಲಿರುವದರಿಂದ, **"ಏತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ"** (ಭಾರ. ಶಾಂತಿ. ೧೯೬. ೬) ಎಂದು ಹೇಳಿರುವ ಹಾಗೆ ದಿವ್ಯ ವೈಕುಂಠದ ಮುಂದೆ ಇವೇ ಮೊದಲಾದ ಲೋಕಗಳ ವಾಸವು ನರಕತುಲ್ಯವಾದುದು ಎಂಬಭಿಪ್ರಾಯವು. ಇಲ್ಲಿ ಬಂಧಶಬ್ದವನ್ನುಪಯೋಗಿಸಿರುವದರಿಂದ, ದಿವ್ಯವೈಕುಂಠದಲ್ಲಿ ಕರ್ಮವಶ್ಯತಾರೂಪ ಬಂಧವಿಲ್ಲವೆಂದೂ, ಜ್ಞಾನಸಂಕೋಚತ್ವವೂ ಇಲ್ಲವೆಂದೂ ಸೂಚಿಸಲ್ಪಟ್ಟಿತು.

ಹೀಗೆಲ್ಲಾ ವಿಮರ್ಶಿಸಿ ತಿಳಿದವನೀಗ ಐಹಿಕಗಳಲ್ಲೆಲ್ಲಾ ವಿಶ್ವಾಸವನ್ನು ತೊರೆದು, ಮುಮುಕ್ಷುವೆನಿಸಿಕೊಳ್ಳುತ್ತಾನೆಂಬಭಿಪ್ರಾಯವು.

ಮುಮುಕ್ಷುವು ಎಂತವನು, ಆತನ ಜ್ಞಾನ ಮತ್ತು ಆಚರಣೆಗಳು ಎಂತವುಗಳು ಎಂಬ ವಿಷಯಗಳು.

ಮೋಕ್ಷಾರ್ಥಿಗಳಾಗಲು ಯೋಗ್ಯರು ಯಾರು, ಅವರು ಯಾವ ಜ್ಞಾನವನ್ನೂ ಆಚರಣೆಯನ್ನೂ ಹೊಂದಿರತಕ್ಕದ್ದು ಎಂಬುವದನ್ನು ಮುಂದೆ ಒಂದು ದೊಡ್ಡ ವಾಕ್ಯದ ಮೂಲಕ ಉಪದೇಶಿಸುತ್ತಾರೆ. ಈ ವಾಕ್ಯವು **ಇಪ್ಪಡಿ** ಎಂದು ಪ್ರಾರಂಭಿಸಿ, **ಮುಮುಕ್ಷುಕ್ಕಳಾನ ಅಧಿಕಾರಿಗಳ್** ಎಂದು ಮುಗಿದಿರುತ್ತದೆ. ಆ ಮುಮುಕ್ಷುಗಳಿಗೆ ಏಳು ವಿಶೇಷಣಗಳನ್ನು ಕೊಟ್ಟಿರುವದರಿಂದ ಏಳು ಚಿಕ್ಕವಾಕ್ಯಗಳಾಗಿ

ಮುಮುಕ್ಷುತ್ವೆ ನಿರೂಪಣಂ

೧. ಇಪ್ಪಡಿ ಇವ್ವರ್ಥಜ್ಞಗಳೈ ಅಧ್ಯಾತ್ಮ ಶಾಸ್ತ್ರಜ್ಞಗಳಾಲೇ ತೆಳಿನ್ದು

ವಿಭಾಗಿಸಲ್ಪಟ್ಟಿರುತ್ತದೆ. **ಪುರುಷಾರ್ಥಯೋಗ್ಯರಾಯ್** ಎಂಬಲ್ಲಿಗೆ ಮೊದಲನೇ ವಾಕ್ಯವು; **ನಿವೃತ್ತರಾಯ್** ಎಂಬಲ್ಲಿಗೆ ಎರಡನೇದು; **ಆಪೇಕ್ಷಿಕೈಕ್ಕುಯೋಗ್ಯರಾಯ್** ಎಂಬಲ್ಲಿಗೆ ಮೂರನೇದು; **ಸ್ಥಿರಪ್ರತಿಷ್ಠಿತಜ್ಞಾನರಾಯ್** ಎಂಬಲ್ಲಿಗೆ ನಾಲ್ಕನೇದು; **ಅವಸ್ಥೈಯುಡೈಯರಾಯ್** ಎಂಬಲ್ಲಿಗೆ ಐದನೇದು ; **ನಿವೃತ್ತರಾಯ್** ಎಂಬಲ್ಲಿಗೆ ಆರನೇದು ; **ಅಧಿಕಾರಿಗಳ್** ಎಂಬಲ್ಲಿಗೆ ಏಳನೇವಾಕ್ಯವು.

೧. ಆತ್ಮವು ದೇಹಕ್ಕಿಂತಲೂ ವಿಲಕ್ಷಣವೆಂದು ಹೇಳಲ್ಪಟ್ಟಿತು. ಹೀಗೆ ವೈಲಕ್ಷಣ್ಯವು ಇರುವದರಿಂದ ಪರಮ ಪುರುಷಾರ್ಥವನ್ನು ಹೊಂದಲು ತಾನು ಯೋಗ್ಯನೆಂಬ ಜ್ಞಾನವು ಮೋಕ್ಷಾರ್ಥಿಗೆ ಪ್ರಥಮತಃ ಇರಬೇಕೆಂದು ಹೇಳುತ್ತಾರೆ:—**ಇಪ್ಪಡಿ** – ಈ ಮೇಲೆ ಹೇಳಿದ ರೀತಿಯಲ್ಲಿ, **ಇವ್ವರ್ಥಜ್ಞಗಳೈ** - ಪ್ರಧಾನ ಪ್ರತಿತನ್ತ್ರ, ಅರ್ಥಪಂಚಕ, ತತ್ವತ್ರಯ ಪರದೇವತಾಪಾರಮಾರ್ಥ್ಯಾಧಿಕಾರಗಳಲ್ಲಿ ಉಪಪಾದಿಸಲ್ಪಟ್ಟ ಅಭಿಪ್ರಾಯಗಳನ್ನು, **ಅಧ್ಯಾತ್ಮ ಶಾಸ್ತ್ರಜ್ಞಗಳಾಲೇ ತೆಳಿನ್ದು** - ಅಧ್ಯಾತ್ಮಶಾಸ್ತ್ರಗಳಾದ ಉಪನಿಷತ್ತುಗಳೂ, ವ್ಯಾಸಸೂತ್ರಗಳೂ, ಶ್ರೀಭಾಷ್ಯಾದಿಗಳೂ, ಗೀತಾಶಾಸ್ತ್ರ, ವಿಷ್ಣುಪುರಾಣ, ದ್ರಾವಿಡ ಪ್ರಬಂಧಾದಿಗಳ ಮೂಲಕ ತಿಳಿದುಕೊಂಡು; (ಇಲ್ಲಿ ಅಧ್ಯಾತ್ಮ ಶಾಸ್ತ್ರಜ್ಞಗಳಾಲೆ ತೆಳಿನ್ದು ಎಂಬುವದರಿಂದ ಈ ಮೇಲೆ ಹೇಳಿದ ನಾಲ್ಕು ಅಧಿಕಾರಗಳ ಅಭಿಪ್ರಾಯಗಳೂ ಸಹ ಅಧ್ಯಾತ್ಮಶಾಸ್ತ್ರಸಾರವೇ ಎಂಬಭಿಪ್ರಾಯವು. ಅಥವಾ ಅಧ್ಯಾತ್ಮ ಶಾಸ್ತ್ರಗಳಲ್ಲಿ ಹೇಳಿರುವ ಅಭಿಪ್ರಾಯಗಳನ್ನು ಸಂಗ್ರಹವಾಗಿ ತಾವು ಹೇಳಿರುವದರಿಂದ ಅಧ್ಯಾತ್ಮಶಾಸ್ತ್ರ ಕೋವಿದರಾದ ತಮ್ಮತಮ್ಮ ಆಚಾರ್ಯರುಗಳ ಮೂಲಕ ಈ ಅಧಿಕಾರಗಳ ಉಪದೇಶವನ್ನು ಹೊಂದುವದು ಯುಕ್ತವೆಂದೂ ತೋರಿಬರುತ್ತದೆ; ಅಥವಾ ಮೇಲೆ ಹೇಳಿದ ನಾಲ್ಕು ಅಧಿಕಾರಗಳ ಅಭಿಪ್ರಾಯವನ್ನು ಮೋಕ್ಷಾರ್ಥಿಯು ತಿಳಿಯುವದು ಆವಶ್ಯಕವೋ ಎಂದರೆ, ಅತ್ಯಾವಶ್ಯಕವು ಎಂದು ಸೂಚಿಸಿ, ಅಷ್ಟು ಮಾತ್ರವೇ ಅಲ್ಲವು, ಆ ವಿಷಯಗಳೇ ಚನ್ನಾಗಿ ವಿಸ್ತಾರವಾಗಿ ಅಧ್ಯಾತ್ಮಶಾಸ್ತ್ರಗಳಲ್ಲಿ ಉಪಪಾದಿತವಾಗಿರುವದರಿಂದ, ಅಂತಹ ಶಾಸ್ತ್ರಜ್ಞರ ಮೂಲಕ ಉಪದೇಶಹೊಂದಬಹುದೆಂಬ ಭಾವವೂ ವ್ಯಕ್ತಪಡುತ್ತದೆ. ಆದರೆ ವಿಶೇಷಜ್ಞಾನಗಳನ್ನು ಹೊಂದುವದಕ್ಕೆ ಅವಕಾಶವೂ, ಜ್ಞಾನವೂ, ಅಭಿಲಾಷೆಯೂ ಇಲ್ಲದವರಿಗೆ ಈ ನಾಲ್ಕು ಅಧಿಕಾರಗಳಲ್ಲಿರುವ ಅಧ್ಯಾತ್ಮವೆಂದರೆ ಪರಬ್ರಹ್ಮವಿಷಯಿಕ ಜ್ಞಾನವೇ

ಸ್ವಯಂ ಪ್ರಕಾಶತ್ವ, ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವ, ಶರೀರತ್ವ,

ಸಾಕಾಗಿರುತ್ತದೆ. ಅಂತಹ ಶಾಸ್ತ್ರಗಳ ಮೂಲಕ ಏನನ್ನು ಮುಖ್ಯವಾಗಿ ತಿಳಿಯುತ್ತಾನೆಂದರೆ :—ತಾವು ತತ್ವತ್ರಯಾಧಿಕಾರದಲ್ಲಿ ದೇಹಕ್ಕೂ ಜೀವಾತ್ಮನಿಗೂ ಇರುವ ವೈಲಕ್ಷಣ್ಯ ವಿಷಯಗಳು ; ಅವುಗಳನ್ನೇ ಈಗ ನಮ್ಮ ಅವಗಾಹನೆಗೆ ತರುತ್ತಾರೆ.

ಸ್ವಯಂಪ್ರಕಾಶತ್ವವು, ಜೀವಾತ್ಮನಿಗೆ ಉಂಟೆಂದು ತತ್ವತ್ರಯಾಧಿಕಾರದಲ್ಲಿ ಉಪಪಾದಿತವಾಗಿರುತ್ತದೆ. ಜ್ಞಾತೃತ್ವವು ಉಂಟೆಂಬುವದೂ, ಅಲ್ಲಿಯೇ ಜ್ಞಾನಸ್ವರೂಪನೆಂದೂ ಜ್ಞಾನಗುಣಕನೆಂದೂ ಉಪಪಾದಿತವಾಗಿರುವದರಿಂದ ತೋರಿಬರುತ್ತದೆ. ಆದರೆ ಶಾಂಕರಾದಿಗಳು **ಈ** ಆತ್ಮನಿಗೆ ಜ್ಞಾತೃತ್ವವು ಸ್ವರೂಪವಲ್ಲವೆಂದೂ ಜ್ಞಾನಸ್ವರೂಪಮಾತ್ರವೇ ಎಂದು ಅಭಿಪ್ರಾಯಪಡುತ್ತಾರೆ. **ಈ** ಅಭಿಪ್ರಾಯಗಳು **ಜ್ಞೋತ ಏವ** (ಶಾರೀ. ಸೂ. ೨. ೩. ೧೯.) ಎಂಬ ಸೂತ್ರಭಾಷ್ಯದಲ್ಲಿ ಶ್ರೀಭಾಷ್ಯಕಾರರು ಖಂಡಿಸಿರುತ್ತಾರೆ. ಹಾಗೆಯೇ ಕರ್ತೃತ್ವ, ಭೋಕ್ತೃತ್ವ, ಶರೀರತ್ವ, ಅಣುತ್ವ ಮೊದಲಾದ ಸ್ವರೂಪಗಳೆಲ್ಲವೂ, ಶಾರೀರಕ ಸೂತ್ರಗಳಲ್ಲಿ ಉಪಪಾದಿತವಾಗಿವೆ. ಕರ್ತೃತ್ವ ಉಂಟೆಂಬುವದು **ಕರ್ತಾ ಶಾಸ್ತ್ರಾರ್ಥವತ್ವಾತ್** (ಶಾರೀ. ಸೂತ್ರ. ೨. ೩. ೩೩) ಎಂಬುವ ಸೂತ್ರದಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಇದರಿಂದ, ಆತ್ಮನಿಗೆ ಕರ್ತೃತ್ವವು ಇಲ್ಲವೆಂಬ ಸಾಂಖ್ಯರ ಮತವು ಖಂಡಿಸಲ್ಪಟ್ಟಿರುತ್ತದೆ. ಕರಣ **ಕಳೇಬರಯೋಗವನ್ನು** ಸರ್ವೇಶ್ವರನು ಉಂಟುಮಾಡಿರುವದರಿಂದ ಈತನಿಗೆ ಕರ್ತೃತ್ವವೇನೋ ಉಂಟು. ಆದರೆ **ಈ** ಕರ್ತೃತ್ವವು ಭಗವದಧೀನವಾದುದೆಂದು **ಪರಾತ್ತು, ತಚ್ಛ್ರುತೇಃ**—(ಶಾರೀ. ೨. ೩.) ಎಂಬ ಸೂತ್ರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಜೀವನು ಕರ್ಮವನ್ನೆಸಗಿ ಕರ್ಮವಶ್ಯನಾಗಿರುವದರಿಂದ ಈತನಿಗೆ ಭೋಕ್ತೃತ್ವವೂ ಉಂಟು. ಶ್ರುತಿಯು **ಭೋಗ್ಯಂ ಭೋಕ್ತಾ ಪ್ರೇರಿತಾರಂ ಚ ಮತ್ವಾ** ಎಂದು ಹೇಳಿರುವದರಿಂದ ಜೀವಾತ್ಮನಿಗೆ ಭೋಕ್ತೃತ್ವವೂ ಉಂಟೆಂದು ಶ್ರೀ ನಿಗಮಾಂತದೇಶಿಕರವರೂ ಶರಣಾಗತಿದೀಪಿಕೆಯಲ್ಲಿ,

ಭೋಗ್ಯಂ ಮುಕುನ್ದಗುಣಭೇದ ಮಚೇತನೇಷು,
ಭೋಕ್ತೃತ್ವಮಾತ್ಮನಿ ನಿಹೇಶ್ಯ ನಿಜೇಚ್ಛಯೈವ

ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಜೀವಾತ್ಮನು ಸರ್ವೇಶ್ವರನಿಗೆ ಶರೀರವೆಂಬ ಭಾವವು ಪ್ರಧಾನಪ್ರತಿತಂತ್ರಾಧಿಕಾರದಲ್ಲಿ ಬಹು ವಿಶದವಾಗಿ, ಸಪ್ರಮಾಣವಾಗಿ ಉಪದೇಶಿಸಲ್ಪಟ್ಟಿರುತ್ತದೆ. **ಅಣುತ್ವ** - ಜೀವಾತ್ಮನು ಅಣುವು, "**ಏಷೋ**

ಅಣುತ್ವ ನಿತ್ಯತ್ವ ನಿರವಯವತ್ವ, ಛೇದನ ದಹನ ಕ್ಲೇದನ ಶೋಷಣಾದ್ಯನರ್ಹತ್ವ, ವೃದ್ಧಿ ಹ್ರಾಸರಹಿತ ಸ್ವರೂಪತ್ವಾದಿಗಳಾಲೇ ಆತ್ಮಾವುಕ್ಕು

ಣುರಾತ್ಮಾ'' ಎಂಬ ''**ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯಚ। ಭಾಗೋ ಜೀವಸ್ಸವಿಜ್ಞೇಯಂ**'' ಎಂಬ ಪ್ರಮಾಣಗಳಿಂದ ಜೀವನು ಅಣುಸ್ವರೂಪನು. ಇದರಿಂದ ಜೀವನು ವಿಭುವು ಎಂದು ಹೇಳುವ ತಾರ್ಕಿಕನ ವಾದವು ಖಂಡಿಸಲ್ಪಟ್ಟಿತು. ಜೀವನಿಗೆ ನಿತ್ಯತ್ವವನ್ನೂ, ''**ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ ಏಕೋಬಹೂನಾಂ**'' ಎಂಬ ಶ್ರುತಿಯೂ''**ಜ್ಞಾ ಜ್ಞೌ ದ್ವಾವಜಾವೀಶನೀಶೌ**'' (ಶ್ವೇತ. ೧. ೯.) ಎಂಬ ಶ್ರುತಿಯೂ ಸಹ ಬೋಧಿಸುತ್ತವೆ ಯಾವಾಗ ಜೀವಾತ್ಮನು **ಅಣು** ಎಂದಾಯಿತೋ, ಆಗ ಅವಯವಗಳಿಲ್ಲದವನ ಎಂದು ಏರ್ಪಟ್ಟಿತು. ಆದುದರಿಂದ **ನಿರವಯವತ್ವವೂ** ಜೀವಸ್ವರೂಪದಲ್ಲಿ ಸೇರಿದುದು. ಇದು ತತ್ವತ್ರಯಾಧಿಕಾರದಲ್ಲಿ ಹೇಳಲ್ಪಡದಿದ್ದರೂ, ಅಣುತ್ವವು ಯಾವಾಗ ಜೀವಸ್ವರೂಪವೆಂದು ಏರ್ಪಟ್ಟಿತೋ, ಆಗ ನಿರವಯವತ್ವವೂ ಹೇಳಲ್ಪಟ್ಟಂತಾಯಿತು.

ಛೇದನ ದಹನ ಕ್ಲೇದನ ಶೋಷಣಾದ್ಯನರ್ಹತ್ವ, ಛೇದನ - ಕತ್ತರಿಸೋಣ, **ದಹನ** - ಸುಡೋಣ, **ಕ್ಲೇದನ**–ತೊಯಿಸೋಣ, **ಶೋಷಣ** - ಒಣಗಿಸೋಣ, **ಆದಿ** ಇವೇ ಮೊದಲಾದವುಗಳನ್ನು, **ಅನರ್ಹತ್ವ** - ಹೊಂದದಿರುವಿಕೆಯು. ಆತ್ಮನು ನಿತ್ಯನಾದುದರಿಂದ ಈ ಮೇಲೆ ಹೇಳಿದ ಮೇರಿಗೆ, ಕತ್ತರಿಸುವದಕ್ಕಾಗಲಿ, ಸುಡುವದಕ್ಕಾಗಲಿ, ತೊಯಿಸುವದಕ್ಕಾಗಲಿ, ಒಣಗಿಸುವದಕ್ಕಾಗಲಿ ಸಾಧ್ಯವಿಲ್ಲವು. ಗೀತೆಯ,

"**ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ।**" ಎಂಬ ಮತ್ತು **ನೈನಂ ಛಿನ್ದನ್ತಿ ಶಸ್ತ್ರಾಣಿ ನೈನಂ ದಹತಿ ಪಾವಕಃ। ನ ಚೈನಂ ಕ್ಲೇದಯನ್ತ್ಯಾಪೋ ನ ಶೋಷಯತಿ ಮಾರುತಃ॥** ಎಂಬ ಶ್ಲೋಕಗಳಲ್ಲೂ (ಗೀ. ೨. ೨೩-೪) ಈ ಅಭಿಪ್ರಾಯಗಳೇ ಉಪದೇಶಿಸಲ್ಪಟ್ಟಿವೆ.

ವೃದ್ಧಿಹ್ರಾಸರಹಿತ ಸ್ವರೂಪತ್ವಾದಿಗಳಾಲೇ, ವೃದ್ಧಿಹೊಂದುವದು, ಸಙ್ಕೋಚವನ್ನು ಹೊಂದುವದು, ಇಂಥಾವುಗಳೊಂದೂ ಇಲ್ಲದ ಸ್ವರೂಪವನ್ನು ಹೊಂದಿರುವಿಕೆಯು, ಎಂದರೆ ಸ್ಥೂಲಕೃಶ ಮೊದಲಾದ ಧರ್ಮಗಳು ಶರೀರಕ್ಕೆ ಸಂಬಂಧಪಟ್ಟವು; ಹಾಗಿದ್ದರೂ ''**ಸ್ಥೂಲೋಹಂ ಕೃಶೋಹಂ**'' ನಾನು ಸ್ಥೂಲವಾದವನು, ಕೃಶವಾದವನು ಎಂಬ ವ್ಯವಹಾರವು ಭ್ರಾಮಕದಿಂದ ಆತ್ಮವನ್ನು ಕುರಿತು

ವಿಶೇಷಣೀ ಭೂತ ದೇಹೇನ್ದ್ರಿಯಾದಿ ವೈಲಕ್ಷಣ್ಯತ್ತೈ ಕಣ್ಡು, ಇವನು ಡೈಯ ಪರಲೋಕಗಮನ ದೇಹಾನ್ತರ ಪ್ರಾಪ್ತಿಯೋಗ್ಯತ್ತೈ ನಿಶ್ಚಯ

ಹೇಳತಕ್ಕದ್ದಾಗಿರುತ್ತದೆಯಾದುದರಿಂದ ಸ್ಥೂಲಕೃಶ ಮೊದಲಾದ ಧರ್ಮಗಳು ಆತ್ಮನಿಗೆ ಸೇರಿದವಲ್ಲವೆಂಬ ಭಾವವು.

ಆತ್ಮಾವುಕ್ಕು ವಿಶೇಷಣೀಭೂತ ದೇಹೇಂದ್ರಿಯಾದಿ ವೈಲಕ್ಷಣ್ಯತ್ತೈ – ದೇಹ ಮತ್ತು ಇಂದ್ರಿಯಗಳು ಆತ್ಮಾವಿಗೆ ವಿಶೇಷಣಗಳು, ಈ ಲೀಲಾ ವಿಭೂತಿಯಲ್ಲಿ ಜೀವಾತ್ಮನು ಇರುವವರೆಗೂ ಈತನಿಗೆ ದೇಹ ಮತ್ತು ಇಂದ್ರಿಯಗಳ ಸಂಬಂಧವು ತಪ್ಪಿದ್ದಲ್ಲವು ಆದುದರಿಂದ ಇವು ಈ ಆತ್ಮನನ್ನು ಅನುಸರಿಸಿ ಬರುತ್ತವೆ. ಆದುದರಿಂದ ಅಪೃಥಕ್ಸಿದ್ಧ ವಿಶೇಷಣಗಳಾಗಿ ಮರಣಾನಂತರವೂ ಆತ್ಮನು ದೇಹವನ್ನು ಬಿಟ್ಟು ಹೋಗುವಾಗಲೂ ಇಂದ್ರಿಯಗಳು ಸೂಕ್ಷ್ಮದೆಸೆಯಲ್ಲಿ ಹಿಂಬಾಲಿಸುತ್ತವೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಆದುದರಿಂದ ಆಗಲೂ ಕೂಡ ಇವು ಈ ಜೀವಾತ್ಮನಿಗೆ ವಿಶೇಷಣವು. ಇವುಗಳಾದುದರಿಂದ ಆತ್ಮನಿಗೆ **ವಿಶೇಷಣೀಭೂತ**ವಾದವು ಎಂದು ಹೇಳಲ್ಪಟ್ಟಿರುತ್ತದೆ. **ದೇಹೇಂದ್ರಿಯಾದಿ** ಎಂಬಲ್ಲಿರುವ **ಆದಿ** ಪದದಿಂದ ಮನಸ್ಸು, ಪ್ರಾಣ, ಬುದ್ಧಿಗಳು ಹೇಳಲ್ಪಟ್ಟವು. ಆತ್ಮಾ ಇವುಗಳಿಗಿಂತ ಬೇರೆಯಾಗಿ ವಿಲಕ್ಷಣನು ; ಹೀಗೆ ಇವೆಲ್ಲಕ್ಕಿಂತ ವಿಲಕ್ಷಣನೆಂದು ಶ್ರೀ ಯಾಮುನೇಯರು, **"ದೇಹೇಂದ್ರಿಯ ಮನಃ ಪ್ರಾಣಧೀಭ್ಯೋನ್ಯೋ ಽನನ್ಯಸಾಧನಃ"** ಎಂಬ ಶ್ಲೋಕಾರ್ಥಮೂಲಕ ಅಪ್ಪಣೆ ಕೊಡಿಸಿರುತ್ತಾರೆ. **ಆತ್ಮಾ "ಅಹಂ"** ಎಂದು ತೋರಿಬರುವವನೆಂದಲೂ, ನನ್ನ ದೇಹ, ನನ್ನ ಕಣ್ಣು, ನನ್ನ ಮನಸ್ಸು ಇತ್ಯಾದಿಗಳಿಂದ ನಾನು ಎಂಬುವದು, ದೇಹ ಕಣ್ಣು ಮನಸ್ಸುಗಳಿಗಿಂತಲೂ ಭಿನ್ನವೆಂದು ಭಾವಿಸತಕ್ಕದ್ದು. ಆದರೆ **ನನ್ನ ಆತ್ಮಾ** ಎಂಬ ಪ್ರಯೋಗವೂ ಉಂಟಲ್ಲ, ಹಾಗಾದರೆ ನಾನು ಎಂಬುವದು ಆತ್ಮಾವಿಗಿಂತ ಬೇರೆಯೇ ಎಂದರೆ, ನನ್ನ ಆತ್ಮಾ ಎಂಬುವದರಿಂದ ಈ ದೇಹದಲ್ಲಿರುವ ಆತ್ಮಾ ಎಂಬ ಭಾವದಿಂದ ಹಾಗೆ ಪ್ರಯೋಗವೆಂದರಿಯತಕ್ಕದ್ದು. ಆದುದರಿಂದ ದೇಹೇಂದ್ರಿಯಾದಿಗಳಿಗಿಂತಲೂ ಆತ್ಮಾ **ವಿಲಕ್ಷಣ**ನೆಂದು ಹೇಳಲ್ಪಟ್ಟಿತು. ಹೇಗೆ ವಿಲಕ್ಷಣನೆಂದರೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಾದಿ ಗುಣಗಳಿಂದ ವಿಲಕ್ಷಣನೆಂಬ ಭಾವವು.

ಹೀಗೆ ಇಂತಹ ವೈಲಕ್ಷಣ್ಯವನ್ನು **ಕಣ್ಡು** – ತಿಳಿದು, **ಇವನುಡೈಯ** – ಈ ಜೀವಾತ್ಮನ, **ಪರಲೋಕಗಮನ** – ಸ್ವರ್ಗಕೈವಲ್ಯ ವೈಕುಂಠ ಲೋಕವನ್ನು ಕುರಿತು ಪ್ರಯಾಣ, ಮತ್ತು **ದೇಹಾಂತರಪ್ರಾಪ್ತಿ** – ಇನ್ನು ಬೇರೆ ಉತ್ತಮ ದೇಹಪ್ರಾಪ್ತಿ, ಇವುಗಳಿಗೆ **ಯೋಗ್ಯತ್ವ ನಿಶ್ಚಯತ್ತಾಲೆ** – ಅರ್ಹತೆಯುಂಟೆಂದು

ತ್ತಾಲೆ ಸಾಮಾನ್ಯೇನ ಲೋಕೋತ್ತೀರ್ಣ ಪುರುಷಾರ್ಥಯೋಗ್ಯರಾಯ್, (೨) ನರಕ ಪತನಾದಿ ಜನ್ಮಾನ್ತರ ಕ್ಲೇಶಜ್ಞಳಕ್ಕಞ್ಜಿ, ಅವತ್ತಿನ್ಮಾರ

ನಿಶ್ಚಯಿಸಬಹುದಾದುದರಿಂದ, **ಸಾಮಾನ್ಯೇನ** - ಸಾಮಾನ್ಯವಾಗಿ, **ಲೋಕೋತ್ತೀರ್ಣ ಪುರುಷಾರ್ಥಯೋಗ್ಯರಾಯ್** – ಈ ಲೋಕದಲ್ಲಿ ದೊರೆಯುವ ಪುರುಷಾರ್ಥಕ್ಕಿಂತಲೂ ಮೇಲಾದ ಪುರುಷಾರ್ಥಗಳನ್ನು ಹೊಂದಲು ಯೋಗ್ಯರಾಗಿ, **ಪ್ರವೃತ್ತರಾನವರ್ಗಳ್ ಮುಮುಕ್ಷುಕ್ಕಳಾನ ಅಧಿಕಾರಿಗಳ್** - ಹೀಗೆ ಪ್ರವೃತ್ತಿಯುಳ್ಳವರು ಮುಮುಕ್ಷುಗಳಾವ ಅಧಿಕಾರಿಗಳೆಂದು ಮುಂದೆ ಹೇಳುತ್ತಾರೆ.

ದೇಹವೇ ಆತ್ಮವಾಗಿದ್ದರೆ, ಪರಲೋಕಗಮನಾದಿಗಳ ಪ್ರಸಕ್ತಿಯೇ ಇಲ್ಲದೆ ಇರುತ್ತಿತ್ತು. ದೇಹಕ್ಕಿಂತ ವಿಲಕ್ಷಣವಾದುದರಿಂದ ಪರಲೋಕಗಮನ, ದೇಹಾನ್ತರಪ್ರಾಪ್ತಿಗೆ ಯೋಗ್ಯನೆಂದು ನಿಶ್ಚಯಿಸಬಹುದು. ಹಾಗೆಯೇ ಇಂದ್ರಿಯಾದಿಗಳೇ ಆತ್ಮವಾಗಿದ್ದರೆ, ಆ ಇಂದ್ರಿಯಗಳಿಗೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಗಳಿಲ್ಲವಾದುದರಿಂದ ಭೋಗಾರ್ಹವಾದ ಪರಲೋಕಗಮನಾದಿಗಳ ಪ್ರಾಪ್ತಿಯು ಸಂಭವಿಸಲಾರದು. ಆತ್ಮ ಇವುಗಳಿಗಿಂತ ವಿಲಕ್ಷಣವಾಗಿ ಜ್ಞಾತೃತ್ವ, ಭೋಕ್ತೃತ್ವಾದಿಗಳಿರುವದರಿಂದ ಪರಲೋಕ ಗಮನಾದಿಗಳಿಗೆ ಯೋಗ್ಯತೆಯುಂಟೆಂದು ನಿಶ್ಚಯಿಸಬಹುದೆಂಬ ತಾತ್ಪರ್ಯವು. ಇಲ್ಲಿಗಿಂತ ಮೇಲಾದ ಪುರುಷಾರ್ಥಗಳನ್ನು ಹೊಂದುವ ಯೋಗ್ಯತೆಯನ್ನು ಸಾಮಾನ್ಯವಾಗಿ ಹೊಂದಿರುವವನೂ ಕೂಡ ಉತ್ತರೋತ್ತರವೋಕ್ಪಾರ್ಥಿಯೇ ಆಗುವನೆಂಬ ಭಾವವು. **ಸಾಮಾನ್ಯ** ಶಬ್ದದಿಂದ, ಈ ಲೋಕದ ಪುರುಷಾರ್ಥಗಳಿಗಿಂತಲೂ ಮೇಲಾದವು ಹೇಳಲ್ಪಟ್ಟವು. **ವಿಶೇಷವಾದ ಲೋಕೋತ್ತೀರ್ಣವೇ** ಮೋಕ್ಷವು. ಆದುದರಿಂದ ತಾನು ದೇಹಾದಿಗಳಿಗಿಂತ ವಿಲಕ್ಷಣನೆಂದು ತಿಳಿದು, ತಾನು ಈಗಿರುವ ಸ್ಥಿತಿಗಿಂತಲೂ ಉತ್ತಮ ದೇಹ, ಮತ್ತು ಗತಿ ಇವುಗಳನ್ನು ಹೊಂದಲು ಯೋಗ್ಯನೆಂಬ ಜ್ಞಾನವು ಮುಮುಕ್ಷುವಿಗಿರಬೇಕೆಂಬ ಭಾವವು. ಮುಂದೆ ನಿಷಿದ್ಧಕರ್ಮಗಳಿಂದ ನಿವೃತ್ತನಾಗಿರತಕ್ಕದ್ದೆಂಬುವದನ್ನು ಪ್ರದೇಶಿಸುತ್ತಾರೆ.

೨. **ನರಕಪತನಾದಿ ಜನ್ಮಾನ್ತರಕ್ಲೇಶಜ್ಞಳಕ್ಕಞ್ಜಿ** – ನರಕದಲ್ಲಿ ಬೀಳುವದೇ ಮೊದಲಾದ ಬೇರೆಬೇರೆ ಪುನಃ ಜನ್ಮಗಳನ್ನೆತ್ತುವ ದುಃಖಗಳಿಗೆ ಭಯಪಟ್ಟು, **ಅವತ್ತಿನ್ಮಾರಣಜ್ಞಳಾನ** – ಅಂತಹ ದುರ್ಗತಿಗಳಿಗೆ ಕಾರಣಭೂತಗಳಾದ, **ಕರ್ಮಜ್ಞಳಿನ್ ನಿವೃತ್ತರಾಯ್** - ಅಂತಹ ನಿಷಿದ್ಧ ಕರ್ಮಗಳಿಂದ ದೂರೀಕೃತರಾಗಿರತಕ್ಕವರು ಮುಮುಕ್ಷುಗಳಾದ ಅಧಿಕಾರಿಗಳೆಂದು ಹೇಳುತ್ತಾರೆ. ಇದರಿಂದ ಅರ್ಥಪಂಚಕಾಧಿಕಾರದಲ್ಲಿ ಹೇಳಿದ ಪ್ರಾಪ್ತಿವಿರೋಧಿಗಳಿಂದ ನಿವೃತ್ತನಾಗಿರ

ಣಜ್ಞಾನ ಕರ್ಮಜ್ಞಾನಿಲ್ ನಿನ್ರುಮ್ ನಿವೃತ್ತರಾಯ್, (೩) ಆಧೇಯತ್ವ, ವಿಧೇಯತ್ವ, ಶೇಷತ್ವಾಲ್ಪಶಕ್ತಿತ್ವಾಣುತ್ವ ಜ್ಞಾನ ಸಂಶಯ ವಿಪರ್ಯಯ ದುಃಖಾದಿ ಯೋಗತ್ವಾ ಶುಭಾಶ್ರಯತ್ವಾದಿಗಳಾಲೇ ಯುಣ್ಣಾನ ವಿಶೇಷ್ಯಭೂತೇಶ್ವರವ್ಯಾವೃತ್ತಿ ನಿಶ್ಚಯತ್ತಾಲೇ ಭಗವತ್ಕೈಙ್ಕರ್ಯರೂಪವಾನ ಸ್ವರೂಪಪ್ರಾಪ್ತ ವೈಭವತ್ತೈ ಅಪೇಕ್ಷಿಕ್ಕುಯೋಗ್ಯರಾಯ್;

ತಕ್ಕದ್ದೆಂದು ಸೂಚಿಸಲ್ಪಟ್ಟಿತು. ಪ್ರಧಾನಪ್ರತಿತಂತ್ರಾಧಿಕಾರದಲ್ಲೂ, ಅರ್ಥಪಂಚಕಾಧಿಕಾರದಲ್ಲೂ, ತತ್ಪತ್ರಯಾಧಿಕಾರದಲ್ಲೂ, ಉಪಪಾದಿಸಲ್ಪಟ್ಟ ಜೀವೇಶ್ವರರುಗಳಿಗಿರುವ ವ್ಯತ್ಯಾಸ ಮತ್ತು, ಈಶ್ವರನು ಹೇಗೆ ವಿಲಕ್ಷಣನೆಂಬ ಜ್ಞಾನವು ಹೇಗೆ ಮುಮುಕ್ಷುವಿಗೆ ಆವಶ್ಯಕವೆಂಬುವದನ್ನು ಮುಂದೆ ತೋರ್ಪಡಿಸುತ್ತಾರೆ.

೩. ಜೀವಾತ್ಮನ **ಆಧೇಯತ್ವ**–ಪರಮಾತ್ಮನನ್ನೇ ಆಧಾರವಾಗಿ ಹೊಂದಿರುವಿಕೆ, ಆತನಿಗೇ ವಿಧೇಯತ್ವ, ಶೇಷತ್ವ, ಅಲ್ಪಶಕ್ತಿಯನ್ನು ಹೊಂದಿರುವಿಕೆ, ಅಣುತ್ವ ಮತ್ತು **ಜ್ಞಾನಸಂಶಯ ವಿಪರ್ಯಯ** - ಪ್ರಕೃತಿಸಂಬಂಧದಿಂದ ಪ್ರಾಪ್ತವಾಗುವ ಅಜ್ಞಾನ, ಅನ್ಯಥಾಜ್ಞಾನ, ವಿಪರೀತಜ್ಞಾನ, ಇವುಗಳೆಂದುಂಟಾಗುವ ದುಃಖವೇ ಮೊದಲಾದವುಗಳನ್ನು ಹೊಂದುವ ಯೋಗ್ಯತೆ, **ಅಶುಭಾಶ್ರಯತ್ವ** - ದಿವ್ಯಮಂಗಳವಿಗ್ರಹವೇ ಇಲ್ಲದೇ ಇರೋಣವು, ಇವೇ ಮೊದಲಾದವುಗಳೆಂದುಂಟಾಗುವ ಎಂದರೆ ತೋರಿಬರುವ **ವಿಶೇಷ್ಯಭೂತ** - ತಾನು ಸರ್ವೇಶ್ವರನಿಗೆ ಅಪೃಥಕ್ಸಿದ್ಧ ವಿಶೇಷಣವಾಗಿರುವದರಿಂದ ತನಗೆ ಆಧಾರರೂಪದಲ್ಲ ವಿಶೇಷ್ಯವಾಗಿರುವ, **ಈಶ್ವರವ್ಯಾವೃತ್ತಿ ನಿಶ್ಚಯತ್ತಾಲೆ** - ಈಶ್ವರನಿಗಿಂತಲೂ ಬೇರೆಯಾದವನೇ ವಿನಾ ಶಾಂಕರಾದಿಗಳು ಹೇಳುವ ಹಾಗೆ ಈಶ್ವರನೇ ಅಲ್ಲವು ಎಂಬ ನಿಶ್ಚಯ ಜ್ಞಾನದಿಂದ, **ಭಗವತ್ಕೈಙ್ಕರ್ಯರೂಪವಾನ** - ಸರ್ವೇಶ್ವರನಿಗೆ ಕೈಂಕರ್ಯರೂಪವಾದ, **ಸ್ವರೂಪಪ್ರಾಪ್ತವೈಭವತ್ತೈ** - ತನ್ನ ಸ್ವರೂಪಕ್ಕೆ ಯೋಗ್ಯವಾದ ಸಾಮ್ರಾಜ್ಯವನ್ನು, **"ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚತೇ'**, ಎಂದು ಕೈಂಕರ್ಯಸಾಮ್ರಾಜ್ಯಮಹಿಮೆಯನ್ನು ಅರಿತುದದರಿಂದಲೇ **"ಲಕ್ಷ್ಮಣೋ ಲಕ್ಷ್ಮಿಸಂಪನ್ನಃ** ಎಂದಪೇಕ್ಷಿಸಿದ ಲಕ್ಷ್ಮಣನ ಹಾಗೆ ಅಪೇಕ್ಷಿಸಲು ಯೋಗ್ಯರಾಗಿ, ಮುಮುಕ್ಷುಗಳಿರತಕ್ಕದೆಂಬ ಭಾವವು. ಜೀವಾತ್ಮನ ಆಧೇಯತ್ವ, ವಿಧೇಯತ್ವ ಶೇಷತ್ವಾದಿಗಳು **ಉಪೋದ್ಘಾತಾಧಿಕಾರದಲ್ಲೂ**, ಅಲ್ಪಶಕ್ತಿತ್ವ, ಅಣುತ್ವಾದಿಗಳು

---

(೧) ರಾಮಾ. ಅಯೋಧ್ಯಾ

(೪) (ಅ) ಸರ್ವಾಪೇಕ್ಷಿತ ಸಙ್ಗ್ರಹವಾನ ತಿರುಮನ್ತ್ರತ್ತೈಕೊಣ್ಡು ಸಾರತಮಾರ್ಥಙ್ಗಳೈಯನುಸನ್ಧಿಕ್ಕುಮ್ಪೋದು, ಪ್ರಥಮ ಪದತ್ತಿಲ್ ತೃತೀಯಾಕ್ಷರತ್ತಾಲೇ ಪ್ರತಿಪನ್ನವಾನ ಜ್ಞಾನತ್ತಾಲ್ಯನುಸನ್ಧಾನತ್ತಾ

ತತ್ವತ್ರಯಾಧಿಕಾರದಲ್ಲೂ, ಸವೇ೯ಶ್ವರನಿಂದ ವ್ಯಾವೃತ್ತಿಯು ಹಿಂದಿನ ನಾಲ್ಕು ಅಧಿಕಾರಗಳಲ್ಲೂ ಉಪಪಾದಿತಗಳಾಗಿರುವದರಿಂದ, ಆ ಜ್ಞಾನದಿಂದ ಮುಮುಕ್ಷುವಿಗೆ ಸರ್ವೇಶ್ವರ ಕೈಂಕರ್ಯವೇ ಸರಿಯಾದ ಸ್ವರೂಪವೆಂದು ಅದನ್ನೇ ಅಪೇಕ್ಷಿಸುವ ಯೋಗ್ಯತೆಯುಂಟಾಗುತ್ತದೆಂದು ಹೇಳಿ, ಅಂತಹ ಯೋಗ್ಯತೆಯುಳ್ಳವನೇ ಮುಮುಕ್ಷುವು ಎಂದು ಅಪ್ಪಣೇಕೊಡಿಸಿರುತ್ತಾರೆ. **ಈಶ್ವರವ್ಯಾವೃತ್ತಿ** ಹೇಗೆಂದರೆ ಜೀವನು ಆಧೇಯನು, ಈಶ್ವರನು ಆಧಾರನು; ಜೀವನು ವಿಧೇಯನು. ಈಶ್ವರನು ನಿಯಾಮಕನಾಗಿ ಸ್ವತಂತ್ರನು; ಜೀವನು ಶೇಷನು, ಈಶ್ವರನು ಶೇಷಿಯು; ಜೀವನು ಅಲ್ಪಶಕ್ತನು, ಈಶ್ವರನು ಸರ್ವಶಕ್ತನು; ಜೀವನು ಅಣುವು, ಸರ್ವೇಶ್ವರನು ವಿಭುವು; ಜೀವನು ಈ ಪ್ರಕೃತಿಸಂಬಂಧದಿಂದ ಜ್ಞಾನಸಂಶಯವಿಪರ್ಯಯಯುಕ್ತನು, ಈಶ್ವರನು ಸರ್ವಜ್ಞನು; ಜೀವನು ಈ ಲೀಲಾವಿಭೂತಿಯಲ್ಲಿ ದುಃಖಾದಿಯೋಗ್ಯನು, ಈಶ್ವರನು ಆನಂದಮಯನು; ಜೀವನು ಇಲ್ಲಿ ಅಶುಭಾಶ್ರಯನು, ಈಶ್ವರನು ಶುಭಾಶ್ರಯನು; ಹೀಗೆ ಈಶ್ವರನು ಜೀವಸಾಮಾನ್ಯಕ್ಕಿಂತಲೂ ಮತ್ತು ಬದ್ಧಜೀವನಿಗಿಂತಲೂ ವಿಲಕ್ಷಣನೆಂಬ ಭಾವವು. ಆದುದರಿಂದ ತನ್ನ ಸ್ವರೂಪವು ಅಂತಹ ವಿಲಕ್ಷಣನಾದವನಿಗೆ ಕೈಂಕರ್ಯಮಾಡುವದೇ ಎಂದು ಹೇಳಿ, ಅದೇ ತನಗೆ ಪರಮ ಸಾಮ್ರಾಜ್ಯವು. ಹಾಗೆ ಭಾವಿಸುವನೀಗ ಮುಮುಕ್ಷುವು ಎಂಬ ತಾತ್ಪರ್ಯವು.

೪. ಮುಂದೆ ಅಹಂಕಾರ ಮಮಕಾರಗಳನ್ನು ತೊರೆದಿರುವವನೇ ಮುಮುಕ್ಷುವಾಗಿರಲು ಅಧಿಕಾರಿ ಎಂದು ಹೇಳಲುಪಕ್ರಮಿಸಿ, ಅದು ಮೂಲಮಂತ್ರದ ಜ್ಞಾನದಿಂದ ಹೇಗೆ ತೊಲಗುತ್ತದೆಂದು ಉಪದೇಶಿಸುತ್ತಾರೆ. ಐದು ವಿಧ ಅಹಙ್ಕಾರ ಮಮಕಾರಗಳು ಉಂಟಾಗಬಹುದು, ಅದು ಹೇಗೆಂದು ತೋರಿಸಿ, ಅಂತಹ ಅಹಙ್ಕಾರ ಮಮಕಾರಗಳಿಲ್ಲದವನು ಮುಮುಕ್ಷುವೆಂದು ಹೇಳುತ್ತಾರೆ.

(ಅ) ಸರ್ವಾಪೇಕ್ಷಿತಸಙ್ಗ್ರಹವಾನ – ಸರ್ವಂ ಅಷ್ಟಾಕ್ಷರಾಂತಸ್ಥಂ ಸಮಸ್ತ ಅಭಿಪ್ರಾಯಗಳೂ ಅಷ್ಟಾಕ್ಷರಮನ್ತ್ರದಲ್ಲಿವೆ ಎಂದು ಹೇಳಿರುವದರಿಂದ, ಬೇಕಾದ ಎಲ್ಲಾ ಉಪದೇಶಗಳಿಗೂ ಸಂಗ್ರಹವಾಗಿರುವ, **ತಿರುಮನ್ತ್ರತ್ತೈಕೊಂಡು** – ಮೂಲಮಂತ್ರದ ಮೂಲಕ, **ಸಾರತಮಾರ್ಥಙ್ಗಳೈ ಅನುಸಂಧಿಕ್ಕುಂಪೋದು** - ಉತ್ಕೃಷ್ಟವಾದ ಅಭಿಪ್ರಾಯಗಳನ್ನು ಹಿಂದೆ ಅರ್ಥಪಂಚಕಾಧಿಕಾರದಲ್ಲೂ ಮುಂದೆ ಮೂಲಮನ್ತ್ರಾಧಿಕಾರದಲ್ಲೂ, ಅನುಸಂಧಾನಮಾಡುವಾಗ, **ಪ್ರಥ**

ಲೇ ದೇಹ ತದನುಬಂಧಿಗಳಿಲ್ ವರುವ್ ಅಹಙ್ಕಾರ ಮಮಕಾರಙ್ಗಳೆ ಯುವ್, (ಆ) ಪ್ರಥಮಾಕ್ಷರತ್ತಿಲ್ ಲುಪ್ತ ಚತುರ್ಥಿಯಾಲೇ ಪ್ರತಿ ಪನ್ನವಾನ ತಾದರ್ಥ್ಯತ್ತಾಲೆ ದೇಹಾತಿರಿಕ್ತಾತ್ಮಸ್ವರೂಪತದ್ಗುಣಙ್ಗಳಿಲ್ "ತ್ವಂ ಮೇ z ಹಂ ಮೇ" ಎಙ್ಗಿರ ಶ್ಲೋಕತ್ತಿಲ್ ಪಡಿಯೇ ತನಕ್ಕುರಿ ಮೈ ಯುಣ್ಣಾಕ ನಿನ್ಮೈಕ್ಕಿರ ಅಹಙ್ಕಾರ ಮಮಕಾರಙ್ಗಳೆಯುವ್, (ಇ) ಮಧ್ಯಮಾಕ್ಷರತ್ತಿಲವಧಾರಣಾರ್ಥತ್ತಾಲೆ "ಅನ್ಯಶೇಷಭೂತೋಹಂ"

ಮಹದತ್ತಿಲ್ ತೃತೀಯಾಕ್ಷರತ್ತಾಲೇ-ಓಂ ಎಂಬ ಪದದಲ್ಲಿರುವ ಮೂರನೇ ಅಕ್ಷರವಾದ ಮಕಾರದಿಂದ, **ಪ್ರತಿಪನ್ನವಾನ**-ತೋರಿಬರುವ, **ಜ್ಞಾನತ್ವಾದ್ಯನು ಸಂಧಾನತ್ತಾಲೇ**-ಜ್ಞಾನತ್ವವೇ ಮೊದಲಾದ ಗುಣಗಳುಳ್ಳವನೆಂಬ ಅನುಸಂಧಾನ ದಿಂದ, ಇಲ್ಲಿ **ಆದಿ**ಪದದಿಂದ ಆನಂದತ್ವವೂ ಹೇಳಲ್ಪಟ್ಟಿತು; **ದೇಹ ತದನುಬಂ ಧಿಗಳಿಲ್ ವರುವ್**-ದೇಹ ಮತ್ತು ದೇಹಕ್ಕೆ ಅನುಬಂಧಿಗಳಾದ, ಗೃಹಪುತ್ರಾದಿ ಗಳಲ್ಲಿ ತೋರಿಬರುವ, ಅಹಙ್ಕಾರ ಮಮಕಾರಗಳನ್ನು, **ಅಡಿಯರತ್ತು**, ಸಮೂಲ ವಾಗಿ ಛೇದಿಸತಕ್ಕದ್ದು ಎಂದು ಮುಂದೆ ಹೇಳಲ್ಪಡುತ್ತದೆ. ಮೂಲಮನ್ತ್ರದ ಮಕಾ ರವಾಚ್ಯನಾದ ಜೀವನ ಜ್ಞಾನತ್ವ ಆನಂದತ್ವಾದ್ಯನುಸಂಧಾನದಿಂದ, ದೇಹದಲ್ಲೂ ಗೃಹವಿತ್ತದಾರಪುತ್ರಾದಿಗಳಲ್ಲೂ ಮಮತೆಯು ತೊಲಗುತ್ತದೆಂದು ಹೇಳಿರುತ್ತದೆ; ಅದುಹೇಗೆಂದರೆ; **ಮನಜ್ಞಾನೇ** ಎಂಬಧಾತುವಿನಿಂದಲೂ, **ಮುದಿಹರ್ಷೇ** ಎಂಬ ಧಾತುವಿನಿಂದಲೂ, ಜೀವನು ಜ್ಞಾನಾನಂದಸ್ವರೂಪನೂ, ಜ್ಞಾನಾನನ್ದಗುಣ ಕನೂ ಎಂಬುವದು ವ್ಯಕ್ತಪಡುತ್ತದೆ. ಆದುದರಿಂದ ಜಡವಾದ ಮತ್ತು ದುಃಖಕೆ ಹೇತುಭೂತವಾದ ದೇಹಕ್ಕಿಂತಲೂ ತದನುಬನ್ಧಿಗಳಿಗಿಂತಲೂ ವಿಲಕ್ಷಣನ ತಾನು; ಆದುದರಿಂದ ನಶ್ವರಗಳಾದ ಅವುಗಳಲ್ಲಿ ಮಮತಾಯುಕ್ತವಲ್ಲವೆಂಬಭಿ ಪ್ರಾಯ ಉಂಟಾಗುತ್ತದೆಂಬ ತಾತ್ಪರ್ಯವು. ಎರಡನೇ ವಿಧವಾದ ಅಹಙ್ಕಾರ ಮಮಕಾರಗಳಾವುವೆಂದು ತಿಳಿಸುತ್ತಾರೆ.

(ಆ) ಪ್ರಥಮಾಕ್ಷರತ್ತಿಲ್ ಲುಪ್ತಚತುರ್ಥಿಯಾಲೇ ಪ್ರತಿಪನ್ನ

ಮೊದಲನೇ ಅಕ್ಷರವಾದ ಅಕಾರದಲ್ಲಿ ತೋರುವ ಲೋಪಹೊಂದಿದಚತುರ್ಥಿಯಿಂ ದುಂಟಾಗುವ **ತಾದರ್ಥ್ಯತ್ತಾಲೇ - ಆಯ್ಯೈವ** ಎಂಬ ಯೋಜನೆಯಿಂದ ಊ ಹಿಸಬಹುದಾದ ಈ ಜೀವಾತ್ಮನು ಪರಮಾತ್ಮನಿಗೆ ಶೇಷಭೂತನು ಎಂಬ ಜ್ಞಾನದಿಂದ, **ದೇಹಾತಿರಿಕ್ತಾತ್ಮ ಸ್ವರೂಪತದ್ಗುಣಙ್ಗಳಿಲುವ್** - ದೇಹ ಕ್ಕಿಂತಲೂ ವಿಲಕ್ಷಣವಾದ ಜೀವಾತ್ಮಸ್ವರೂಪತದ್ಗುಣಗಳನ್ನು, **ತ್ವಂಮೇ s ಹಂ ಮೇ** ಎಂಬ ಶ್ರೀ ಪರಾಶರಭಟ್ಟರ ಶ್ಲೋಕದಲ್ಲಿ ಹೇಳಿರುವ ಹಾಗೆ, **ತನಕ್ಕುರುವೆ**

ಯುಷ್ಮಾಕ - ತನಗೆ ಸ್ವಾತಂತ್ರ್ಯ ಉಂಟಾದ ಹಾಗೆ, ಉರಿಮೆ ಎಂಬುವದಕ್ಕೆ ಶೇಷತ್ವವೆಂದೂ ಅರ್ಥಮಾಡಿರುತ್ತಾರೆ, ಆಗಲೂ ದೇಹ ಮೊದಲಾದವು ತನಗೆ ಶೇಷಭೂತವು ಎಂಬರ್ಥವು, **ನಿನ್ಯೈಕ್ಕರ** - ಅಭಿಪ್ರಾಯಪಡುವ, ಅಹಙ್ಕಾರ ಮಮಕಾರಗಳನ್ನೂ, **ಅಡಿಯುರೈತ್ತು** ಎಂಬಭಿಪ್ರಾಯವು. **ಮಃ ಆಯ್ಯೈವ** – ಎಂಬರ್ಥವು ಪ್ರಣವದಲ್ಲಿ ತೋರಿಬರುವದರಿಂದ ತಾನು ದೇಹಾದಿಗಳಿಗಿಂತ ವಿಲಕ್ಷಣನೆಂಬುವದು ತೋರಿಬರುತ್ತದೆ. ಆಗ ತಾನು ದೇಹಾದಿಗಳಿಗೆ ಶೇಷಿಯಾಗಿ ತಾನು ಸ್ವತಂತ್ರನೆಂಬ ಅಹಂಕಾರ ಮಮಕಾರಗಳು "**ತ್ವಂ ಮೇಽಹಂ ಮೇ**" ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುವ ಹಾಗೆ ಉಂಟಾಗುತ್ತವೆ ಎಂಬ ತಾತ್ಪರ್ಯವು. ಇದನ್ನೂ ಕೂಡ ಸಮೂಲವಾಗಿ ಛೇದಿಸತಕ್ಕುದೆಂದು ಹೇಳುತ್ತಾರೆ. "**ತ್ವಂಮೇಽಹಂಮೇ**" ಎಂಬ ಶ್ಲೋಕಾರ್ಥಕ್ಕೆ ಹಿಂದೆ ೪೨ನೆಯ ಪುಟ ನೋಡಿ.

"**ತ್ವಂ ಮೇಽಹಂ ಮೇ ಕುತಸ್ತತ್ತದಪಿ ಕುತ ಇದಂ ವೇದಮೂಲ ಪ್ರಮಾಣಾ । ದೇತಚ್ಚಾನಾದಿಸಿದ್ಧಾದನುಭವವಿಭವಾತ್ತರ್ಹಿ ಸಾಕ್ಷ್ಯೇಶ ಏವ ॥ ಕ್ವಾಕ್ಷ್ಯೇಶಃ ಕಸ್ಯ ಗೀತಾದಿಷು ಮಮ ವಿದಿತಃ ಕೋಽತ್ರ ಸಾಕ್ಷೀ । ಸುಧೀಸ್ಯಾದ್ಭಂತ ತ್ವತ್ಪಕ್ಷಪಾತೀ ಸ ಇತಿ ನೃಗಲಹೇಮ್ನ್ಯಗ್ಯಮುದ್ಯಸ್ಥವತ್ವಂ ॥**"

ಎಂಬುವದು ಪೂರ್ಣ ಶ್ಲೋಕವು. ಶ್ರೀ ರಂಗನಾಥನು "**ತ್ವಂ ಮೇ**" ನೀನು ನನ್ನವನೆಂದು ಹೇಳಿದರು. ಅದಕ್ಕೆ ಜೀವಾತ್ಮನು "**ಅಹಂ ಮೇ**" ನಾನು ನನ್ನವನೇ ಎಂದು ಪ್ರತ್ಯುತ್ತರಕೊಟ್ಟನು. ಇದಕ್ಕೆ ಶ್ರೀ ರಂಗನಾಥನು, **ಕುತಸ್ತತ್** - ಅದು ಹೇಗೆ ಎಂದು ಕೇಳಿದನು. ಅದಕ್ಕೆ ಜೀವಾತ್ಮನು, **ತದಪಿಕುತಃ** ನೀನು ನನ್ನವನು ಎಂದು ಹೇಳಿದೆಯಲ್ಲಾ ಅದು ತಾನೆ ಹೇಗೆ ಎಂದು ರಂಗನಾಥನನ್ನು ಕೇಳಿದನು; **ಇದಂ ವೇದಮೂಲಪ್ರಮಾಣಾತ್**-ಇದು ವೇದಮೂಲಗಳಾದ ಉಪನಿಷತ್ತುಗಳಲ್ಲಿರುವ"**ಪತಿಂ ವಿಶ್ವಸ್ಯಾತ್ಮೇಶ್ವರಂ**""**ಯಸ್ಯ ಆತ್ಮಾ ಶರೀರಂ**"ಎಂಬಿವೇ ಮೊದಲಾದ ಪ್ರಮಾಣಗಳಿಂದ ತೋರಿಬರುತ್ತದೆಂದು ರಂಗನಾಥನ ಪ್ರತ್ಯುತ್ತರವು. **ಏತಚ್ಚಾನಾದಿಸಿದ್ಧಾತ್, ಅನುಭವವಿಭವಾತ್** ನಿಮಗೆ ಪ್ರಮಾಣದ ಒಂದು ಬಲವಿದ್ದರೆ, ನನಗೆ ಎರಡು ಬಲವುಂಟು. ಒಂದನೇದು, ಇದ್ದು ಅನಾದಿಯಾಗಿ ನನಗೆ ಬಂದುದು; ಎರಡನೇದು, ಬಹುಕಾಲದಿಂದ ಅನುಭವದಲ್ಲಿರುವದು; ಆದುದರಿಂದ ಬಹುಕಾಲಾನುಭವವು ಪ್ರಮಾಣಕ್ಕಿಂತ ಪ್ರಬಲತರವಾದುದೆಂದು ಜೀವಾತ್ಮನು ಹೇಳಲು, ಅದಕ್ಕೆ ಪರಮಾತ್ಮನು **ತರ್ಹಿ ಸಾಕ್ಷ್ಯೇಶ ಏವ** ಹಾಗಾದರೆ ಕೋರ್ಟಿನಲ್ಲಿ ವಿವಾದಕ್ಕೆ ಅರ್ಹವಾದುವೆಂದು ತಿಳಿಯಪಡಿಸಲು, ಅದಕ್ಕೆ ಜೀವಾತ್ಮನು, **ಕ್ವಾಕ್ಷ್ಯೇಶಃ ಕಸ್ಯ** - ಎಲ್ಲಿ ಯಾರಿಂದ ವಿವಾದಮಾಡ

ಎನ್ನುವ್, "ಮಮಾನ್ಯಶ್ಶೇಷೀ" ಎನ್ನುವ್ ವರುವ್ ಅಹಙ್ಕಾರಮಮಕಾರಙ್ಗಳೈಯುವ್, (ಈ) ಮಧ್ಯಮಪದತ್ತಿಲ್ ಪ್ರತಿಪನ್ನಮಾನ

ಲ್ಪಟ್ಟಿತೆಂದು ಪ್ರಶ್ನಿಸಿದನು. "**ಗೀತಾದಿಷು ಮಮ**" ಎಂದು ಸರ್ವೇಶ್ವರನು ಆ ಪ್ರಶ್ನೆಗೆ ಉತ್ತರಕೊಟ್ಟನು; ಗೀತಾದಿಗಳಲ್ಲಿ,

"**ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ ।**
ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ॥"

ಎಂದು ನನ್ನ ಹೇಳಿಕೆಯೇ ಇರುತ್ತದೆ ಎಂಬಭಿಪ್ರಾಯವು. ಹಾಗಾದರೆ ನಿಮಗೆ ಸಾಕ್ಷಿಯಾರು "**ಕೋತ್ರ ಸಾಕ್ಷೀ**" ಎಂದು ಜೀವನು ಕೇಳುತ್ತಾನೆ. ಅದಕ್ಕೆ ಸರ್ವೇಶ್ವರನು **ಸುಧೀಸ್ಯಾತ್** - ಒಳ್ಳೇ ಜ್ಞಾನಿಯಾದ ಅರ್ಜುನ ಪ್ರಭೃತಿಗಳು ಎಂಬ ಭಾವದಿಂದ ಹೇಳಲು, ಅದಕ್ಕೆ ಜೀವಾತ್ಮನು **ಹಂತ ತ್ವತ್ಪಕ್ಷಪಾತೀ**- ಆಹ ಒಳ್ಳೇ ಸಾಕ್ಷಿ ತಂದಿರಿ, **ಜ್ಞಾನೀತ್ವಾತ್ಮೈವ ಮೇ ಮತಂ** ಎಂದು ನೀವೇ ಹೇಳಿ ಕೊಂಡಿರುವ ಮೇರಿಗೆ ನಿಮ್ಮ ಪಕ್ಷಪಾತಿಯೇ ನಿಮಗೆ ಸಾಕ್ಷಿಯಾದ ನಂತರ ಒಳ್ಳೇ ಯಾಥಾರ್ಥ್ಯ ಸಾಧಿಸಿದ ಹಾಗಾಯಿತೆಂದು ಮೂದಲಿಸಿದನು. ಹೀಗೆ, **ನೃಕಲಹೇ** ಜೀವಾತ್ಮನೊಂದಿಗೆ ನಡೆದ ನಿವಾದದಲ್ಲಿ, **ಮೃಗ್ಯಮಧ್ಯಸ್ಥವತ್ಸ್ವಶಃ** - ಮಧ್ಯಸ್ಥಕ್ಕೆ ಯಾರೂ ಇಲ್ಲದೆ ಒದ್ದೀಬಟ್ಟಿಉಟ್ಟುಕೊಂಡು ಪ್ರಮಾಣಮಾಡಿ ಸಾಧಿಸುತ್ತೇನೆಂದು ಸಾಧಿಸುತ್ತೀಯೋ ಎಂಬುವ ಹಾಗೆ ಅಭಿಷೇಕಮಾಡಿಕೊಂಡು ನಿಂತಿರುತ್ತೀಯೆ ಎಂಬ ತಾತ್ಪರ್ಯವು. ಇಂತಹ ಸ್ವತಂತ್ರಾತ್ಮಭ್ರಮೆಯನ್ನು, **ಆಯ್ಯೈವ** ಎಂಬಲ್ಲಿ ತೋರುವ **ತಾದರ್ಥ್ಯ** ಜ್ಞಾನದಿಂದ ಛೇದಿಸತಕ್ಕುದೆಂಬ ಭಾವವು.

(ಇ) ಒಂದು ವೇಳೆ ತಾನು ಸ್ವತನ್ತ್ರನೆಂಬ ಅಹಂಕಾರಮಮಕಾರಗಳು ತೊಲಗಿದರೂ, ತಾನು ಇತರರಿಗೂ ಶೇಷನೆಂಬ ಭ್ರಮೆಯು ಅನುವರ್ತಿಸಬಹುದು ಎಂದ್ ಮುಂದೆ ಹೇಳಿ ಅಂತಹ ಅಹಂಕಾರ ಮಮಕಾರಗಳೂ ಸಮೂಲವಾಗಿ ತೊಲಗತಕ್ಕ ದ್ದೆಂಬುವದನ್ನೂ ಅದು ಯಾವ ಜ್ಞಾನದಿಂದ ತೊಲಗಬಹುದೆಂಬುವದನ್ನೂ ಉಪದೇಶಿಸುತ್ತಾರೆ. ತಾನು, "**ಅನ್ಯಶೇಷಭೂತೋಽಹಂ**" ತಾನು ಪರಮಾತ್ಮನಲ್ಲದೆ ಇತರರಾದ ಬ್ರಹ್ಮರುದ್ರಾದಿಗಳಿಗೆ ಶೇಷಭೂತನೆಂದೂ, "**ಮಮಾನ್ಯಶ್ಶೇಷೀ**" ನನಗೆ ಪರಮಾತ್ಮನಲ್ಲದೆ ಇನ್ನೊಬ್ಬನು ಶೇಷಿಯು ಎಂದೂ, **ವರುವ್ ಅಹಂಕಾರ ಮಮಕಾರಙ್ಗಳೈಯುವ್** - ಉಂಟಾಗುವ ಅಹಂಕಾರ ಮಮಕಾರಗಳನ್ನು, **ಮಧ್ಯಮಾಕ್ಷರತ್ತಿಲವಧಾರಣಾರ್ಥತ್ತಾಲೆ** - ಮಧ್ಯಮಾಕ್ಷರವಾದ ಉಕಾರದ ಅರ್ಥವಾದ ಅವಧಾರಣದಿಂದ, **ಆಯ್ಯೈವ** - ಆ ಅಕಾರವಾಚ್ಯನಾದ ಶ್ರೀಮನ್ನಾರಾಯಣನಿಗೇ ಶೇಷಭೂತನು, ಇನ್ನು ಯಾರಿಗೂ ಅಲ್ಲವು ಎಂಬ ಜ್ಞಾನ

ನಿಷೇಧವಿಶೇಷತ್ವಾತ್ಪಲೇ ಸ್ವರಕ್ಷಣ ವ್ಯಾಪಾರತ್ವೈಪ್ಪತ್ತ ವರುಮ್ ನಿರ ಪೇಕ್ಷ್ಯ ಸ್ವಾತಂತ್ರ್ಯ ನಿರುಪಾಧಿಕ ಶೇಷಿತ್ವಾಭಿಮಾನ ರೂಪಜ್ಞಾನ ಅಹ ಜ್ಕಾರನುಮಕಾರಜ್ಞಳೈಯುಮ್, (ಎ) ಇಂದ ನಿಷೇಧ ಸಾಮರ್ಥ್ಯನ್ತ ನ್ನಾಲೇ ತೃತೀಯಪದತ್ತಿಲ್ ಚತುರ್ಥಿಯಾಲಭಿಪ್ರೇತವಾಯ್ ಭಾವಿ

ದಿಂದ, **ಅಡಿಯುರೈತ್ತು** - ಆಮೂಲಾಗ್ರವಾಗಿ ಛೇದಿಸಿ, ಹೀಗೆ ಮುಮುಕ್ಷುಗಳು ಪ್ರತಿಷ್ಠಿತಜ್ಞಾನಯುಕ್ತರಾಗಿರಬೇಕೆಂದು ಹೇಳುತ್ತಾರೆ.

(**ಈ**) ಮುಂದೆ ತನ್ನ ರಕ್ಷಣೆಯ ವಿಷಯದಲ್ಲಿ ತಾನೇ ಸ್ವತಂತ್ರಿಸಿ ರಕ್ಷಿಸಿಕೊಳ್ಳುವನೆಂಬ ಅಹಂಕಾರವೂ, ತಾನೇ ನಿರುಪಾಧಿಕ ಶೇಷಿಯು ಎಂಬ ಮಮಕಾರವೂ ಮುಮುಕ್ಷುವಾದವನಿಗೆ ತೊಲಗತಕ್ಕದ್ದೆಂದೂ, ಅಂತಹ ಅಹಂಕಾರ ಮಮಕಾರಗಳು, **ನಮಃ** ಎಂಬ ಪದವನ್ನು ಸಖಂಡವಾಗಿಮಾಡಿ **ಮಃ ನ**, ಸ್ವರಕ್ಷಣೆಯಲ್ಲಿ ಸಾಮರ್ಥ್ಯವು, **ಮಃ** ನನಗೆ, **ನ** - ಇಲ್ಲವು ಎಂಬ ನಿಷೇಧಿಸುವ ವಿಶೇಷಾಭಿಪ್ರಾಯದ ಜ್ಞಾನದಿಂದ ತೊಲಗುತ್ತದೆಂದೂ, ಅಂತಹ ಜ್ಞಾನಯುಕ್ತನು ಮುಮುಕ್ಷುವು ಎಂದು ಹೇಳುತ್ತಾರೆ. **ಮಧ್ಯಮಪದತ್ತಿಲ್ ಪ್ರತಿಪನ್ನವಾನನಿಷೇ ಧವಿಶೇಷತ್ತಾಲೆ** - ಮಧ್ಯಮಪದವಾದ **ನಮಃ** ಎಂಬುವ ತನ್ನ ರಕ್ಷಣೆಯ ಶಕ್ತಿಯನ್ನು ನಿಷೇಧಿಸಿರುವದರಿಂದ, **ಸ್ವರಕ್ಷಣವ್ಯಾಪಾರತ್ತೈಪ್ಪತ್ತ ವರುಮ್**-ತನ್ನ ರಕ್ಷಣೆ ಮಾಡಿಕೊಳ್ಳುವ ವ್ಯಾಪಾರ ವಿಷಯದಲ್ಲುಂಟಾಗುವ, **ನಿರಪೇಕ್ಷಸ್ವಾತಂತ್ರ್ಯ** - ಇನ್ನೊಬ್ಬರ ಅಪೇಕ್ಷೆಯಿಲ್ಲದೆ ತಾನೇ ಸ್ವತಂತ್ರನೆಂಬ, ಮತ್ತು **ನಿರುಪಾಧಿಕಶೇಷಿತ್ವ** - ಏನೊಂದು ಉಪಾಧಿಯೂ ಇಲ್ಲದೇ ಇರುವ ತನ್ನ ರಕ್ಷಣೆಯಲ್ಲಿ ತನಗೆ ಸ್ವಾತಂತ್ರ್ಯವು, ತನಗೆ ತಾನೇ ಶೇಷಿಯು, ಎಂಬ **ಅಭಿಮಾನ ರೂಪಜ್ಞಾನ** - ಗರ್ವರೂಪಗಳಾದ ಅಹಂಕಾರ ಮಮಕಾರಗಳನ್ನು **ಅಡಿಯುರೈತ್ತು** - ಎಂದು ಅನ್ವಯವು. ನನಗೆ ನಿರಪೇಕ್ಷವಾದ ಸ್ವಾತಂತ್ರ್ಯವುಂಟು, ನಾನೇ ನಿರುಪಾಧಿಕ ಶೇಷಿಯು ಎಂಬುವದು ಅಹಂಕಾರವು, ಈ ಸ್ವಾತಂತ್ರ್ಯವು **ನನ್ನದು**, ಈ ಶೇಷಿತ್ವವೂ ನನ್ನದು ಎಂಬುವದು ಮಮಕಾರವೆಂಬಭಿಪ್ರಾಯವು. ಇವುಗಳನ್ನು ಆಮೂಲಾಗ್ರವಾಗಿ ಮುಮುಕ್ಷುವಾದವನು ಛೇದಿಸತಕ್ಕದ್ದು.

(ಎ) ಇನ್ನ ನಿಷೇಧ ಸಾಮರ್ಥ್ಯಂತನ್ನಾಲೆ - ಈ ಮೇಲೆ ಹೇಳಿದ ತನ್ನ ರಕ್ಷಣೆಯಲ್ಲಿ ತನಗೆ ಶಕ್ತಿಯಿಲ್ಲವೆಂಬ ನಿಷೇಧ ಸಾಮರ್ಥ್ಯದಿಂದ, **ತೃತೀಯಪದತ್ತಿಲ್** - ನಾರಾಯಣಾಯ ಎಂಬ ಮೂರನೇ ಪದದಲ್ಲಿರುವ, **ಚತುರ್ಥಿಯಾಲಭಿಪ್ರೇತವಾಯ್** - ಚತುರ್ಥೀವಿಭಕ್ತಿಯಿಂದ ತೋರಿಬರುವ, **ಭಾವಿಯಾನ ಕೈಙ್ಕರ್ಯಪರ್ಯನ್ತಾನುಭವಮಾಕಿರಫಲತ್ತೈ** - ಮುಂದೆಯುಂಟಾಗುವ ಸರ್ವೇ

ಯಾನ ಕೈಙ್ಕರ್ಯ ಪರ್ಯನ್ತಾನುಭವ ಮಾಕಿರ ಫಲತ್ತೈ ಪತ್ತವಿಪ್ಪೋದು ಫಲಾಂತರಾನುಭವ ನ್ಯಾಯತ್ತಾಲೇ ವರುಮ್, ಸ್ವಾಧೀನ ಕರ್ತೃತ್ವ ಭೋಕ್ತೃತ್ವೆ ಸ್ವಾರ್ಥಕರ್ತೃತ್ವಭೋಕ್ತೃತ್ವ ಭ್ರಮರೂಪಜ್ಞಾನ, ಅಹ

ಶ್ವರನ ಕೈಂಕರ್ಯಪರ್ಯನ್ತವಾದ ಭಗವದನುಭವರೂಪವಾದ ಫಲವನ್ನು, **ಪತ್ತ** - ಕುರಿತು, **ಇಪ್ಪೋದು** - ಈಗ ಮುಮುಕ್ಷುದೆಶೆಯಲ್ಲಿ, **ಫಲಾನ್ತರಾನುಭವನ್ಯಾಯತ್ತಾಲೇವರುಮ್** - ಇತರ ಫಲಗಳಾದ ಐಶ್ವರ್ಯಾದಿಗಳನ್ನು ಅನುಭವಿಸುವ ಕಾಲದಲ್ಲಿ ಹೇಗೆ ಬರುತ್ತದೋ ಹಾಗೆ, ಆ ಪ್ರಕಾರವಾಗಿ ಉಂಟಾಗುವ, **ಸ್ವಾಧೀನಕರ್ತೃತ್ವ ಭೋಕ್ತೃತ್ವ** - ತನಗೆ ಸ್ವಾಧೀನವಾಗಿಯೇ ತನಗೆ ಕರ್ತೃತ್ವ ಭೋಕ್ತೃತ್ವಗಳುಂಟೆಂಬ ಭ್ರಮೆ ಏನು, ಮತ್ತು **ಸ್ವಾರ್ಥಕರ್ತೃತ್ವಭೋಕ್ತೃತ್ವ**- ತನ್ನ ಪ್ರಯೋಜನಕ್ಕಾಗಿಯೇ ತನಗೆ ಕರ್ತೃತ್ವ ಭೋಕ್ತೃತ್ವಗಳುಂಟೆಂಬ ಭ್ರಮೆ ಏನು, ಇಂತಹ ಅಹಂಕಾರ ಮಮಕಾರಗಳನ್ನೂ, **ಅಡಿಯರತ್ತು**-ಸಮೂಲವಾಗಿ ಛೇದಿಸಿ ಎಂದು ಮುಂದೆ ಇರುತ್ತದೆ.

ಇಲ್ಲಿ ಸಖಂಡ ನಮಶ್ಶಬ್ದವನ್ನು ತೃತೀಯಪದವಾದ ನಾರಾಯಣಾಯ ಎಂಬುವದಕ್ಕೆ ಅನ್ವಯಿಸಿದರೆ, ಚತುರ್ಥೀ ವಿಭಕ್ತಿಯಿಂದ ತೋರಿಬರುವ ಸರ್ವವಿಧ ಕೈಂಕರ್ಯಗಳೂ, ಶ್ರೀಮನ್ನಾರಾಯಣನಿಗೇನೇ ವಿನಾ **ಮಃ ನ**-ನನಗಲ್ಲವು ಎಂಬ ಫಲವುಂಟಾಗುತ್ತದೆ; ಇದನ್ನೇ **"ತೃತೀಯಪದತ್ತಿಲ್ ಚತುರ್ಥಿಯಾಲ್ ಅಭಿಪ್ರೇತವಾಗಿ"** ಮುಂದೆ ಉಂಟಾಗುವ ಕೈಂಕರ್ಯಾನುಭವವೆಂದು ಹೇಳುತ್ತಾರೆ. ಅಂತಹ ವಿಷಯದಲ್ಲೂ ಅಹಂಕಾರ ಮಮಕಾರಗಳುಂಟಾಗುತ್ತದೋ ಎಂದರೆ, ಉಂಟಾಗಬಹುದೆಂದು ಒಂದು ನಿದರ್ಶನವನ್ನು ತೋರಿಸುತ್ತಾರೆ. ಈಗ ತಾನು ಅನುಭವಿಸುವ ಸ್ವರ್ಗ ಮತ್ತು ಇಹಲೋಕ ಐಶ್ವರ್ಯಾದಿಗಳ ಅನುಭವ ವಿಷಯದಲ್ಲಿ ಹೇಗೆ ಅಹಂಕಾರ ಮಮಕಾರಗಳುಂಟಾಗಬಹುದೋ ಹಾಗೆ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಪರಮಾತ್ಮನಿಗೆ ಸ್ವಾಧೀನವಾಗಿದ್ದರೂ ತನಗೆ ಕರ್ತೃತ್ವಭೋಕ್ತೃತ್ವಗಳುಂಟೆಂದು ತಿಳಿಯುವದೇ ಅಹಂಕಾರವು. ತನ್ನ ಪ್ರಯೋಜನಕ್ಕಾಗಿಯೇ ತನಗೆ ಕರ್ತೃತ್ವ ಭೋಕ್ತೃತ್ವಗಳುಂಟೆಂದು ತಿಳಿಯುವದೇ ಮಮಕಾರವು.

ಈ ವಾಕ್ಯದಲ್ಲಿ ಅಹಙ್ಕಾರ ಮಮಕಾರಗಳು ಐದು ವಿಧವಾಗಿ ಉಂಟಾಗಬಹುದೆಂದು ಹೇಳಿರುತ್ತಾರೆ:—

೧. ದೇಹ ಮತ್ತು ದೇಹಾನುಬಂಧಿಗಳ ಮೂಲಕವಾಗಿಯುಂಟಾಗಬಹುದು.
೨. ದೇಹವ್ಯತಿರಿಕ್ತವಾದ ಆತ್ಮಸ್ವರೂಪ ತದ್ಗುಣಗಳಲ್ಲಿ ತನಗೆ ಸ್ವಾತನ್ತ್ರ್ಯ ಉಂಟೆಂಬ ಭ್ರಮೆಯಿಂದ ಪ್ರಾಪ್ತವಾಗಬಹುದು.

ಚ್ಯಾರಮಮಕಾರಜ್ಞಳಿಯುಮ್ ಯಥಾಯೋಗ್ಯಂ, ಅರ್ಥವಾಗವುಮ್, ಶಾಬ್ದವಾಗವುಮ್, ಅಡಿಯುರುತ್ತು ಇಪ್ಪಡಿ ಸ್ಥಿರಪ್ರತಿಷ್ಠಿತ ಜ್ಞಾನ ರಾಯ್,

---

೩. ಇತರರಿಗೂ ತಾನು ಶೇಷಭೂತನು ಎಂಬ ಭ್ರಮೆಯಿಂದ ತೋರಿಬರ ಬಹುದು.

೪. ತನ್ನ ರಕ್ಷಣೆಯಲ್ಲಿ ತಾನು ನಿರಪೇಕ್ಷ ಸ್ವಾತಂತ್ರ್ಯವುಳ್ಳವನೆಂಬ ಭ್ರಮೆಯಿಂ ದುಂಟಾಗಬಹುದು.

೫. ಸ್ವಾಮಿಕೈಂಕರ್ಯ ವಿಷಯದಲ್ಲಿ ಸ್ವಾಧೀನಕರ್ತಾ ಮತ್ತು ಸ್ವಾರ್ಥಕರ್ತಾ ಎಂದೂ, ಆತನನ್ನು ಅನುಭವಿಸುವದರಲ್ಲಿ ಸ್ವಾಧೀನಭೋಕ್ತಾ ಸ್ವಾರ್ಥ ಭೋಕ್ತಾ ಎಂದೂ ತೋರಿಬರುವದರಿಂದುಂಟಾಗಬಹುದು.

ಈ ಅಹಂಕಾರ ಮಮಕಾರಗಳನ್ನೆಲ್ಲಾ, **ಯಥಾಯೋಗ್ಯಂ** - ಶಕ್ತ್ಯನುಸಾರ, **ಅರ್ಥವಾಗವುಮ್ ಶಾಬ್ದವಾಗವುಮ್** - ಮೂಲಮಂತ್ರದಲ್ಲಿ ಅರ್ಥ ಮೂಲಕವಾಗಿಯೂ ಶಾಬ್ದಮೂಲಕವಾಗಿಯೂ ಉಂಟಾಗುವ ಜ್ಞಾನದಿಂದ, **ಅಡಿಯುರತ್ತು** – ಸಮೂಲವಾಗ ಛೇದಿಸಿ, **ಇಪ್ಪಡಿ ಈ** ಮೇಲೆ ಹೇಳಿದ ರೀತಿಯಲ್ಲಿ, **ಈ** ಅಹಂಕಾರಮಮಕಾರಗಳು ಪ್ರಬಲವಾಗಿ ಅನುಸರಿಸಿ ಬರುವವುಗಳಾದುದರಿಂದ **ಚನ್ನಾಗಿ** ಆಮೂಲಾಗ್ರವಾಗಿ ಛೇದಿಸುವದರಿಂದ, **ಸ್ಥಿರಪ್ರತಿಷ್ಠಿತಜ್ಞಾನರಾಯ್**- ನಿಶ್ಚಂಚಲವಾದ ಭ್ರಮಾದಿಗಳೊಂದೂ ಇಲ್ಲದ ಹಾಗೆ ಋಜುವಾದ ಅಂಶಗಳನ್ನು ಗ್ರಹಿಸಿದ ಜ್ಞಾನವುಳ್ಳವರಾಗಿಯೂ ಇರತಕ್ಕವರು, **ಮುಮುಕ್ಷುಕ್ಕಳಾನ ಅಧಿಕಾರಿಗಳು**; **ಈ** ಪದಗಳು ಮುಂದೆ ಇವೆ. ಹೀಗೆ ಮೇಲೆ ಹೇಳಿದ ಐದು ವಿಧ ಅಹಂ ಚ್ಯಾರಮಮಕಾರಗಳಿಗೆ ಅವಕಾಶಕೊಡದೆ ಮುಮುಕ್ಷುವಾದವನು ಸ್ಥಿರಪ್ರತಿಷ್ಠಿತವಾದ ಜ್ಞಾನವುಳ್ಳವನಾಗಿರಬೇಕೆಂದು ಹೇಳುತ್ತಾರೆ. **ಈ** ಅಹಂಕಾರ ಮಮಕಾರಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂಬುವದು, ಮೂಲಮಂತ್ರದಲ್ಲಿ ಕೆಲವು ಸಾಕ್ಷಾತ್ ಶಬ್ದಗಳ ಪ್ರಯೋಗದಿಂದಲೂ ಇನ್ನು ಕೆಲವು ಅರ್ಥಮೂಲಕವಾಗಿಯೂ, ತೋರಿಬರುತ್ತವೆಂಬಭಿಪ್ರಾಯವು. ಹೇಗೆಂದರೆ:— **ಮಃ ನ** ಎಂಬ ಶಬ್ದಗಳ ಮೂಲಕವಾಗಿಯೇ ಸ್ವರಕ್ಷಣದಲ್ಲಿ ಸ್ವಾತಂತ್ರ್ಯವಿಲ್ಲವೆಂಬುವದರಿಂದ, **ಸ್ವರಕ್ಷಣ**ದಲ್ಲಿ ಅಹಂಕಾರಮಮಕಾರನಿವೃತ್ತಿಯೂ,ಮಕಾರನಾದ ಜೀವಾತ್ಮನು **ಆಯ್ಯೈವ** ಎಂಬುವ ಶಬ್ದಗಳಿಂದಲೇ ತಾನು ತನಗಲ್ಲವು ಎಂದು ತೋರಿಬರುವದರಿಂದ ಮಮಕಾರನಿವೃತ್ತಿಯುಂಟಾಗುತ್ತದೆ. ಇದರಿಂದ ಅನ್ಯದೇವತೆಗಳಿಗೆ ತಾನು ಶೇಷನೆಂಬ ಅಹಂಕಾರ ನಿವೃತ್ತಿಯು ಅರ್ಥಾತ್ ತೋರಿಬರುತ್ತದೆ. ಸರ್ವೇಶ್ವರನಿಗೇ ಸರ್ವ

(ಞ) "ಅರ್ಪಶಾರಜ್ಞಳವೈ ಶುವೈತ್ತ ಕನ್ರೊಳಿನ್ದೇನ್"

ವಿಧಕೈಂಕರ್ಯವೂ, ತನಗಲ್ಲವು ಎಂಬುವದು **ನಾರಾಯಣಾಯ, ಮಃ ನ** ಎಂಬ ಶಬ್ದಗಳಿಂದ ತೋರಿಬರುವದರಿಂದ ಮಮಕಾರನಿವೃತ್ತಿಯು ಇಲ್ಲಿ ಶಾಬ್ದವು. ಆದು ದರಿಂದ ಅನ್ಯದೇವತೆಗಳಿಗೆ ಆ ಕೈಂಕರ್ಯವಲ್ಲವು ಎಂಬ ಅಹಂಕಾರನಿವೃತ್ತಿಯೂ ತೋರಿಬರುವದರಿಂದ ಈ ಅಭಿಪ್ರಾಯವು ಅರ್ಥಾತ್ ತೋರಿಬರುತ್ತದೆ. ಹೀಗೆಯೇ ವಿಕ್ಕವುಗಳನ್ನೂ ಊಹಿಸತಕ್ಕದ್ದು.

ಮುಂದೆ ಮುಮುಕ್ಷುವಾದವನಿಗೆ ಐಹಿಕ ವಿಷಯಗಳಲ್ಲಿ ವೈರಾಗ್ಯವಿರಬೇಕೆಂದು ಹೇಳಲು ಹೊರಟು, ಅನೇಕ ಪ್ರಮಾಣಗಳನ್ನು ಉದಾಹರಿಸಿ, ಪರಮಾತ್ಮನಲ್ಲಿ ಮನಸ್ಸು ಆಸಕ್ತವಾಗಬೇಕಾದರೆ ಐಹಿಕ ಸ್ವರ್ಗಲೋಕ ಸುಖಭೋಗಗಳಲ್ಲಿ ಜಿಹಾಸೆಯುಂಟಾಗತಕ್ಕದ್ದೆಂದು ತಿಳಿಸುತ್ತಾರೆ. ಅದಕ್ಕಾಗಿ ಐಹಿಕ ಭೋಗಗಳಲ್ಲಿರುವ ದೋಷಸಪ್ತಕಗಳನ್ನೂ, ದಿವ್ಯವೈಕುಂಠ ಭೋಗದ ನೈಲಕ್ಷಣ್ಯವನ್ನೂ ಮುಮುಕ್ಷುವು ತಿಳಿದವನಾಗಿರಬೇಕೆಂದು ಹೇಳುತ್ತಾರೆ.

(ಞ) ತಿರುವಾಯ್‌ಮೊಳಿ, ೩. ೨. ೬.

ಕಿರ್ಪನ್ ಕಿಲ್ಲೇ ನೆನ್ರಿರ್ಲ ಮುನನಾಳಾಲ್ ।
ಅರ್ಪಶಾರಜ್ಞಳವೈಶುವೈತ್ತೆಕನ್ರೊಳಿನ್ದೇ ॥
ಪರ್ಪಲಾ ಯಿರ ಮುಯಿರ್ ಶೆಯ್ದ ಪರವಾನಿ ।
ನರೆನ್ಪೀಜ್ಯೋತಿ ತಾಣಣುಕುವದೆಜ್ಞಾನ್ರೇ ॥

ಮುನನಾಳಾಲ್ – ಗತಿಸಿದ ಕಾಲದಲ್ಲೆಲ್ಲಾ. **ಕಿರ್ಪಕಿಲ್ಲೇನೆನ್ರಿರ್ಲ**-ಯೋಗ್ಯವಾದ ಸುಕೃತವನ್ನು ಮಾಡುವದನ್ನಾಗಲಿ, ದುಷ್ಕರ್ಮವನ್ನು ತ್ಯಜಿಸುವದನ್ನಾಗಲಿ ಅನುಷ್ಠಿಸಲಿಲ್ಲವು. **ಅರ್ಪಶಾರಜ್ಞಳವೈ** – ಅಲ್ಪಸಾರಭೂತಗಳಾಗಿ ಕ್ಷಣಸ್ಥಿರಗಳಾದ ಐಹಿಕ ವಿಷಯ ಸುಖಗಳನ್ನು, **ಶುವೈತ್ತು ಅಗನ್ರೊಳಿನ್ದೇ**ನ್ - ಅನುಭವಿಸಿ ನಿನ್ನ ಪಾದಕಮಲವನ್ನು ಹೊಂದಲವಕಾಶವಿಲ್ಲದೆ ದೂರವಾಗಿದ್ದುಬಿಟ್ಟೆನು. ಹೇಗೆಂದರೆ,

"ನ ಜಾತುಕಾಮಃ ಕಾಮಾನಾಮುಪಭೋಗೇ ನ ಶಾಮ್ಯತಿ।
ಹವಿಷಾ ಕೃಷ್ಣವರ್ತ್ಮೇವ ಪುನರೇವಾಭಿವರ್ಧತೇ ॥"

ಎಂದರೆ ಚೇತನನಲ್ಲಿ ಹುಟ್ಟಿದ ಕಾಮನೆಯು, ಅನುಭವದಿಂದಲೇ ಶಮನ ಹೊಂದುವದಿಲ್ಲ. ಅಗ್ನಿಯು ಹೇಗೆ ಹವಿಸ್ಸಿನಿಂದ ಪುನಃ ಜ್ವಲಿಸುತ್ತಾನೋ, ಹಾಗೆಯೇ ಈ ಜೀವಾತ್ಮನೂ ಅನುಭವಿಸಿದ ಹಾಗೆಲ್ಲಾ ಕಾಮನೆಯು ವೃದ್ಧಿಹೊಂದುತ್ತದೆ. **ಪರ್ಪ**

"ಕಣ್ಣುಕೇಟ್ಟುತ್ತುನೊನ್ದಣ್ಣುಳಲುಮೈಞ್ಞರುವಿ ಕಣ್ಡವಿನ್ಬನ್ತೆರಿವರಿಯು

ಲಾಯಿರವುಯಿರ್ ಶೆಯ್ದ - ವಿಧವಿಧವಾಗಿ ಸಾವಿರಾರು ಎಂದರೆ ಅಸಂಖ್ಯಾಕರಾದ ಜೀತನರನ್ನು ಸೃಷ್ಟಿಸಿದ, ಜೀತನರು ಅನಾದಿಯಾಗಿರುವವರು ಅಂಥಾವರನ್ನು ಸೃಷ್ಟಿಸಿದನು ಸರ್ವೇಶ್ವರನು ಎಂದು ಹೇಳುವದರಭಿಪ್ರಾಯವೇನೆಂದರೆ, ಆ ಜೀತನರಿಗೆ ಇಂದ್ರಿಯಗಳನ್ನೂ ದೇಹಗಳನ್ನೂ ಕೊಟ್ಟು ರೂಪವನ್ನುಂಟುಮಾಡವದೇ ಸೃಷ್ಟಿಯು ; ಹಾಗೆ ಸೃಷ್ಟಿಸಿದ **ಪರಮಾ** - ನಿಸ್ಸಮಾಭ್ಯಧಿಕನೇ, **ನಿನ್ನಲ್ ಪೊ** - ನಿನ್ನ ಅಪ್ರಾಕೃತವಾದ ಸುಂದರವಾದ, **ಶೋತಿತಾಳ್** - ತೇಜೋಮಯವಾದ ಚರಣಗಳನ್ನು, **ನಣಕುವದು ಎಞ್ಞಾನ್ರೋ** - ಆಶ್ರಯಿಸುವದು ಯಾವ ಕಾಲಕ್ಕೋ ? ಐಹಿಕ ಮೊದಲಾದ ಸುಖಭೋಗಗಳೆಲ್ಲಾ ಅಲ್ಪಾಸ್ಥಿರಗಳೆಂಬುವದಕ್ಕೆ ಪ್ರಮಾಣವಾಗಿ ಉದಾಹರಿಸಿರುತ್ತಾರೆ.

ತಿರುವಾಯ್‌ಮೊಳಿ, ೪. ೯. ೧೦.

ಕಣ್ಡು ಕೇಟ್ಟುಣ್ಡುನ್ರುನೊನ್ದುಳಲುಮೈಞ್ಞರುವಿ
ಕಣ್ಡವಿನ್ಬಮ್, ತೆರಿವರಿಯ ವಳವಿಲ್ಲಾಚ್ಚಿರ್ಪ್ಪಿನ್ಬ ।
ನೊಣ್ಣೊಡಿಯಾಡಿರು ಮುಕಳು ನೀಯುಮೇ ನಿಲಾನಿರ್ಪ
ಕ್ಕಣ್ಡಶದಿರ್ ಕಣ್ಣೊಳಿನ್ರೇ ನಡೈನ್ರೇನುನ್ರಿರುವಡಿಯೇ ॥

ಈ ಪಾಶುರದಿಂದ ನಶ್ವರವಾದ ಐಶ್ವರ್ಯವನ್ನೂ ಕೇವಲ ಆತ್ಮಾನುಭವರೂಪವಾದ ಕೈವಲ್ಯವನ್ನೂ ಪ್ರಾರ್ಥಿಸದೆ, ಪರಮ ಪುರುಷಾರ್ಥರೂಪವಾದ ನಿನ್ನ ತಿರುವಡಿಗಳನ್ನು ಆಶ್ರಯಿಸಿದೆನೆಂದು ಹೇಳುತ್ತಾರೆ. **ಕಣ್ಡು** - ರೂಪವನ್ನು ನೋಡಿ, **ಕೇಟ್ಟು** - ಶಬ್ದವನ್ನು ಕೇಳಿ, **ಉತ್ತು** - ಉಷ್ಣಶೀತಾದಿಗಳನ್ನು ಸ್ಪರ್ಶಿಸಿ, **ನೊನ್ದು** - ಗಂಧವನ್ನಾಘ್ರಾಣಿಸಿ, **ಉಣ್ಡು** - ರಸವನ್ನು ಭುಂಜಿಸಿ, **ಉಳಲುಮ್** - ಇದೂಸಾಲದೆಂದು ಇನ್ನೂ ಬೇಕೆಂದು ಅಲೆಯುತ್ತಿರುವ, **ಐಞ್ಞರುವಿ** - ಐದು ಇಂದ್ರಿಯಗಳಿಂದಲೂ, **ಕಣ್ಡ ಇನ್ಬಮ್** - ಅನುಭವಿಸಿದ ಸುಖವನ್ನೂ **ತೆರಿವು ಅರಿಯ** - ತಿಳಿಯಲಶಕ್ಯವಾದ, **ಅಳವಿಲ್ಲ** - ಅಪರಿಚ್ಛಿನ್ನವಾದ, **ಶಿರು ಇನ್ಬಂ** - ಭಗವದನುಭವಕ್ಕಿಂತ ಕಮ್ಮಿಯಾದುದೆಂದು ಹೇಳಿಸಿಕೊಳ್ಳುವ ಸುಖವಾದ ಕೈವಲ್ಯವನ್ನು, **ಒಳಿನ್ರೇ** - ತ್ಯಜಿಸಿದೆನು. ಏತಕ್ಕೆಂದರೆ, **ಒಣ್ ತೊಡಿಯಾಳ್** - ವಿಲಕ್ಷಣವಾದ ಹಸ್ತಾಭರಣ ಹೊಂದಿರುವ, **ತಿರುಮಕಳುಮ್** ಶ್ರೇಷ್ಠಸ್ತ್ರೀಯಾಗಿ "**ನಾರೀಣಾಮುತ್ತಮಾ ವಧೂಃ**" ಎಂದು ಹೇಳಿಸಿಕೊಂಡಿರುವ ಲಕ್ಷ್ಮಿಯೂ, **ನೀಯುಮೇ ನಿಲಾನಿರ್ಪ** - ನೀನೂ, ಹೀಗೆ ನೀವಿಬ್ಬರೂ ಇರುವಾಗ, **ಕಣ್ಡ ಶದಿರ್ ಕಣ್ಡು** - ನನಗೆ ತೋರಿದ ಒಳ್ಳೆ ಉಪಾಯವನ್ನು

ವಳವಿಲ್ಲಾಚಿರಂಜೀವಿನ್ಬಂ''"ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ ಧರ್ಮಾರ್ಥ ಕಾಮೈರಲಮಲ್ಪಕಾಸ್ತೇ''"ಅನ್ತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇ

ಪ್ರತ್ಯಕ್ಷೀಕರಿಸಿದೆನಾದುದರಿಂದ, ಅವುಗಳನ್ನು ತ್ಯಜಿಸಿದೆನು. **ಉನ್ ತಿರುವಡಿ ಅಡೈನ್ದೇನ್**-ಪರಮಪುರುಷಾರ್ಥವೆಂದು ನಿನ್ನ ಚರಣಕಮಲವನ್ನು ಆಶ್ರಯಿಸಿದೆನು."

ವಿ. ಪು. ೧. ೧೭. ೯೧. **ತಸ್ಮಿನ್ ಪ್ರಸನ್ನೇ** - ಆ ಸರ್ವೇಶ್ವರನು ಪ್ರಸನ್ನನಾಗಲು, **ಕಿಮಿಹಾಸ್ತ್ಯಲಭ್ಯಂ** - ಇಲ್ಲಿ ಯಾವುದು ತಾನೇ ಲಭ್ಯವಲ್ಲವು ? ಎಂದರೆ ಎಲ್ಲಾ ಮನೋರಥಗಳೂ ಲಭ್ಯವೆಂಬ ಭಾವವು; ಚತುರ್ವಿಧಪುರುಷಾರ್ಥಗಳೂ ಲಭಿಸುವವು. **ಧರ್ಮಾರ್ಥಕಾಮೈಃ** - ಧರ್ಮ, ಅರ್ಥ, ಕಾಮುಗಳಿಂದ, **ಅಲಂ** - ಸಾಕು. ಏಕೆಂದರೆ, **ತೇ** - ಅವು ಮೂರು ಪುರುಷಾರ್ಥಗಳೂ, **ಅಲ್ಪಕಾಃ** - ತುಚ್ಛವಾದವುಗಳು. ಉತ್ತರಾರ್ಧವು **''ಸಮಾಶ್ರಿತಾದ್ಬ್ರಹ್ಮತರೋರನಂತಾತ್ ನಿಸ್ಸಂಶಯೋ ಮುಕ್ತಿಫಲಪ್ರಪಾತಃ''** ಎಂದು ಇರುತ್ತದೆ. **ಸಮಾಶ್ರಿತಾತ್**- ಸಾಧ್ಯೋಪಾಯಗಳಾದ ಭಕ್ತಿಪ್ರಪತ್ತಿಮಾರ್ಗಗಳಿಂದ ಚನ್ನಾಗಿ ಆಶ್ರಯಿಸಿದ, **ಅನಂತಾತ್** - ಅನಂತವಾದ, ಅಪರಿಚ್ಛೇದ್ಯವಾದ, **ಬ್ರಹ್ಮತರೋಃ** - ಪರಬ್ರಹ್ಮವೆಂಬ ಕಲ್ಪವೃಕ್ಷದ ದೆಸೆಯಿಂದ, **ಮುಕ್ತಿಫಲಪ್ರಪಾತಃ** - ಮುಕ್ತಿ ಎಂಬ ಹಣ್ಣು ಬೀಳುವದು ಎಂದರೆ ಕರಗತವಾಗುವದು. **ನಿಸ್ಸಂಶಯಃ** - ನಿಸ್ಸಂಶಯವಾದುದು. ಇದರಿಂದ ಐಹಿಕ ವಿಷಯಸುಖಗಳು ಅಲ್ಪವಾದವೆಂದು ತೋರಲ್ಪಟ್ಟವು.

ಗೀ. ೭. ೨೩. ಉತ್ತರಾರ್ಧವು:—**''ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ**" ಎಂದು ಇದೆ. **ತೇಷಾಂ ಅಲ್ಪಮೇಧಸಾಂ** - ಆ ಅಲ್ಪಬುದ್ಧಿಯುಕ್ತರಾದವರಿಗೆ ; ಅವರು ಯಾರೆಂದರೆ,—ಇಂದ್ರಾದಿ ಇತರ ದೇವತೆಗಳನ್ನು ಭಜಿಸುವವರು, **ತತ್** – ಆ ಆರಾಧನ ಫಲವು **ಅಂತವತ್ತು** – ಅಲ್ಪವಾಗಿಯೂ ಅಸ್ಥಿರವಾಗಿಯೂ ಆಗುವದು. **ದೇವಯಜಃ** - ದೇವತೆಗಳನ್ನಾರಾಧಿಸುವವರು, **ದೇವಾನ್ ಯಾಂತಿ** - ದೇವತೆಗಳನ್ನು ಕುರಿತು ಹೋಗುತ್ತಾರೆ. **ಮದ್ಭಕ್ತಾಃ** – ನನ್ನ ಭಕ್ತರಾದರೋ **ಮಾಮಪಿ** - ನನ್ನನ್ನೂ **ಯಾಂತಿ** - ಹೊಂದುತ್ತಾರೆ. ಐಹಿಕಸುಖಗಳು ಅನಿತ್ಯವಾದವುಗಳೆಂಬುವದಕ್ಕೆ, ಪ್ರಮಾಣವನ್ನು ತೋರಿಸಿದರು. ಇಲ್ಲಿ ಐಹಿಕಭೋಗಗಳ ಅಸ್ಥಿರತ್ವವು ಹೇಳಲ್ಪಟ್ಟಿತು.

ಗೀ. ೯. ೩೩. ಐಹಿಕ ಸುಖಗಳೆಲ್ಲಾ ಅಲ್ಪಾಸ್ಥಿರವಾದವುಗಳೆಂಬುವದಕ್ಕೆ

ಧಸಾಂ," "ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಂ" "ಮಹಾಬಲಾನ್ಮಹಾವೀರ್ಯಾನನಂತಧನಸಂಚಯಾ೯। ಗತಾನ್ಕಾಲೇನ ಮಹತಾ ಕಥಾ ಶೇಷಾನ್ನರಾಧಿಪಾ೯॥ ಶ್ರುತ್ವಾ ನ ಪುತ್ರ ದಾರಾದೌ

ಗೀತೆಯಿಂದ ಇನ್ನೊಂದು ಶ್ಲೋಕವನ್ನು ಉದಾಹರಿಸುತ್ತಾರೆ. **ಅನಿತ್ಯಂ** - ಪರಿಣಾಮಾದಿಗಳಿಂದ ನಿತ್ಯವಲ್ಲದೇ ಇರುವ, **ಅಸುಖಂ** - ಸುಖವಿಲ್ಲದೇ ಇರುವ, **ಇಮಂ ಲೋಕಂ ಪ್ರಾಪ್ಯ**-ಈ ಲೋಕವನ್ನು ಹೊಂದಿ ನೀನು, **ಮಾಂ** - ಮಹಾ ಕೃಪಾಶಾಲಿಯಾಗಿಯೂ, ರಕ್ಷಿಸಬೇಕೆಂದು ಕಾದುಕೊಂಡಿರುವ ನನ್ನನ್ನು, **ಭಜಸ್ವ**-ಹೊಂದು ಅಥವಾ ಸ್ತೋತ್ರಮಾಡು. ಇಲ್ಲಿ ಅನಿತ್ಯತ್ವವೂ ದುಃಖಮೂಲತ್ವವೂ ಹೇಳಲ್ಪಟ್ಟವು.

ವಿ. ಪು. ೪. ೨೪. ೧೪೨-೩, **ಮಹಾಬಲಾ೯** - ಅಧಿಕವಾದ ಬಲವುಳ್ಳವರಾಗಿಯೂ, **ಮಹಾವೀರ್ಯಾ** - ಅಧಿಕವಾದ ಪರಾಕ್ರಮ ಉಳ್ಳವರಾಗಿಯೂ, **ಅನಂತ ಧನಸಂಚಯಾ೯** - ಅಳವಿಲ್ಲದ ಧನಸಮೂಹಗಳನ್ನುಳ್ಳವರಾಗಿಯೂ ಇರುವ, **ನರಾಧಿಪಾ೯** - ರಾಜರುಗಳನ್ನು, **ಮಹತಾಕಾಲೇನ** - ತುಂಬಾಕಾಲದ ಮೇಲೆ, **ಕಥಾಶೇಷಾ೯** - ಅವರುಗಳ ಕಥೆಗಳು ಮಾತ್ರವೇ ಮಿಕ್ಕಿರುವವರುಗಳನ್ನಾಗಿ, **ಗತಾ೯** - ಈ ಲೋಕವನ್ನು ಬಿಟ್ಟು ಹೋದವರನ್ನಾಗಿ, **ಶ್ರುತ್ವಾ** - ಕೇಳಿ, **ಪುತ್ರದಾರಾದೌ**-ಮಕ್ಕಳು ಹೆಂಡತಿ ಮೊದಲಾದವರುಗಳಲ್ಲೇ ಆಗಲಿ, **ಗೃಹಕ್ಷೇತ್ರಾದಿಕೇಪಿವಾ**-ಮನೆ, ಗದ್ದೆ ಮೊದಲಾದವುಗಳಲ್ಲಾಗಲಿ, **ದ್ರವ್ಯಾದೌವಾ**-ದ್ರವ್ಯ ಮೊದಲಾದವುಗಳಲ್ಲೇಯಾಗಲಿ, **ಕೃತಪ್ರಜ್ಞಃ** - ಶಿಕ್ಷಿಸಲ್ಪಟ್ಟ ಬುದ್ಧಿಯುಳ್ಳವನು, **ಮಮತ್ವಂ** - ಇವೆಲ್ಲಾ ನನ್ನವು ಎಂಬ ಅಭಿಮಾನವನ್ನು, **ನ ಕುರುತೇ** - ಮಾಡುವದಿಲ್ಲವು; ಮಹಾಬಲ ಪರಾಕ್ರಮಗಳನ್ನು ಹೊಂದಿ ಖ್ಯಾತಿಯಿಂದ ರಾಜ್ಯಾಡಳಿತಗಳನ್ನು ನಿರ್ವಹಿಸಿದ ರಾಜರುಗಳೂ ಕೂಡ ಕೆಲವು ಕಾಲವಾದನಂತರ ಸಕಲೈಶ್ವರ್ಯಗಳನ್ನೂ ಇಲ್ಲೇ ಬಿಟ್ಟು ಹೊರಟು ಹೋಗಿ ಬಿಟ್ಟಿರುವದರಿಂದ, ಅವರಿಗೆ ಸಂಬಂಧವಾದುದು ಯಾವುದೂ ಇಲ್ಲದೆ, ಇಂಥಾ ರಾಜರು ಒಂದಾನೊಂದು ಕಾಲದಲ್ಲಿ ಇದ್ದರೆಂಬ ಕಥೆ ಮಾತ್ರ ಉಳಕೊಂಡಿರುವದನ್ನು ನಾವು ಕೇಳಿರುವವು, ಹೇಗೆಂದರೆ:—

ಮಾಂಧಾತಾ ಚ ಮಹೀಪತಿಃ ಕೃತಯುಗಾಲಂಕಾರಭೂತೋ ಗತಃ।
ಸೇತುರ್ಯೇನ ಮಹೋದಧೌ ವಿರಚಿತಃ ಕ್ವಾಸೌ ದಶಾಸ್ಯಾಂತಕಃ॥
ಅನ್ಯೇ ಚಾಪಿ ಯುಧಿಷ್ಠಿರಪ್ರಭೃತಯೋ ಯಾತಾ ದಿವಂ ಭೂಪತೇ।

ಕೃತಯುಗದಲ್ಲಿ ಈ ಪೃಥಿವಿಗೆ ಅಲಂಕಾರಭೂತನಾದ ಮಾನ್ಧಾತರಾಜನೂ, ಮಹಾ

ಗೃಹಕ್ಷೇತ್ರಾದಿಕೇಪಿ ವಾ । ದ್ರವ್ಯಾದೌ ವಾ ಕೃತಪ್ರಜ್ಞೋ ಮುಮುಕ್ಷುಂ ಕುರುತೇ ನರಃ ॥" "ಸರ್ವಂ ದುಃಖಮಯಂಜಗತ್," "ಸ್ವರ್ಗೇಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ" "ರಾಜ್ಯೇಗೃಧ್ನನ್ತ್ಯವಿ

ಯಶಸ್ಸಿನಿಂದ ರಾಜ್ಯವನ್ನಾಳಿ ಭೂಮಿಯನ್ನು ಬಿಟ್ಟುಹೋದನು. ತ್ರೇತಾಯುಗದಲ್ಲಿ ಸಮುದ್ರದಲ್ಲಿ ಸೇತುಬನ್ಧನಾದಿ ಮಹಾಕಷ್ಟಸಾಧ್ಯವಾದ ಅತಿಮಾನುಷಕಾರ್ಯಗಳನ್ನೆಲ್ಲಾ ನಡಿಸಿದ ರಾವಣಾಂತಕನಾದ ಶ್ರೀರಾಮನು ಈಗ ಎಲ್ಲಿದ್ದಾನೆ? ಹಾಗೆಯೇ ದ್ವಾಪರಯುಗದಲ್ಲೂ ಮಹಾಖ್ಯಾತಿಯಿಂದ ಶ್ರೀಕೃಷ್ಣಸಖರಾಗಿ ಭಾರತಯುದ್ಧದಲ್ಲಿ ಗೆದ್ದ ಯುಧಿಷ್ಠಿರ ಮೊದಲಾದ ಪಾಂಡವರೂ ಕೂಡ ಹೊರಟು ಹೋದರು. ಹೀಗೆಲ್ಲಾ ಕೇಳಿಯೂ ತಿಳಿದೂ ಇರುವ ಪ್ರಾಜ್ಞನು,ಹೆಂಡತಿ ಮಕ್ಕಳಲ್ಲಿಯಾಗಲಿ, ಗೃಹಾರಾಮಾದಿಗಳಲ್ಲಿಯಾಗಲಿ, ದ್ರವ್ಯ ಮೊದಲಾದವುಗಳಲ್ಲಾಗಲಿ ಮಮತೆಯನ್ನಿಡಲಾರನು ಎಂಬಭಿಪ್ರಾಯವು. ಇಲ್ಲಿಯೂ ಅಸ್ಥಿರತ್ವವು ಹೇಳಲ್ಪಟ್ಟಿತು.

ವಿ. ಪು. ೧. ೧೭, ೬೯. **ಸರ್ವಂ ದುಃಖಮಯಂ ಜಗತ್** - ಈ ಸಮಸ್ತ ಜಗತ್ತೂ ದುಃಖಪ್ರಾಚುರ್ಯವುಳ್ಳದ್ದು.

ಗರ್ಭೇ ಚ ಸುಖಲೇಶೇಪಿ ಭವದ್ಭಿರನುಮಾಯತೇ ।
ಯದಿತತ್ಕಥ್ಯತಾಮೇವಂ ಸರ್ವಂ ದುಃಖಮಯಂ ಜಗತ್ ॥

ಎಂಬುವದು ಪೂರಾ ಶ್ಲೋಕವು. ಇದು ಪ್ರಹ್ಲಾದನು ತನ್ನ ಸ್ನೇಹಿತರುಗಳಿಗೆ ಮಾಡುವ ಉಪದೇಶವು. ಗರ್ಭದಲ್ಲೂ ಕೂಡ ಏನಾದರೂ ಸುಖಲೇಶ ಉಂಟೆಂದು ನೀವು ಅಭಿಪ್ರಾಯಪಡುವದಾದರೆ ಅದನ್ನು ನೀವು ಹೇಳಿ ನೋಡೋಣ, ಎಂದರೆ ಗರ್ಭ, ಜನ್ಮ, ಸ್ಥಿತಿ, ವೃದ್ಧಾಪ್ಯಾದಿಗಳಲ್ಲಿ ಯಾವಾಗಲೂ ಸುಖವಿಲ್ಲವು. ಆದುದರಿಂದ ಈ ಜಗತ್ತು ದುಃಖಪ್ರಾಚುರ್ಯವುಳ್ಳದು ಎಂಬಭಿಪ್ರಾಯವು. ಇಲ್ಲಿ ದುಃಖೋದರ್ಕತ್ವವು ಹೇಳಲ್ಪಟ್ಟಿತು.

ವಿ. ಪು. ೬. ೫. ೫೦. **ಸ್ವರ್ಗೇಪಿ** - ಸ್ವರ್ಗದಲ್ಲಿಯೂ ಕೂಡ. **ಕ್ಷಯಿಷ್ಣೋಃ** - ಸ್ವರ್ಗಾನುಭವವು ಕ್ಷಯಿಸಿ ಹೋಗುವವನಾಗಿ, **ಪಾತಭೀತಸ್ಯ** - ಪುನಃ ಈ ಕರ್ಮ ಭೂಮಿಗೆ ಬೀಳುತ್ತೇನೆಂಬ ಭಯವಿರುವವನಿಗೆ, **ನಾಸ್ತಿ ನಿರ್ವೃತಿಃ** - ಸುಖವಿಲ್ಲವು. ಇದರಿಂದ ದುಃಖಮಿಶ್ರತ್ವವೂ ದುಃಖೋದರ್ಕತ್ವವೂ ಹೇಳಲ್ಪಟ್ಟಿತು. **ನ ಕೇವಲಂ ದ್ವಿಜಶ್ರೇಷ್ಠ ನರಕೇ ದುಃಖಪದ್ಧತಿಃ** - ಎಂಬುವದು ಪೂರ್ವಾರ್ಧವು. ಬರೀ ನರಕದಲ್ಲಿ ಮಾತ್ರವೇ ದುಃಖವು, ಸ್ವರ್ಗದಲ್ಲಿ ದುಃಖವಿಲ್ಲವೆಂದು ಭಾವಿಸಬೇಡ, ಓ ಮೈತ್ರೇಯನೇ ಸ್ವರ್ಗಸುಖಮಧ್ಯದಲ್ಲೂ, ಆ ಸ್ವರ್ಗವಾಸ

ದ್ಧ್ವಾಂಸೋ ಮಮುತ್ವಾಹೃತಚೇತಸಃ । ಅಹಂಮಾನ ಮಹಾಪಾನ ಮದ ಮುತ್ತಾನಮಾದೃಶಾಃ,"" ಅಬ್ರಹ್ಮಭವನಾದೇತೇ ದೋಷಾಸ್ಸಂತಿ ಮಹಾ ಮುನೇ। ಅತ ಏವಹಿ ನೇಚ್ಛನ್ತಿ ಸ್ವರ್ಗಪ್ರಾಪ್ತಿಂ ಮನೀಷಿಣಃ", "ಬ್ರಹ್ಮಣ ಸ್ಸದನಾದೂರ್ಧ್ವಂ ತದ್ವಿಷ್ಣೋಃ ಪರಮಂಪದಂ । ಶುದ್ಧಂ ಸನಾತನಂ

ಮುಗಿದನಂತರ ಪುನಃ ಭೂಮಿಗೆ ಬೀಳಬೇಕಲ್ಲಾ ಎಂಬ ದುಃಖವಿದ್ದೇ ಇರುತ್ತದೆ. ಎಂದು ಪರಾಶರರು ಹೇಳುತ್ತಾರೆ.

ವಿ. ಪು. ೬. ೭. ೭ **ಮಮುತ್ವಾಹೃತಚೇತಸಃ** - ಮಮತೆಯಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳವರು, **ಅಹಂಮಾನಮಹಾಪಾನ ಮದಮುತ್ತಾಃ**- ಅಹಂಕಾರವೆಂಬುವದೇ ಒಂದು ಬಹು ಖಾರವಾದ ಮದ್ಯವು, ಅವರ ಮದದಿಂದ ಜ್ಞಾನ ತಪ್ಪಿಹೋದ, **ಅವಿದ್ವಾಂಸಃ** - ಮೂಢರು, **ರಾಜ್ಯೇ** - ರಾಜ್ಯದಲ್ಲಿ, **ಗೃಧ್ನಂತಿ** – ಆಶೆಪಡುತ್ತಾರೆ. **ಮಾದೃಶಾಃ** – ನಮ್ಮಂಥಾವರು, **ನ**- ಆಶೆಪಡುವದಿಲ್ಲವು. ಇದು ಖಾಂಡಿತ್ಯನು ತನ್ನ ಸಹೋದರನಾದ ಕೇಶಿಧ್ವಜನಿಗೆ ಹೇಳುವ ವಾಕ್ಯವು. ಇದರಿಂದ ವಿಪರೀತಾಭಿಮಾನ ಮೂಲತ್ವವು ಹೇಳಲ್ಪಟ್ಟಿತು.

ಇತಿಹಾಸ ಸಮುಚ್ಚಯಂ. ಳ. ೪೯. **ಮಹಾಮುನೇ** - ಓ ಮಹರ್ಷಿಯೇ **ಅಬ್ರಹ್ಮಭವನಾತ್** – ಬ್ರಹ್ಮಲೋಕ ಮೊದಲುಗೊಂಡು ಎಲ್ಲಾ ಕಡೆಯಲ್ಲೂ, **ಏತೇ ದೋಷಾಃ** - ಈ ಮೇಲೆ ಹೇಳಿದ ದೋಷಗಳು ಎಂದರೆ ಅಲ್ಪತ್ವವೇ ಮೊದಲಾದ ದೋಷಗಳು, **ಸನ್ತಿ** -ಇವೆ; **ಅತಏವ** - ಆದುದರಿಂದಲೇ, **ಮನೀಷಿಣಃ** - ಪ್ರಾಜ್ಞರು, **ಸ್ವರ್ಗಪ್ರಾಪ್ತಿಂ** - ಸ್ವರ್ಗಲೋಕಪ್ರಾಪ್ತಿಯನ್ನು, **ನೇಚ್ಛನ್ತಿ** - ಅಪೇಕ್ಷಿಸುವದಿಲ್ಲವು. ಇಲ್ಲಿ ಸ್ವಾಭಾವಿಕಾನಂದ ವಿರುದ್ಧತ್ವವು ಹೇಳಲ್ಪಟ್ಟಿತು.

ಭಾರತ. ವನ. ೨೬೨. ೩೭-೯. **ಬ್ರಹ್ಮಣಃ** - ಚತುರ್ಮುಖಬ್ರಹ್ಮನ, **ಸದನಾತ್** - ಸದನವೆಂದರೆ **ಮನೆ,** ಇಲ್ಲಿ ಮನೆಯೆಂದರೆ ಲೋಕ, ಇದಕ್ಕಿಂತ **ಊರ್ಧ್ವಂ** - ಮೇಲೆ, **ತದ್ವಿಷ್ಣೋಃ ಪರಮಂ ಪದಂ** - ವಿಷ್ಣುವಿನ ದಿವ್ಯವೈಕುಂಠಲೋಕವಿದೆ, **ತತ್** - ಅದನ್ನು, **ಶುದ್ಧಂ** - ಹೇಯಸಂಬಂಧ ದುಃಖಸಂಬಂಧ ಒಂದೂ ಇಲ್ಲದೆ ಪರಿಶುದ್ಧವಾದ, ಶುದ್ಧಸತ್ವವಾದುದರಿಂದ ರಜಸ್ತಮೋಗುಣಗಳ ಸ್ಪರ್ಶಕ್ಕೇ ಇಲ್ಲದೆ ಪರಿಶುದ್ಧವಾದ, **ಸನಾತನಂ** - ಅನಾದಿಯಾದ, **ಜ್ಯೋತಿಃ**- ಸ್ವಯಂಪ್ರಕಾಶವಾದುದಾಗಿ, **ಪರಂಬ್ರಹ್ಮೇತಿ** - ಪರಬ್ರಹ್ಮವೆಂಬದಾಗಿಯೇ ಎಂದರೆ, ಪರಬ್ರಹ್ಮವನ್ನು ಅನುಭವಿಸಲು ಯೋಗ್ಯವಾದ ಸ್ಥಳವಾದುದರಿಂದ ಅದನ್ನೇ

ಜ್ಯೋತಿಃ ಪರಂ ಬ್ರಹ್ಮೇತಿ ತದ್ವಿದುಃ । ನ ತತ್ರ ಮೂಢಾ ಗಚ್ಛನ್ತಿ ಪುರುಷಾ ವಿಷಯಾತ್ಮಕಾಃ । ಡಂಭ ಲೋಭ ಮದ ಕ್ರೋಧ ದ್ರೋಹ ಮೋಹೈರಭಿದ್ರುತಾಃ । ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ಸ್ಸಂಯತೇಂದ್ರಿಯಾಃ । ಧ್ಯಾನಯೋಗ ರತಾಶ್ಚೈವ ತತ್ರ ಗಚ್ಛನ್ತಿ ಸಾಧವಃ,"

ಪರಬ್ರಹ್ಮವೆಂದು, **ವಿದುಃ** -ತಿಳಿಯುತ್ತಾರೆ. ಇಲ್ಲಿ ಆ ದಿವ್ಯ ವೈಕುಂಠವು, **ಪರಮು ಪದಂ** - ಎಂದು ಹೇಳಿದುದರಿಂದ ಅಲ್ಪತ್ವರೂಪದೋಷವಿಲ್ಲವೆಂದು ಹೇಳಿದಂತಾಯಿತು **ಶುದ್ಧಂ** ಎಂದು ಹೇಳಿದುದರಿಂದ ದುಃಖಮೂಲತ್ವ, ದುಃಖಮಿಶ್ರತ್ವಾದಿ ದೋಷಗಳಿಲ್ಲವೆಂದು ಹೇಳಲ್ಪಟ್ಟಿತು. **ಸನಾತನಂ** ಎಂದು ಹೇಳಿದುದರಿಂದಅಸ್ಥಿರತ್ವದೋಷವಿಲ್ಲವೆಂದಾಯಿತು. **ಪರಂಬ್ರಹ್ಮ**ವೆಂದು ಹೇಳಿದುದರಿಂದ ಸ್ವಾಭಾವಿಕಾನಂದ ವಿಶುದ್ಧತ್ವರೂಪ ದೋಷವಿಲ್ಲವೆಂದಾಯಿತು. **ನ ತತ್ರ ಮೂಢಾ ಗಚ್ಛನ್ತಿ**ಎಂದು ಹೇಳಿದುದರಿಂದ ವಿಪರೀತಾಭಿಮಾನಮೂಲತ್ವರೂಪ ದೋಷವಿಲ್ಲವೆಂದು ಹೇಳಲ್ಪಟ್ಟಿತು. **ನಿರ್ಮಮಾ ನಿರಹಂಕಾರಾ** ಎಂದು ಹೇಳಿರುವದರಿಂದ ದುಃಖೋದರ್ಕತ್ವ ದೋಷವಿಲ್ಲವೆಂದು ಭಾವಿಸತಕ್ಕದ್ದು. ಹೀಗೆ ಅಲ್ಲಿ ದೋಷಸಪ್ತಕಗಳಿಲ್ಲವೆಂದೂ, ತದಿತರ ಸ್ಥಾನಗಳಲ್ಲಿ ಇವುಗಳುಂಟೆಂದೂ, ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. **ವಿಷಯಾತ್ಮಕಾಃ** - ವಿಷಯಗಳಲ್ಲಿ ಇಡಲ್ಪಟ್ಟ ಮನಸ್ಸುಳ್ಳವರಾದ, **ಮೂಢಾಃ**-ಅಜ್ಞಾನಿಗಳು, **ನತತ್ರ ಗಚ್ಛನ್ತಿ**-ಅಲ್ಲಿಗೆ ಹೋಗಲಾರರು. ಇದರಿಂದ, ವಿಪರೀತಾಭಿಮಾನಮೂಲತ್ವವಿಲ್ಲದಿರುವಿಕೆಯು ಹೇಳಲ್ಪಟ್ಟಿತು. ಇನ್ನೂ ಯಾರ್ಯಾರು ವೈಕುಂಠವನ್ನು ಕುರಿತು ಹೋಗಲಾರರೆಂಬುವದು ಹೇಳಲ್ಪಡುತ್ತದೆ. **ಡಂಭ ಲೋಭ ಮದ ಕ್ರೋಧ ದ್ರೋಹ ಮೋಹೈಃ** – ಈ ಮೇಲೆ ಹೇಳಿದೆ ಅರಿಷಡ್ವರ್ಗಗಳಿಂದ, **ಅಭಿದ್ರುತಾಃ** – ಹಿಡಿಯಲ್ಪಟ್ಟವರೂ, ಸಹ ಅಲ್ಲಿಗೆ ಹೋಗಲಾರರು. ಆದರೆ **ನಿರ್ಮಮಾಃ** - ಮಮತೆಶೂನ್ಯರಾದವರೂ, **ನಿರಹಂಕಾರಾಃ** – ಅಹಂಕಾರವಿಲ್ಲದವರೂ, **ನಿರ್ದ್ವಂದ್ವಾಃ** - ಶೀತೋಷ್ಣಸುಖದುಃಖ ಮೊದಲಾದವುಗನ್ನೂ ಸಹಿಸುವವರೂ, **ಸಂಯತೇಂದ್ರಿಯಾಃ**- ನಿಗ್ರಹಿಸಲ್ಪಟ್ಟ ಇಂದ್ರಿಯಗಳುಳ್ಳವರೂ, **ಧ್ಯಾನಯೋಗರತಾಶ್ಚೈವ** - ಪರಬ್ರಹ್ಮೋಪಾಸನದಲ್ಲಿ ಆಸಕ್ತಿ ಇರುವವರಾದ, **ಸಾಧವಃ** – ಸಾಧುಜನಗಳು, **ತತ್ರ ಗಚ್ಛನ್ತಿ** - ಆ ವೈಕುಂಠಕ್ಕೆ ಹೋಗುತ್ತಾರೆ.

ಭಾರತ. ಶಾಂತಿ. ೧೯೬. ೪. **ಹೇರಾಜರ್ಷ** – ಓ ರಾಜನೇ, **ರಮ್ಯಾಣಿ** – ಮನೋಹರಗಳಾದ, **ಕಾಮಚಾರಾಣಿ** – ತಮ್ಮ ಇಷ್ಟಾನುಸಾರ ಸಂಚರಿಸುವ, **ವಿಮಾನಾನಿ** - ವಿಮಾನಗಳು, **ತಥಾ** - ಹಾಗೆಯೇ, **ಸಭಾಃ** – ಸಭೆಗಳು, **ಅಸ್ಯಾ**

"ರಮ್ಯಾಣಿ ಕಾಮಚಾರಾಣಿ ವಿಮಾನಾನಿ ಸಭಾಸ್ತಥಾ। ಆಕ್ರೀಡಾ ವಿವಿಧಾ ರಾಜ್ಞ ಪದ್ಮಿನ್ಯಶ್ಚಾಮಲೋದಕಾಃ," "ಏತೇವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ." ಇತ್ಯಾದಿ ಪ್ರಮಾಣಜ್ಞಾಲೇ ಅಲ್ಪತ್ವ, ಅಸ್ಥಿರತ್ವ, ದುಃಖಮೂಲತ್ವ, ದುಃಖಮಿಶ್ರತ್ವ, ದುಃಖೋದರ್ಕತ್ವ ವಿಪರೀತಾಭಿ

ನಮಂಟಪಗಳು, **ವಿವಿಧಾಃ** – ನಾನಾವಿಧಗಳಾದ, **ಆಕ್ರೀಡಾಃ** – ವಿಹಾರಸ್ಥಳಗಳು, ಎಂದರೆ ಉದ್ಯಾನಗಳು, **ಅಮಲೋದಕಾಃ** – ನಿರ್ಮಲವಾದ ಉದಕವುಳ್ಳ, **ಪದ್ಮಿನ್ಯಶ್ಚ** – ತಾವರೆ ಕೊಳಗಳು. ಇವೆಲ್ಲಾ ದಿವ್ಯವೈಕುಂಠದ ವೈಲಕ್ಷಣ್ಯವನ್ನು ಪ್ರದರ್ಶಿಸುತ್ತವೆ. ಮುಂದಕ್ಕೆ

"ಚತುರ್ಣಾಂ ಲೋಕಪಾಲಾನಾಂ ಶುಕ್ರಸ್ಯಾಥ ಬೃಹಸ್ಪತೇಃ ।
ಮರುತಾಂ ವಿಶ್ವದೇವಾನಾಂ ಸಾಧ್ಯಾನಾಮಶ್ವಿನೋರಪಿ ॥"

ಎಂದು ಹೇಳಿ, ಇವೆಲ್ಲಾ ನರಕಕ್ಕೆ ಸಮಾನವಾದವುಗಳೇ ಎಂದು ಹೇಳಲ್ಪಟ್ಟಿರುತ್ತವೆ.

ಮುಂದೆ ಇವು ನರಕಪ್ರಾಯಗಳೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ.

ಭಾರತ ಶಾಸ್ತ್ರ. ೧೯೬. ೬. **ಹೇತಾತ** – ಓ ಅಪ್ಪನೇ, **ಪರಮಾತ್ಮನಃ ಸ್ಥಾನಸ್ಯ** – ಪರಮಾತ್ಮನ ಪರಮಪದವಾದ ದಿವ್ಯವೈಕುಂಠಕ್ಕೆ ಹೋಲಿಸಿದರೆ, **ಏತೇವೈ ನಿರಯಾಃ** – ಇವು ನರಕಕ್ಕೆ ಸಮಾನವಾದವುಗಳು. **"ರುದ್ರಾದಿತ್ಯವಸೂನಾಂ ಚ ತಥಾನ್ಯೇಷಾಂ ದಿವೌಕಸಾಂ"** ಎಂಬುವದು ಪೂರ್ವಾರ್ಧವು. ಏಕಾದಶರುದ್ರರ, ದ್ವಾದಶಾದಿತ್ಯರ, ಅಷ್ಟವಸುಗಳ ಮತ್ತು ಇತರ ದೇವತೆಗಳಾದ ಇಂದ್ರಾಗ್ನಿಯಮನಿರುಣಾದಿಗಳ ಲೋಕಗಳೆಲ್ಲಾ ನರಕಸಮಾನವಾದವುಗಳು ಎಂಬ ಭಾವವು. **ಇತ್ಯಾದಿಪ್ರಮಾಣಜ್ಞಾಲೆ**–ಇವೇ ಮೊದಲಾದ ಪ್ರಮಾಣಗಳಿಂದ **ಅಲ್ಪತ್ವ**–ಅಲ್ಪವಾಗಿರುವಿಕೆ, ಎಂದರೆ ಐಹಿಕ ಮತ್ತು ಮೋಕ್ಷವ್ಯತಿರಿಕ್ತ ಆಮುಷ್ಮಿಕ ಸುಖಭೋಗಗಳೆಲ್ಲಾ ಅಲ್ಪವಾದವು, ತುಚ್ಛವಾದವು,ಎಂಬ ಭಾವವು; **ಅಸ್ಥಿರತ್ವ**-ಕೊಂಚಕಾಲಾನುಭವವುಳ್ಳದು; ಮೇಲೆ ಹೇಳಿದ ಭೋಗಗಳೆಲ್ಲಾ ಅಲ್ಪಕಾಲವಿರುವಂಥಾವುಗಳು ಎಂಬ ಭಾವವು; **ದುಃಖಮೂಲತ್ವ** - ದುಃಖಮೂಲಕಪ್ರಾಪ್ತವಾಗೋಣವು ಎಂದರೆ ಶ್ರಮಪಟ್ಟು ಸಾಧಿಸಬೇಕ್ಕವುಗಳಾಗಿರುವಿಕೆ, ಅಥವಾ ದುಃಖಕ್ಕೆ ಕಾರಣವಾಗಿಯೂ ಇರುವಿಕೆ; **ದುಃಖಮಿಶ್ರತ್ವಂ** - ಅಂತಹ ಸುಖಭೋಗಗಳ ಮಧ್ಯೆಯೇ ದುಃಖಪ್ರಾಪ್ತವಾಗುವದರಿಂದ ದುಃಖಮಿಶ್ರವಾಗಿರುವಿಕೆ;

ಮಾನ ಮೂಲತ್ವ, ಸ್ವಾಭಾವಿಕಾನಂದ ವಿರುದ್ಧತ್ವಜ್ಞಾಕಿರ ದೋಷಸ ಪ್ತಕಜ್ಞಳೈಯುಮ್, ಇವತ್ತಿಲ್ ಯಥಾಸವ್ಭವ ಮುಣ್ಡಾನ ಚೇತನ ಮಾತ್ಮಾನುಭವ ದೋಷಜ್ಞಳೈಯುಮ್, ಇವ್ವನುಭವಜ್ಞಳು ಕ್ಕೆದಿರ್

ಶತ್ರುಭಯದಿಂದ ಸುಖಮಧ್ಯದಲ್ಲಿ ದುಃಖವೂ, ಅಥವಾ ಕಳ್ಳರ ಮೂಲಕ ಧನನಾಶ ದಿಂದ ದುಃಖವೂ ಮುಂತಾದವು. **ದುಃಖೋದರ್ಕತ್ವಂ** – ದುಃಖಾಧಿಕ್ಯವುಳ್ಳ ಭಾವವು, ಮುಂದೆ ಹೆಚ್ಚಾದ ದುಃಖಕ್ಕೆ ಕಾರಣವಾಗುವಿಕೆ ; ಮಕ್ಕಳುಗಳಿಂದುಂಟಾ ಗುವ ಸುಖವು ಕೊನೆಗೆ ತುಂಬಾ ದುಃಖಪರಂಪರೆಗಳನ್ನುಂಟುಮಾಡಬಹುದು, ಇತ್ಯಾದಿ. ಈ ಮೇಲಿನ ಭಾವಗಳು ಶ್ರೀಭೀಷ್ಮರು ಯುಧಿಷ್ಠಿರರಿಗೆ ಹೇಳುವ ವಾಕ್ಯಗಳಿಂದ ವ್ಯಕ್ತಪಡುತ್ತವೆ.

"ಸುಖಾನ್ತಪ್ರಭವಂ ದುಃಖಂ ದುಃಖಾನ್ತಪ್ರಭವಂ ಸುಖಂ ।
ಸುಖಾತ್ಸಂಜಾಯತೇ ದುಃಖಂ ದುಃಖಾತ್ಸಂಜಾಯತೇ ಸುಖಂ ।

ಸುಖಸ್ಯಾನನ್ತರಂ ದುಃಖಂ ದುಃಖಸ್ಯಾನನ್ತರಂ ಸುಖಂ ।
ಸುಖದುಃಖೇ ಮನುಷ್ಯಾಣಾಂ ಚಕ್ರವತ್ಪರಿವರ್ತತಃ ।

ಸುಖಾತ್ತ್ವಂ ದುಃಖ ಮಾಪನ್ನಃ ಪುನರಾಪತ್ಸ್ಯತೇ ಸುಖಂ ।"

ಇತ್ಯಾದಿ. **ವಿಪರೀತಾಭಿಮಾನ ಮೂಲತ್ವ** - ತನ್ನ ಪ್ರಯೋಜನಕ್ಕಾಗಿಯೇ ಎಂಬ ಹೆಚ್ಚಾದ ಅಭಿಮಾನರೂಪಭ್ರಮೆಗೆ ಕಾರಣವಾಗಿರುವಿಕೆ. **ಸ್ವಾಭಾವಿಕಾನಂದ ವಿರುದ್ಧತ್ವ** - ಸ್ವಾಭಾವಿಕವಾದ ಆನಂದಕ್ಕೆ ವಿರುದ್ಧವಾದ ಭಾವವು ಎಂದರೆ ಇಲ್ಲಿ ಆನಂದಗಳು ಉಪಾಧಿಯುಕ್ತವಾದವು, ಆದರೆ ಮೋಕ್ಷಾನಂದವು ಹಾಗಲ್ಲವೆಂಬ ಭಾವವು. ಹೀಗೆ ಮೇಲೆ ಹೇಳಲ್ಪಟ್ಟ, **ಅಚಿದ್ವಿಷಯಾನುಭವ ದೋಷಸಪ್ತಕಜ್ಞಳೈಯುಮ್** – ಅಚಿದ್ವಿಷಯಗಳನ್ನು ಅನುಭವಿಸುವದರಲ್ಲಿ ತೋರುವ ಏಳು ದೋಷಗಳನ್ನೂ, **ಇವತ್ತಿಲ್** - ಈ ದೋಷಸಪ್ತಕಗಳಲ್ಲಿ, **ಯಥಾಸವ್ಭವ ಮುಣ್ಡಾನ** – ಅಲ್ಲಿ ಉಂಟಾಗಬಹುದಾವ **ಚೇತನಮಾತ್ಮಾನುಭವದೋಷಜ್ಞಳೈಯುಮ್** - ಕೈವಲ್ಯದಲ್ಲಿ ತನ್ನ ಚೇತನ ಸ್ವರೂಪಾನುಭವದಿಂದುಂಟಾದ ದೋಷಗಳನ್ನೂ, ಈ ಕೈವಲ್ಯವಿಷಯವಾಗಿ ಹೀಗೆ ಏಕೆ ಪ್ರತ್ಯೇಕಿಸಿ ಹೇಳಿದರೆಂದರೆ, ಇಲ್ಲಿ ದೋಷಸಪ್ತಕಗಳೂ ಇಲ್ಲವು; ಇಲ್ಲಿ ದುಃಖಮೂಲತ್ವ, ದುಃಖ ಮಿಶ್ರತ್ವ, ದುಃಖೋದರ್ಕಗಳಿಲ್ಲವು. ಕೇವಲನು ಅಲ್ಲಿಂದ ಮುಂದಕ್ಕೆ ವೈಕುಂಠಕ್ಕೆ ಹೋಗುತ್ತಾನೆಂದು ಭಾವಿಸಿದರೆ ಮೇಲೆ ಹೇಳಿದ ದೋಷಗಳಿಲ್ಲವು; ಆದುದರಿಂದಲೇ **ಯಥಾಸವ್ಭವಮುಣ್ಡಾನ** ವೆಂದು ಪ್ರಯೋಗಿಸಿದರು, ಅಲ್ಲಿಯೂ ಇವುಗಳಲ್ಲಿ

ತಟ್ಪಾನ ಭಗವದನುಭವತ್ತಿ ನ್ವೈಲಕ್ಷಣ್ಯತ್ತೈ ಯುಮ್ ವಿಶದವಾಕವ ನುಸನ್ಧಿತ್ತು, "ಪರಮಾತ್ಮನಿ ಯೋ ರಕ್ತೋ ವಿರಕ್ತೋಽಪರಮಾತ್ಮನಿ" ಎನ್ನಿರ ವವಸ್ಥೈಯುಡಯರಾಯುಮ್,

---

ಕೆಲವು ದೋಷಗಳುಂಟು, ಅಲ್ಪತ್ವ, ವಿಪರೀತಾಭಿಮಾನಮೂಲತ್ವ, ಸ್ವಾಭಾವಿಕಾನಂದವಿರುದ್ಧತ್ವಗಳುಂಟೆಂದು ಭಾವಿಸತಕ್ಕದ್ದು. **ಇವ್ವನುಭವಂಗಳಕ್ಕು** - ಈ ಮೇಲೆ ವಿವರಿಸಲ್ಪಟ್ಟ ಐಹಿಕ ಮತ್ತು ಇಂದ್ರಾದಿ ಲೋಕಗಳ ಭೋಗಗಳಿಗೂ ಮತ್ತು ಕೈವಲ್ಯಾನುಭವಗಳಿಗೂ, **ಎದಿರ್ತಟ್ಟಾನ**-ವಿರೋಧಗಳಾದ, **ಭಗವದನುಭವತ್ತಿನ್ ವೈಲಕ್ಷಣ್ಯತ್ತೈ ಯುಮ್** - ಭಗವದನುಭವದಲ್ಲಿರುವ ವಿಲಕ್ಷಣ ಭಾವವನ್ನೂ, ಏನು ವೈಲಕ್ಷಣ್ಯವು ಎಂದರೆ ಈ ಏಳು ದೋಷಗಳೂ ಇಲ್ಲದೆ, ನಿತ್ಯವಾಗಿಯೂ, ಸ್ಥಿರವಾಗಿಯೂ ದುಃಖಾದಿದೋಷಸಂಬಂಧವಿಲ್ಲದೆ ನಿರತಿಶಯಾನಂದ ರೂಪವಾಗಿಯೂ ಹೀಗೆ ಮಂಗಳರೂಪವಾದುದು; ಇದು ಒಂದೇ ಮಂಗಳವು. ಇನ್ನು ನಿಕ್ಕದ್ದೆಲ್ಲವೂ ಅಮಂಗಳವು, ಇಂತಹ ವೈಲಕ್ಷಣ್ಯವು. ಹೀಗೆ ಅವುಗಳಲ್ಲಿ ದೋಷಗಳಿರುವದನ್ನೂ ಪರಮಾತ್ಮಾನುಭವದಲ್ಲಿ ದೋಷವಿಲ್ಲದೇ ಇರುವದನ್ನೂ, **ವಿಶದವಾಗವನುಸನ್ಧಿತ್ತು**-ಚನ್ನಾಗಿ ಅನುಸಂಧಾನಮಾಡಿ ಎಲ್ಲಿ ಎಂದರೆ ಮೂಲಮಂತ್ರಾದಿಗಳಲ್ಲಿ ಅವು ಉಪಪಾದಿತವಾಗಿರುವದರಿಂದ, ಅನುಸಂಧಾನಮಾಡಿ ಎಂಬ ಭಾವವು. **ಪರಮಾತ್ಮನಿ ಯೋ ರಕ್ತಃ** - ಪರಮಾತ್ಮನಲ್ಲಿ ಯಾವನು ಅನುರಕ್ತನೋ, ಎಂದರೆ ಯಾವನು ಪರಮಾತ್ಮನಲ್ಲೇ ಸಕ್ತವಾದ ಮನಸ್ಸುಳ್ಳವನೋ, ಅವನು, **ವಿರಕ್ತೋಽಪರಮಾತ್ಮನಿ** - ಪರಮಾತ್ಮವ್ಯತಿರಿಕ್ತವಾದ ವಿಷಯಗಳಲ್ಲಿ ವೈರಾಗ್ಯವುಳ್ಳವನಾಗುತ್ತಾನೆ" **ಎನ್ನಿರವವಸ್ಥೈಯುಡೈಯರಾಯುಮ್** - ಎಂದು ಹೇಳಿರುವ ವೈರಾಗ್ಯಾವಸ್ಥೆಯನ್ನು ಹೊಂದಿದವರಾಗಿಯೂ ಮುಮುಕ್ಷುಗಳಿರತಕ್ಕದ್ದು. ಇಂಥಾವರೇ **"ಮುಮುಕ್ಷುಕ್ಕಳಾನ ಅಧಿಕಾರಿಗಳ್"** ಎಂದು ಮುಂದಕ್ಕೆ ವಾಕ್ಯಪೂರಣವಿರುತ್ತದೆ. ಈಗ ಹೇಳಿದುದರಭಿಪ್ರಾಯವೇನೆಂದರೆ:— ಮುಮುಕ್ಷುವಾದವನಿಗೆ, ಪರಮಾತ್ಮಾನುಭವವ್ಯತಿರಿಕ್ತವಾದ ಸಕಲ ಭೋಗಗಳಲ್ಲೂ ದೋಷಗಳುಂಟೆಂದೂ, ಐಹಿಕಾನುಭವಗಳಲ್ಲಿ ದೋಷಸಪ್ತಕಗಳುಂಟೆಂದೂ ಭಗವದನುಭವದಲ್ಲಿ ಇಂತಹ ದೋಷಗಳೊಂದೂ ಇಲ್ಲವೆಂದೂ, ಅದು ನಿರತಿಶಯವಾದುದಾಗಿ, ನಿತ್ಯವಾಗಿರುವದೆಂದೂ ತಿಳಿದು, ಐಹಿಕಗಳಲ್ಲಿ ವೈರಾಗ್ಯವುಂಟಾಗಿ, ಭಗವದನುಭವಪ್ರಾಪ್ತಿಯಲ್ಲೇ ಸಕ್ತವಾದ ಮನಸ್ಸುಳ್ಳವರಾಗಿರಬೇಕೆಂದು ಹೇಳಲ್ಪಟ್ಟಿತು. **"ಪರಮಾತ್ಮನಿ ಯೋ ರಕ್ತಃ"**ವೆಂಬುವದು ನಾರದೀಯಕಲ್ಪವಾಕ್ಯವು.

"ಕ್ಷೇತ್ರಾಣಿ ಮಿತ್ರಾಣಿ ಧನಾನಿ ನಾಥ
ಪುತ್ರಾಶ್ಚ ದಾರಾಃ ಪಶವೋ ಗೃಹಾಶ್ಚ ।

೬. "ಪ್ರವೃತ್ತಿ ಲಕ್ಷಣಂಧರ್ಮಂ ಪ್ರಜಾಪತಿರಥಾಬ್ರವೀತ್" (೧) ಎಜ್ಞರಪ್ರವೃತ್ತಿ ಧರ್ಮಜ್ಞಳಿನ್ರುಮ್ ನಿವೃತ್ತರಾಯ್, "ನಿವೃತ್ತಿ

ತ್ವತ್ಪಾದಪದ್ಮಪ್ರವಣಾತ್ಮಬುದ್ಧೇ
ರ್ಭವನ್ತಿ ಸರ್ವೇ ಪ್ರತಿಕೂಲರೂಪಾಃ॥"

"ಕ್ಷೇತ್ರ, ಮಿತ್ರ, ಧನ, ಪುತ್ರ, ದಾರ, ಪಶು, ಗೃಹ ಮೊದಲಾದವುಗಳೆಲ್ಲಾ ಓ ಸರ್ವೇಶ್ವರನಾದ ಸ್ವಾಮಿಯೇ, ನಿನ್ನ ಪಾದಕಮಲದಲ್ಲಿ ಸಕ್ತವಾದ ಮನಸ್ಸುಳ್ಳವರಿಗೆ, ಪ್ರತಿಕೂಲವಾದವುಗಳು" ಎಂಬರ್ಥವುಳ್ಳ ಈ ಶ್ಲೋಕದಲ್ಲಿ ಆ ಅಭಿಪ್ರಾಯವೇ ಗರ್ಭಿತವಾಗಿದೆ.

೬. ಆದರೆ ಐಹಿಕ ವೃತ್ತಿಗಳಲ್ಲೆಲ್ಲಾ ಮುಮುಕ್ಷುವಿಗೆ ವೈರಾಗ್ಯ ಉಂಟಾಗಬೇಕೆಂದು ಮೇಲೆ ಹೇಳಲ್ಪಟ್ಟಿತು. ಆದುದರಿಂದ ಈತನಿಗೆ ಯಾವ ವಿಧ ವ್ಯಾಪಾರಗಳೂ ಬೇಡವೇ? ಭಗವದ್ಭಜನ, ಭಾಗವತ ಕೈಂಕರ್ಯಾದಿಗಳೂ ಕೂಡ ಬೇಡವೆ? ಎಂಬ ಶಂಕಾ ನಿವಾರಣಾರ್ಥವಾಗಿ ಮುಮುಕ್ಷುವಿಗೂ ಕರ್ತವ್ಯಗಳುಂಟು. ಕೆಲವು ವ್ಯಾಪಾರಗಳನ್ನು ಆತನು ತ್ಯಜಿಸತಕ್ಕದ್ದು; ಕೆಲವು ಉಪಾದೇಯವು ಎಂದು ವಿಭಾಗಿಸಿ ಹೇಳುತ್ತಾರೆ. **"ಪ್ರವೃತ್ತಿ ಲಕ್ಷಣಂ ಧರ್ಮಂ** - ಮೋಕ್ಷವಲ್ಲದೆ ಇತರ ಫಲಗಳನ್ನುಂಟುಮಾಡುವ ಧರ್ಮವು. ಅಂತಹ ಕರ್ಮಗಳು ಯಾವುವೆಂದರೆ ಐಹಿಕ ಮತ್ತು ಸ್ವರ್ಗಾದಿ ಭೋಗಗಳನ್ನುಂಟು ಮಾಡುವ ಕಾಮ್ಯ ಕರ್ಮ್ಯಗಳನ್ನು ಕುರಿತು, **ಪ್ರಜಾಪತಿರಥಾಬ್ರವೀತ್** - ಚತುರ್ಮುಖನು ಹೇಳಿದನು." **ಎಜ್ಞರಧರ್ಮಜ್ಞಳಿಲ್ ನಿವೃತ್ತರಾಯ್** - ಎಂಬಲ್ಲಿ ಹೇಳಿರುವ ಇಂತಹ ಕಾಮ್ಯಕರ್ಮಗಳಿಂದ ನಿವೃತ್ತಿಯನ್ನು ಹೊಂದಿ ಎಂದರೆ ಅವುಗಳನ್ನು ನಿಶ್ಶೇಷವಾಗಿ ತ್ಯಜಿಸಿ, **ನಿವೃತ್ತಿ ಲಕ್ಷಣಂ ಧರ್ಮಂ** - ಸಂಸಾರನಿವೃತ್ತಿ ಯುಂಟಾಗುವ ಲಕ್ಷಣವುಳ್ಳ ಎಂದರೆ ಮೋಕ್ಷಪ್ರಾಪ್ತಿಯೇ ಲಕ್ಷಣವಾಗಿವುಳ್ಳ ಧರ್ಮಗಳನ್ನು, **ಋಷಿರ್ನಾರಾಯಣೋ ಬ್ರವೀತ್** - ಬದರಿಕಾವಾಸಿಯಾದ ಶ್ರೀಮಾನ್ನಾರಾಯಣಋಷಿಯು ಹೇಳಿದನು" **ಎಜ್ಞರ ನಿವೃತ್ತಿಧರ್ಮಜ್ಞಳಿಗೆ** - ಎಂಬಲ್ಲಿ ಹೇಳಿರುವ ಸಂಸಾರನಿವೃತ್ತಿಯುಂಟಾಗುವ ವ್ಯಾಪಾರಗಳಲ್ಲಿ, **ಪ್ರವೃತ್ತರಾನವರ್ ಮುಮುಕ್ಷುಕ್ಕಳಾನ ಅಧಿಕಾರ್ಗಳ್** - ಪ್ರವೃತ್ತಿಯುಳ್ಳವರು ಮೋಕ್ಷಾರ್ಥಿಗಳಾಗಿ ಮುಮುಕ್ಷುಗಳೆಂಬ ಅಧಿಕಾರ

(೧) ಭಾರ. ಶಾನ್ತಿ ೨೧೯.೪.

ಲಕ್ಷಣಂ ಧರ್ಮ ಮೃಷಿರ್ನಾರಾಯಣೋಬ್ರವೀತ್" ಎಜ್ಞರ ನಿವೃತ್ತಿ ಧರ್ಮ ಜ್ಞಳಿಲೆ ಪ್ರವೃತ್ತರಾನವರ್ಗಳ್ ಮುಮುಕ್ಷುಕ್ಕಳಾನ ವಧಿಕಾರಿಗಳ್.

ಗಳು ಎಂದರೆ ಮೋಕ್ಷವನ್ನು ಹೊಂದಲು ಯೋಗ್ಯರು. **ಪ್ರವೃತ್ತಿಂಚ ನಿವೃತ್ತಿಂಚ ದ್ವಿವಿಧಂ ಕರ್ಮವೈದಿಕಂ"** ಎಂದು ಹೇಳಿರುವಹಾಗೆ ಕರ್ಮಗಳು ಎರಡು ವಿಧವು ಐಶ್ವರ್ಯಾದಿ ಕಾಮನೆಗಳಿಂದಲೂ ಸ್ವರ್ಗಾದಿಭೋಗಕಾಮನೆಗಳಿಂದಲೂ ಮಾಡುವ ವೈದಿಕಧರ್ಮಗಳು ಪ್ರವೃತ್ತಿಧರ್ಮಗಳಿಂದೂ, ಮೋಕ್ಷದಲ್ಲಿ ಭಗವದನುಭವವನ್ನು ಕೊಡುವ ಧರ್ಮಗಳು ನಿವೃತ್ತಿಧರ್ಮಗಳು. ಮುಮುಕ್ಷುವಾದವನು ಪ್ರವೃತ್ತಿಧರ್ಮಗಳನ್ನು ತ್ಯಜಿಸಿ ನಿವೃತ್ತಿಧರ್ಮಗಳನ್ನ ಅವಲಂಬಿಸತಕ್ಕದೆಂಬ ಭಾವವು. ಏಕೆಂದರೆ(೧)— **"ಪ್ರವೃತ್ತಿಪುನರಾವೃತ್ತಿರ್ನಿವೃತ್ತಿಃ ಪರಮಾ ಗತಿಃ"**ಎಂದು ಅಲ್ಲಿಯೇ ಹೇಳಿರುವ ಮೇರಿಗೆ ಪ್ರವೃತ್ತಿಧರ್ಮಾಚರಣೆಯಿಂದ ಪುನಃ ಸಂಸಾರಪ್ರಾಪ್ತಿಯೂ ನಿವೃತ್ತಿಧರ್ಮಾಚರಣೆಯಿಂದ ಶ್ರೇಷ್ಠವಾದ ಗತಿಯಾದ ಮೋಕ್ಷವೂ ಪ್ರಾಪ್ತವಾಗುತ್ತವೆ ಎಂದು ಹೇಳಲ್ಪಟ್ಟಿರುತ್ತದೆ.

ಮುಮುಕ್ಷುಗಳಾಗಿರಲು ಅಧಿಕಾರಿಗಳು ಎಂಥಾವರಾಗಿರಬೇಕೆಂದರೆ ಈಮೇಲೆ ಆರುವಾಕ್ಯಗಳಿಂದಲೂ ಹೇಳಿವ ವಿಶೇಷಣಗಳಿಂದ ಯುಕ್ತರಾಗಿರಬೇಕೆಂದೂ, ಇವುಗಳಲ್ಲಿ ಯಾವುದಾದರೂ ಒಂದು ವಿಶೇಷಣವಿಲ್ಲದಿದ್ದರೂ ಆತನು ಅಧಿಕಾರಿಯಾಗುವದಿಲ್ಲವೆಂದೂ ಅಭಿಪ್ರಾಯವು,

ಸಂಗ್ರಹವಾಗಿ ಮೋಕ್ಷಾರ್ಥಿಯಾಗಿರುವ ಅಧಿಕಾರಿಗಳು ಎಂಥಾವರಾಗಿರಬೇಕೆಂದರೆ:—

೧. ತಮ್ಮ ಪರಿಶುದ್ಧವಾದ ಆತ್ಮಸ್ವರೂಪವನ್ನು ತಿಳಿದವರಾಗಿ, ಆತ್ಮವು ದೇಹಾದ್ವಿಲಕ್ಷಣವೆಂದು ತಿಳಿದು, ಪರದೇವತಾಪಾರಮಾರ್ಥ್ಯವನ್ನು ತಿಳಿದು, ಆ ಕಾರಣದಿಂದ ವಿಲಕ್ಷಣವಾದ ದಿವ್ಯವೈಕುಂತವನ್ನು ಕುರಿತು ಹೋಗಲು ಅರ್ಹರಾಗಿರಬೇಕು.

೨. ಎಲ್ಲಾ ದುಷ್ಕರ್ಮಗಳಿಂದಲೂ ನಿವೃತ್ತರಾಗಿ ಪಾಪಭೀತರಾಗಿರಬೇಕು.

೩. ಸರ್ವೇಶ್ವರನು ತನಗೆ ಆಧಾರನು, ನಿಯಾಮಕನು, ಶೇಷಿಯು, ವಿಭುವು, ಸರ್ವಜ್ಞನು, ದಿವ್ಯಮಙ್ಗಳವಿಗ್ರಹಯುಕ್ತನಾಗಿ ವಿಲಕ್ಷಣನು ತಾವಾದರೋ ಆಧೇಯರು, ನಿಯಾಮ್ಯರು, ಶೇಷರು, ಅಣುಗಳು, ಅಜ್ಞರು, ಹೇಯವಿಗ್ರಹಯುಕ್ತರು,

[೧] ಭಾರತ ಮೋಕ್ಷಧರ್ಮ ೨೧೯. ೪.

ಪರಃಪುರುಷಾರ್ಥೋಪಾಯಾನುಷ್ಠಾನಮ್ ಆವಶ್ಯಕಂ

ಕೀಳ್ ಚೊನ್ನ ಪಡಿಯಿಲೆಪರಾವರಜ್ಞಾನ ತತ್ವಜ್ಞಳುಮ್, ಪುರುಷಾರ್ಥಂಗಳುಮ್ ತೆಳಿನ್ದಾಲುಮ್, ಇಪ್ಪಡಿ ವೈರಾಗ್ಯಪೂರ್ವಕವಾಗ

ಆದುದರಿಂದ ಅಂತಹ ವಿಲಕ್ಷಣನಾದ ಸರ್ವೇಶ್ವರನಿಗೆ ಕೈಂಕರ್ಯಮಾಡುವದೇ ಸ್ವರೂಪವೆಂದು ತಿಳಿದವರಾಗಿರಬೇಕು.

೪. ಅಹಂಕಾರಸುಮಕಾರಗಳಿಲ್ಲದವರಾಗಿರಬೇಕು. ಆ ಅಹಂಕಾರಮಮಕಾರಗಳು ಐದು ವಿಧವಾಗಿ ಉಂಟಾಗಬಹುದೆಂದು ಹಿಂದೆ ವಿಶದವಾಗಿ ತೋರ್ಪಡಿಸಿರುತ್ತದೆ.

೫. ಐಹಿಕದ ಮತ್ತು ಸ್ವರ್ಗಾದಿ ಲೋಕಗಳ ಭೋಗಗಳಲ್ಲೂ ಮತ್ತು ಕೈವಲ್ಯಾನುಭವದಲ್ಲೂ ದೋಷಗಳಿವೆಯೆಂದು ತಿಳಿದು, ಅಂತಹ ದೋಷಸಂಪ್ತಕಗಳೊಂದೂ ಪರಮಾತ್ಮಾನುಭವದಲ್ಲಿಲ್ಲವಾದುದರಿಂದ, ಪರಮಾತ್ಮನಲ್ಲೇ ಮನಸ್ಸನ್ನಿಟ್ಟವರಾಗಿಯೂ, ಮಿಕ್ಕ ಇತರ ವಿಷಯಗಳಲ್ಲಿ ವೈರಾಗ್ಯಉಳ್ಳವರಾಗಿಯೂ ಇರಬೇಕು.

೬. ಕಾಮ್ಯಕರ್ಮಗಳಲ್ಲಿ ಅಪೇಕ್ಷೆ ಇಲ್ಲದವರಾಗಿಯೂ, ನಿವೃತ್ತಿಧರ್ಮಗಳಲ್ಲಿ ಪ್ರವರ್ತಿಸುವರಾಗಿಯೂ ಇರಬೇಕು.

ಹೀಗೆ ಈ ಆರು ಧರ್ಮಗಳೂ ಇದ್ದರೆ ಮುಮುಕ್ಷುವಾಗಿರಲು ಅಧಿಕಾರವುಳ್ಳವರಾಗುತ್ತಾರೆಂದು ಹೇಳಿದರು.

ಹಿಂದೆ ಮುಮುಕ್ಷುವಾಗಿರಲು ಅಧಿಕಾರಿಗಳು ಯಾರು ಎಂಬುವದನ್ನು ವಿಸ್ತರಿಸಿದರು. ಅದರಲ್ಲಿ ಧರ್ಮಗಳು ಎರಡುವಿಧವೆಂದು ಹೇಳಿದರು, ಪ್ರವೃತ್ತಿಧರ್ಮಗಳು ಕಾಮ್ಯಗಳಾದುದರಿಂದ ಗ್ರಾಹ್ಯವಲ್ಲವೆಂದು ತಿರಸ್ಕರಿಸಿದರು. ನಿವೃತ್ತಿಧರ್ಮವೀಗ ಅತ್ಯಾವಶ್ಯಕವೆಂದು ಮುಂದೆ ಹೇಳುತ್ತಾರೆ. ತತ್ವಜ್ಞಾನಪುರುಷಾರ್ಥಜ್ಞಾನವೇನೋ ಇರಬಹುದು. ಹಿತಾನುಷ್ಠಾನವಿಲ್ಲದಿದ್ದರೆ ಪ್ರಯೋಜನವಿಲ್ಲವು. ಆದುದರಿಂದ ಪರಮಪುರುಷಾರ್ಥವು ಯಾವುದು ಎಂಬ ಜ್ಞಾನ ಯಾವಾಗ ಉಂಟಾಯಿತೋ, ಆಗ ತತ್ಪ್ರಾಪ್ತಿಗಾಗಿ ಬೇಕಾದ ಉಪಾಯಾನುಷ್ಠಾನವು ಮುಖ್ಯವೆಂದು ಹೇಳುತ್ತಾರೆ.

ಕೀಳ್ ಚೊನ್ನ ಪಡಿಯಿಲೇ – ಹಿಂದೆ ಮುಮುಕ್ಷುಧರ್ಮಗಳನ್ನು ವಿವರಿಸುವ ಸಂದರ್ಭದಲ್ಲಿ ಹೇಳಿದಹಾಗೆ ಅಥವಾ ಹಿಂದೆ ಅರ್ಥಪಂಚಕ ತತ್ವತ್ರಯಾಧಿಕಾರಗಳಲ್ಲಿ, ಹೇಳಿರುವ ಹಾಗೆ, **ಪರಾವರತತ್ವಜ್ಞಳುಮ್** – ಪರತತ್ವವು ಶ್ರೀಮನ್ನಾರಾಯಣನು, **ಅವರತತ್ವಜ್ಞಳ್** – ಶ್ರೇಷ್ಠವಲ್ಲದ ತತ್ವಗಳು, ಚಿತ್ತು ಅಚಿ

ಪರಮಪುರುಷಾರ್ಥೋಪಾಯಾನುಷ್ಠಾನತ್ತಿಲ್ ಪ್ರವೃತ್ತಿಯಾನಾಕಿಲ್,
(೧) "ಶೀಲವೃತ್ತ ಫಲಂಶ್ರುತಂ"

ತ್ತುಗಳು, **ಪುರುಷಾರ್ಥಂಗಳುಮ್**– ಚತುರ್ವಿಧಪುರುಷಾರ್ಥಗಳಲ್ಲಿ ಮುಖ್ಯವಾದ ಭಗವದನುಭವಕ್ಕೈಂಕರ್ಯಪ್ರಾಪ್ತಿರೂಪ ಫಲಗಳು, **ತೆಳಿನ್ದಾಲುಮ್** - ತಿಳಿದರೂ, **ಇಪ್ಪಡಿ** - ಈ ಮೇಲೆ ಹೇಳಿದ ರೀತಿಯಲ್ಲಿ, **ವೈರಾಗ್ಯಪೂರ್ವಕಮಾಕ** - ಐಹಿಕಾದಿ ವಿಷಯಗಳಲ್ಲಿ ವೈರಾಗ್ಯದೊಂದಿಗೆ, **ಪರಮಪುರುಷಾರ್ಥೋಪಾಯಾನುಷ್ಠಾನತ್ತಿಲ್** - ಪುರುಷಾರ್ಥಗಳಲ್ಲಿ ಸರ್ವಶ್ರೇಷ್ಠವಾದ ಸಾಧ್ಯೋಪಾಯಾನುಷ್ಠಾನದಲ್ಲಿ, **ಪ್ರವೃತ್ತಿಯಾನಾಕಿಲ್** - ವ್ಯವೃತ್ತನಲ್ಲದೇ ಹೋದರೆ, **ಹಾಸ್ಯನಾಂ** – ಅಪಹಾಸ್ಯಕ್ಕೆ ಕಾರಣನಾಗುವನು ಎಂದು ಮುಂದೆ ಇದೆ. ಹೇಗೆಂದರೆ ತಿಳಿಸುತ್ತಾರೆ. "**ಶ್ರುತಂ**-ಶಾಸ್ತ್ರಶ್ರವಣದಿಂದುಂಟಾದ ಜ್ಞಾನವು, **ಶೀಲವೃತ್ತಫಲಂ**, ಶೀಲವೆಂದರೆ ಒಳ್ಳೇ ಆತ್ಮಗುಣಗಳನ್ನು ಹೊಂದಿರುವಿಕೆಯೂ ಮತ್ತು ವೃತ್ತವೆಂದರೆ, ಶಾಸ್ತ್ರಾನುಗುಣವಾಗಿ ಅನುಷ್ಠಾನವೂ, ಇವುಗಳನ್ನೇ ಫಲವಾಗಿ ಉಳ್ಳದು ಎಂದರೆ ಗುರುವಿನಿಂದುಂಟಾದ ಶಾಸ್ತ್ರೋಪದೇಶಶ್ರವಣಜ್ಞಾನಕ್ಕೆ ಫಲವ್ಯಾವುದು ಎಂದರೆ ಶಾಸ್ತ್ರದಲ್ಲಿ ಯಾವ ಯಾವ ಗುಣಗಳನ್ನು ತಾನು ಹೊಂದಿರಬೇಕೆಂದು ಹೇಳಿತೋ ಆ ದಿವ್ಯಾತ್ಮಗುಣಗಳನ್ನುಹೊಂದಿರೋಣವು ಮತ್ತು ಶಾಸ್ತ್ರದಲ್ಲಿ ಯಾವುದನ್ನು ಮಾಡು, ಯಾವುದನ್ನು ಮಾಡಬೇಡ ಎಂದು ಹೇಳಿರುತ್ತದೆಯೋ ಅದಕ್ಕನುಗುಣವಾಗಿ ಅನುಷ್ಠಾನವೂಇವೇ ಶಾಸ್ತ್ರಶ್ರವಣಜ್ಞಾನಕ್ಕೆ ಫಲಗಳು. ಪರಮಪುರುಷಾರ್ಥೋಪಾಯಾನುಷ್ಠಾನವು ಆವಶ್ಯಕವೆಂಬುವದಕ್ಕೆ ಇದು ಪ್ರಮಾಣವು. ಯುಧಿಷ್ಠಿರನು ನಾರದರನ್ನು ಕೇಳುತ್ತಾನೆ:—ವೇದಗಳು, ಧನ ದಾರ, ಶಾಸ್ತ್ರಶ್ರವಣ ಇವುಗಳು ಹೇಗೆ ಸಫಲಗಳು ಎಂದು ಪ್ರಶ್ನೆಯು ಅದಕ್ಕೆ ನಾರದರು ಉತ್ತರ ಹೇಳುತ್ತಾರೆ:—

ಅಗ್ನಿಹೋತ್ರಫಲಾ ವೇದಾ ದತ್ತಭುಕ್ತಫಲಂ ಧನಂ ।
ರತಿಪುತ್ರಫಲಾ ದಾರಾಃ ಶೀಲವೃತ್ತಫಲಂ ಶ್ರುತಂ॥

"ವೇದಗಳು ಅಗ್ನಿಹೋತ್ರ ಮೊದಲಾದವುಗಳನ್ನು ನಡಿಸುವದೇ ಫಲವಾಗಿ ಉಳ್ಳವು; ಧನವು ಇತರರಿಗೆ ದಾನಮಾಡುವದೂ, ತಾನು ಅನುಭವಿಸುವದೂ ಇವುಗಳೇ ಫಲವಾಗಿ ಉಳ್ಳವು; ಹೆಂಡತಿಯು, ಭೋಗ ಮತ್ತು ಪುತ್ರಪ್ರಾಪ್ತಿ ಇವು

[೧] ಭಾರತ ಸಭಾ. ಅ. ೧೧೬

"ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ।
ತಸ್ಮಾತ್ಸ ಸರ್ವಶಾಸ್ತ್ರಜ್ಞೋ ಯಸ್ಯ ಶಾನ್ತಂ ಮನಸ್ಸದಾ,"

ಎಜ್ಜಾರ ಶ್ರುತಫಲತ್ರೈಯುಮ್ ಇಳನ್ದು,

"ನಾಚ್ಛಾದಯತಿ ಕೌಪೀನಂ ನ ದಂಶಮಶಕಾಪಹಂ।
ಶುನಃ ಪುಚ್ಛಮಿವಾನರ್ಥಂ ಪಾಂಡಿತ್ಯಂ ಧರ್ಮವರ್ಜಿತಂ ॥"

ಗಳನ್ನೇ ಫಲವಾಗಿ ಉಳ್ಳದು; ಶಾಸ್ತ್ರೋಪದೇಶಶ್ರವಣವಾದರೋ ಒಳ್ಳೇ ಆತ್ಮಗುಣಗಳನ್ನು ಹೊಂದುವಿಕೆ, ಸದಾಚಾರಾನುಷ್ಠಾನ, ಇವುಗಳನ್ನೇ ಫಲವಾಗಿ ಉಳ್ಳದು" ಎಂದು ಉತ್ತರಹೇಳಿದರು.

ಶಮಾರ್ಥಂ – ಶಮಾದಿಗುಣಗಳು ಸಿದ್ಧಿಸುವದಕ್ಕೋಸ್ಕರ, ಶಮವೆಂದರೆ ಅಂತರಿಂದ್ರಿಯ ನಿಗ್ರಹವು, **ಸರ್ವಶಾಸ್ತ್ರಾಣಿ**-ಸಮಸ್ತಶಾಸ್ತ್ರಗಳೂ, **ಮನೀಷಿಭಿಃ**-ಪಂಡಿತರುಗಳಿಂದ, **ವಿಹಿತಾನಿ** - ಹೇಳಲ್ಪಟ್ಟವು; **ತಸ್ಮಾತ್** –ಆ ಕಾರಣದ ದೆಸೆಯಿಂದ, **ಯಸ್ಯ** – ಯಾವನಿಗೆ, **ಮನಃ** - ಮನಸ್ಸು, **ಸದಾ** - ಯಾವಾಗಲೂ, **ಶಾನ್ತಂ** – (೧) ಊರ್ಮಿಷಟ್ಕಗಳಿಲ್ಲದೆ ವಿಷಯವೈರಾಗ್ಯ ಉಳ್ಳದೋ, **ಸಃ** – ಅವನು, **ಸರ್ವಶಾಸ್ತ್ರಜ್ಞಃ** – ಸಮಸ್ತ ಶಾಸ್ತ್ರಗಳನ್ನೂ ತಿಳಿದವನು. (ಇತಿಹಾಸ ಸಮುಚ್ಚಯ, ೧೪. ೪೨) **ಎಜ್ಜಾರಶ್ರುತಫಲತ್ರೈಯುಮ್** - ಎಂಬ ಪ್ರಮಾಣಗಳಲ್ಲಿ ಹೇಳಲ್ಪಟ್ಟ, ಶಾಸ್ತ್ರೋಪದೇಶ ಶ್ರವಣದಿಂದುಂಟಾಗುವ ಫಲವನ್ನೂ, **ಇಳನ್ದು** – ತ್ಯಜಿಸಿ,**"ಶುನಃ ಪುಚ್ಛಂ** - ನಾಯಿಯ ಬಾಲವು, **ಕೌಪೀನಂ** - ಗುಹ್ಯಪ್ರದೇಶವನ್ನು,**ನಾಚ್ಛಾದಯತಿ** - ಮರೆಮಾಡುವದಿಲ್ಲವು, **ನ ದಂಶಮಶಕಾಪಹಂ** – ನೊಣ, ಸೊಳ್ಳೆಗಳನ್ನು ನಿವಾರಣೆಮಾಡುವದಿಲ್ಲವು, **ಇವ** - ಅದರ ಹಾಗೆ, **ಧರ್ಮವರ್ಜಿತಂ** - ಅನುಷ್ಠಾನವಿಲ್ಲದ, **ಪಾಂಡಿತ್ಯಂ**-ಪಾಂಡಿತ್ಯವು, ಶಾಸ್ತ್ರಜ್ಞಾನವು, **ಅನರ್ಥಂ** - ಅನರ್ಥವಾದುದು, ಪ್ರಯೋಜನಕಾರಿಯಲ್ಲವು," **ಎಜ್ಜಾರಪಡಿಯೇ** – ಎಂದು ಹೇಳಿರುವ ಹಾಗೆ **ಹಾಸ್ಯನಾಂ** - ಅಪಹಾಸ್ಯಕ್ಕೆ ಗುರಿಯಾಗುವನು.

ಹಿಂದೆ ಐಹಿಕ ಮೊದಲಾದವುಗಳಲ್ಲಿ ವೈರಾಗ್ಯವೂ, ಪರಮಪುರುಷಾರ್ಥವನ್ನು ಹೊಂದುವ ಉಪಾಯದ ಅನುಷ್ಠಾನವೂ ಆವಶ್ಯಕವೆಂದೂ, ನಿವೃತ್ತಿಧರ್ಮ

---

(೧) ಊರ್ಮಿಷಟ್ಕಗಳು ಯಾವುವೆಂದರೆ:—ಅಶನಾಯಾ ಪಿಪಾಸೇ ಶೋಕಮೋಹೌ ಜರಾ ಮೃತ್ಯೂ ಚ ಊರ್ಮಯಃ; ಹಸಿವೆ, ನೀರಡಿಕೆ, ಶೋಕ, ಮೋಹ, ಮುಪ್ಪು, ಮೃತ್ಯು.

ಎಜಿಸ್ಟಿರಪಡಿಯೇ ಹಾಸ್ಯನಾವುಂ. ಆಕ್ಕೈಯಾಲ್

(೧) "ವಯಸಃ ಕರ್ಮಣೋರ್ಥಸ್ಯ ಶ್ರುತಸ್ಯಾಭಿಜನಸ್ಯ ಚ।
ವೇಷವಾಗ್ಬೃತ್ತಿಸಾರೂಪ್ಯಮಾಚರ್ಯ ವಿಚರೇದಿಹ॥"

ಗಳನ್ನು ಅವಲಂಬಿಸತಕ್ಕದ್ದೆಂದೂ, ಹೇಳಿದರು. ಹೀಗೆ ಎಲ್ಲಾ ಶಾಸ್ತ್ರಜ್ಞಾನವನ್ನು ಸಂಪಾದಿಸಿಕೊಂಡಿದ್ದರೂ, ಆತನು ಅನುಷ್ಠಾನಪರನಲ್ಲದೇ ಹೋದರೆ, ಅಂತಹ ಅವನಅನುಷ್ಠಾನವಿಲ್ಲದ ಪಾಂಡಿತ್ಯವು ನಾಯಿಬಾಲಕ್ಕೆ ಸಮಾನವೆಂದು ಹೇಳಲ್ಪಟ್ಟಿತು. ನಾಯಿಯು ಬಾಲವನ್ನು ಎತ್ತಿಕೊಂಡಿರುವದರಿಂದ ಮಾನವನ್ನು ಮರಿಸಿಕೊಳ್ಳದಿರುವದರಿಂದ ಸ್ವರೂಪವನ್ನು ಕಾಪಾಡಿಕೊಳ್ಳುವ ಶಕ್ತಿಯೂ ಇಲ್ಲದೆಯೂ, ಮತ್ತು ಮೈಮೇಲೆ ಕೂತುಕೊಳ್ಳುವ ಸೊಳ್ಳೆನೊಣಗಳನ್ನು ಅದರಿಂದ ನಿವಾರಿಸಕೊಳ್ಳದೆಯೂ ಇರುತ್ತದೆ. ಗೋಪುಚ್ಛವಾದರೋ ಮಾನವನ್ನೂ ಕಾಪಾಡಿಕೊಳ್ಳುತ್ತದೆ, ನೊಣಸೊಳ್ಳೆಗಳನ್ನೂ ಹೋಗಲಾಡಿಸಿಕೊಳ್ಳಬಲ್ಲದು. ಆದುದರಿಂದ ಅನುಷ್ಠಾನವಿಲ್ಲದ ಪಾಂಡಿತ್ಯವು ಸ್ವರೂಪವನ್ನೂ ಕಾಪಾಡಿಕೊಳ್ಳಲಾರದು, ಪುರುಷಾರ್ಥಗಳನ್ನೂ ಹೊಂದಲಾರದು; ಅನುಷ್ಠಾನಯುಕ್ತ ಪಾಂಡಿತ್ಯವು ಸ್ವರೂಪವನ್ನೂ ಕಾಪಾಡಿಕೊಳ್ಳುವದಲ್ಲದೆ ಪುರುಷಾರ್ಥಗಳನ್ನು ಹೊಂದಬಲ್ಲದು ಎಂಬಭಿಪ್ರಾಯವು. ಅನುಷ್ಠಾನವಿಲ್ಲದವನ ಪಾಂಡಿತ್ಯವನ್ನು ನೋಡಿ ಇತರರು ಅಪಹಾಸ್ಯಮಾಡುವರೆಂದು ಹೇಳಿದರು. ಮುಂದೆ, ಹಾಗಲ್ಲದೆ ಮುಮುಕ್ಷುವಾಗಿ ಪರಮಪುರುಷಾರ್ಥಾನುಷ್ಠಾನಪರನು ಪರಮಶ್ರೇಯಸ್ಸನ್ನು ಹೊಂದುವನೆಂದು ಹೇಳುತ್ತಾರೆ.

ಆಕ್ಕೈಯಾಲ್ - ಆದುದರಿಂದ, ಎಂದರೆ ಕರ್ಮಾನುಷ್ಠಾನವಿಲ್ಲದ ಒಣಪಾಂಡಿತ್ಯವು ಅನರ್ಥವಾದುದಾಗಿ ಹಾಸ್ಯಾಸ್ಪದವಾಗುವದರಿಂದ, **ವಯಸಃ** - ವಯಸ್ಸಿಗೂ, **ಕರ್ಮಣಃ** - ಮಾಡುವಕರ್ಮಕ್ಕೂ, **ಅರ್ಥಸ್ಯ** - ಪ್ರಯೋಜನಕ್ಕೂ, **ಶ್ರುತಸ್ಯ** - ಶಾಸ್ತ್ರವನ್ನು ಕೇಳಿ ತಿಳಿದದ್ದಕ್ಕೂ, **ಅಭಿಜನಸ್ಯ** - ಸತ್ಕುಲಪ್ರಸೂತತೆಗೂ, **ವೇಷವಾಗ್ವೃತ್ತಿ ಸಾರೂಪ್ಯಂ** - ಅಲಂಕಾರ, ವಾಕ್ಕು, ವ್ಯಾಪಾರಗಳ ಅನುರೂಪವಾಗಿರುವ ಭಾವವನ್ನು, **ಆಚರ್ಯ** - ಆಚರಿಸುವವನಾಗಿ, **ಇಹ** - ಈ ಈ ಲೋಕದಲ್ಲಿ, **ವಿಚರೇತ್** - ಸಂಚರಿಸತಕ್ಕದ್ದು, ವರ್ತಿಸತಕ್ಕದ್ದೆಂಬ ಭಾವವು. ಇಲ್ಲಿ ವಯಸ್ಸೇ ಮೊದಲಾದವುಗಳಿಗೆ ಅನುರೂಪವಾದ ವೇಷವೇನು, ಮಾತೇನು, ವ್ಯಾಪಾರವೇನು ಇವುಗಳು ಇರತಕ್ಕದ್ದೆಂದು ಉಪದೇಶಿಸಲ್ಪಟ್ಟಿತು. ಬಾಲ್ಯ, ಕೌಮಾರ, ಯೌವನ, ವೃದ್ಧತೆಗಳಿಗೆ ಸರಿಯಾದ ಉಡುಪು, ಮಾತು, ವ್ಯಾಪಾರಗಳು

---

(೧) ಮನುಸ್ಮೃತಿ, ೪—೧೪.

ಎಜ್ಜರ ಪಡಿಯೇ ಶ್ರುತಾನು ರೂಪಮಾಕ ಸ್ವೋಚಿತವಾನ ಪರಮ ಪುರುಷಾರ್ಥೋಪಾಯಾನುಷ್ಠಾನತ್ತಿಲೇ ತ್ವರಿಕ್ಕುಮವರ್‌ಗಳ್, "ತನ್ನ ರುಮುಮ್ ಶೆಯ್ಯಿಪ್ಪಿರರುಕನ್ತಾರ್" ಎಜ್ಜರಪಡಿಯೇ (೧) "ತಂ ದೇವಾ ಬ್ರಾಹ್ಮಣಂ ವಿದುಃ," (೨) "ಪ್ರಣಮಂತಿ ದೇವತಾಃ" ಇತ್ಯಾದಿಗಳಿಲ್ ಚೊಲ್ಲು ಮೇತ್ತವುಂ ಪೆರುವರ್‌ಗಳ್.

ಆವಶ್ಯಕವು ; ಅದಕ್ಕಾಗಿಯೇ ಕವಿಯು ರಘುವಂಶೀಯರಲ್ಲಿ ವಯಸ್ಸು ಕುಲ ಇವು ಗಳಿಗೆ ಅನುರೂಪವಾದ ವ್ಯಾಪಾರಾದಿಗಳಿತ್ತೆಂದು,

"ಶೈಶವೇಽಭ್ಯಸ್ತ ವಿದ್ಯಾನಾಂ ಯುವ್ವನೇ ವಿಷಯೈಷಿಣಾಂ ।
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ" ॥

ಈ ರೀತಿಯಾಗಿ ಕೊಂಡಾಡಿರುತ್ತಾನೆ, ಇಲ್ಲಿ ಮುಖ್ಯವಾಗಿ ಹೇಳತಕ್ಕ ವಿಷಯ ವ್ಯಾವುದೆಂದರೆ:—**ಶ್ರುತಸ್ಯ** – ಶಾಸ್ತ್ರಜ್ಞಾನೋಪದೇಶ ಹೊಂದಿದವನಿಗೆ ಅನುರೂ ಪವಾದ ವ್ಯಾಪಾರಾದಿಗಳಾದ, ನಿತ್ಯನೈಮಿತ್ತಿಕಾನುಷ್ಠಾನವೂ, ಉಪಾಯಾನುಷ್ಠಾ ನವೂ, ಆವಶ್ಯಕವೆಂದು ತೋರಿಸಲ್ಪಟ್ಟಿತು. **ಎಜ್ಜರಪಡಿಯೇ** - ಈ ಮೇಲೆ ಹೇಳಿದ ಶ್ಲೋಕದಲ್ಲಿ ಹೇಳಿರುವ ಹಾಗೆ, **ಶ್ರುತಾನುರೂಪಮಾಕ** - ಶಾಸ್ತ್ರೋಪ ದೇಶಕ್ಕೆ ಅನುರೂಪವಾದ, **ಸ್ವೋಚಿತವಾನ** - ತನ್ನ ಸ್ವರೂಪಕ್ಕೆ ಯೋಗ್ಯ ವಾದ, **ಪರಮಪುರಷಾರ್ಥೋಪಾಯಾನುಷ್ಠಾನತ್ತಿಲೆ**-ಪುರುಷಾರ್ಥಗಳಲ್ಲೆಲ್ಲಾ ಸರ್ವಶ್ರೇಷ್ಠವಾದ ಮೋಕ್ಷಪ್ರಾಪ್ತಿಗೆ ಸಾಧನಭೂತವಾದ ಪ್ರಪದನಾನುಷ್ಠಾನದಲ್ಲಿ, **ತ್ವರಿಕ್ಕುಮವರ್‌ಗಳ್** – ದೇಹವು ಅಶಾಶ್ವ ವೆಂದು ತಿಳಿದು, ಅವಸರಪಟ್ಟು ಪ್ರವರ್ತಿಸುವರು, **ತನ್ ಕರುಮುಮ್ ಶೆಯ್ಯ**-ತಾನು ಕರ್ಮಾನುಷ್ಠಾನವನ್ನು ಮಾಡ ಲಾಗಿ, **ಪಿರರುಕನ್ತಾರ್** – ಇತರರಾದ ಮಹನೀಯರುಗಳು ಸಂತೋಷಪಟ್ಟರು. ಎಂದರೆ ಯಾವುವನ್ನು ಭಾಗವತೋತ್ತಮರು ಕಂಡು ಶ್ಲಾಘಿಸುವರೋ ಅದೇ ಧರ್ಮವು, ಯಾವುದನ್ನು ನಿಂದಿಸುವರೋ ಅದೇ ಅಧರ್ಮವು, ಯಾವ ಕಾರ್ಯ ವನ್ನು ಅನುಷ್ಠಿಸಿದರೆ ಭಾಗವತೋತ್ತಮರು ಶ್ಲಾಘಿಸುವರೋ ಅಂತಹ ಕಾರ್ಯ ವನ್ನು ಮಾಡತಕ್ಕದ್ದೆಂಬ ಭಾವವು. **ಎಜ್ಜರಪಡಿಯೇ** - ಎಂದು ಹೇಳಿರುವ ಹಾಗೆ, "**ತಂ ದೇವಾ ಬ್ರಾಹ್ಮಣಂ ವಿದುಃ**– ಅಂತಹ ಅನುಷ್ಠಾನಪರನನ್ನು ಸರಿ ಯಾದ ಬ್ರಾಹ್ಮಣನೆಂದು ತಿಳಿಯುತ್ತಾರೆ" ಎಂದೂ ಮತ್ತು "**ಪ್ರಣಮಂತಿದೇವ ತಾಃ**-ಅಂಥಾವನನ್ನು ದೇವತೆಗಳು ಕಂಡು ನಮಸ್ಕರಿಸುವರು" **ಇತ್ಯಾದಿಗಳಿಲ್**-

---

(೧) ಭಾರತ ಶಾಂತಿ. ೧೧೪. ೧೧. (೨) ವಿಷ್ಣುಧರ್ಮ, ೪೩. ೨೬.

ಎಂಬಿನೇ ಮೊದಲಾದ ವಾಕ್ಯಗಳಲ್ಲಿ, **ಚೊಲ್ಲುಮೇತ್ತಂ** - ಹೇಳಿರುವ ಮಾಹಾತ್ಮ್ಯವನ್ನು, **ಪೆರುವರ್‌ಗಳ್** – ಹೊಂದುವರು. ಶಾಸ್ತ್ರಶ್ರವಣಕ್ಕೆ ಅನುಸಾರವಾದ ಅನುಷ್ಠಾನಪರನೇ ಸರ್ವೋತ್ಕೃಷ್ಟನು, ಆತನಿಗೆ ಪರಮ ನಿಶ್ರೇಯಸ್ಸು ಉಂಟಲ್ಲದೆ, ಆತನನ್ನೇ ಮಹಾ ಭಾಗವತೋತ್ತಮರುಗಳೂ ಕೂಡ ಶ್ಲಾಘಿಸುವರು ಎಂದು ಹೇಳಿದರು.

"ಶಾಸ್ತ್ರಾದಿಷು ಸುದೃಷ್ಟಾಪಿ ಸಾಂಗಾಸಹ ಫಲೋದಯಾ ।
ನ ಪ್ರಸೀದತಿ ವೈ ವಿದ್ಯಾ ವಿನಾ ಸದುಪದೇಶತಃ॥ "

"ಅಂಗಗಳಿಂದೊಡಗೂಡಿ ಫಲವನ್ನುಂಟುಮಾಡುವ ಬ್ರಹ್ಮವಿದ್ಯೆಯು ಶಾಸ್ತ್ರಗಳಲ್ಲಿ ಚನ್ನಾಗಿ ಕಂಡು ಬಂದಿದ್ದರೂ, ಒಳ್ಳೇ ಸದ್ಗುರುವಿನ ಉಪದೇಶರೂಪವಾದ ಸಂಸ್ಕಾರವಿಲ್ಲದೆ ಕಾರ್ಯಕಾರಿಯಾಗುವದಿಲ್ಲ"ವೆಂದು ಹೇಳಿರುವದರಿಂದ, ಸದುಪದೇಶಕ್ಕನುರೂಪವಾದ ಅನುಷ್ಠಾನವೂ ಸಹ ಆ ಸಂಸ್ಕಾರಬಲದಿಂದ ಒದಗಬೇಕು. ಆಗತಾನೇ ಅದು ಕಾರ್ಯಕಾರಿಯಾದೀತೆಂಬ ಭಾವವು.

"ತಂ ದೇವಾ ಬ್ರಾಹ್ಮಣಂ ವಿದುಃ" ಎಂಬ ವಾಕ್ಯಸಂದರ್ಭವು ಯಾವುದೆಂದರೆ:—

"ಯೇನ ಕೇನಚಿದಾಚ್ಛನ್ನೋ ಯೇನ ಕೇನಚಿದಾಶಿತಃ ।
ಯತ್ರ ಕ್ವಚನ ಶಾಯೀ ಸ್ಯಾತ್ತಂ ದೇವಾ ಬ್ರಾಹ್ಮಣಂ ವಿದುಃ ॥
ಸರ್ವದ್ವಂದ್ವಸಹೋ ಧೀರಸ್ಸರ್ವಸಙ್ಗವಿವರ್ಜಿತಃ ।
ಸರ್ವಭೂತಹಿತೇ ಯುಕ್ತಸ್ತಂ ದೇವಾ ಬ್ರಾಹ್ಮಣಂ ವಿದುಃ ॥

ಯಾವುದಾದರೂ ಒಂದು ಬಟ್ಟೆಯನ್ನು ಧರಿಸಿದವನಾಗಿ, ಏನೋ ಒಂದಿಷ್ಟು ಆಹಾರತೆಗೆದುಕೊಳ್ಳುವನಾಗಿ, ಎಲ್ಲೋ ಒಂದು ಕಡೆಯಲ್ಲಿ ಮಲಗುವನಾಗಿ, ಎಂದರೆ ಪೀತಾಂಬರವೇ ಬೇಕೆಂಬ ಆಶೆಯಿಲ್ಲದೇ ಏನೋ ಒಂದು ಬಟ್ಟೆಯನ್ನು ಧರಿಸಿದವನಾಗಿ, ರುಚಿರುಚಿಯಾದ ಆಹಾರವೇ ಬೇಕೆಂಬ ಆಶೆಯಿಲ್ಲದೆ ಭಗವನ್ನಿವೇದಿತವಾದ ಸ್ವಲ್ಪ ಅನ್ನದಿಂದ ತೃಪ್ತನಾಗಿ, ಪರ್ಯಂಕವೇ ಬೇಕೆಂಬಪೇಕ್ಷೆಯಿಲ್ಲದೆ ನೆಲವೋ ಚಾಪೆಯೋ ಸಿಕ್ಕಿದರಲ್ಲಿ ಮಲಗಿ, ಹೀಗೆ ವೈರಾಗ್ಯಬುದ್ಧಿಯಿಂದ ನಿವೃತ್ತಿಧರ್ಮದಲ್ಲಿರುವವನನ್ನೀಗ ಬ್ರಾಹ್ಮಣನೆಂದು ತಿಳಿಯುತ್ತಾರೆ. ಯಾವನು ಸುಖದುಃಖಗಳೆರಡನ್ನೂ ಒಂದೇ ವಿಧವಾಗಿ ಭಾವಿಸಿ ಸಹಿಸಿಕೊಳ್ಳುವನೋ, ಸಮಸ್ತ ಐಹಿಕಗಳ ಸಂಗವನ್ನೂ ಬಿಟ್ಟಿರುವನೋ, ಸರ್ವಭೂತಗಳಿಗೂ ಹಿತಮಾಡುವವರಲ್ಲಿರುವನೋ ಅಂಥಾವನನ್ನೀಗ ಬ್ರಾಹ್ಮಣನೆಂದು ತಿಳಿಯುತ್ತಾರೆ" ಎಂದು ಹೇಳಲ್ಪಟ್ಟಿರುತ್ತದೆ.'

"ಪ್ರಣಮನ್ತಿ ದೇವತಾಃ" ಎಂಬ ಶ್ಲೋಕವ್ಯಾವುದೆಂದರೆ;—

ನಿನ್ರ ಪುರಾಣ ನಡಿಯಿಣೈ ಯೇನ್ದು ನೆಡುಮ್ ಪಯನುಮ್ ।
ಪೊನ್ರುತಲೇ ನಿಲೈ ಯೆನ್ರಿಡ ಪ್ಪೋಜ್ಗುಮ್ ಪವಕ್ಕಡಲುಮ್ ॥

"ದ್ರವನ್ತಿ ದೈತ್ಯಾಃ ಪ್ರಣಮನ್ತಿ ದೇವತಾ ।
ನಶ್ಯನ್ತಿ ರಕ್ಷಾಂಸ್ಯಪಯಾನ್ತ್ಯಥಾರಯಃ ॥
ಯತ್ಕೀರ್ತನಾತ್ಸ್ಫೀದ್ಭುತರೂಪಕೇಸರೀ ।
ಮಮಾಸ್ತು ಮಾಙ್ಗಲ್ಯವಿವೃದ್ಧಯೇ ಹರಿಃ" ॥

ದಾಲ್ಭ್ಯರೆಂಬುವರು ತಮ್ಮ ಗುರುವಾದ ಪೌಲಸ್ತ್ಯರನ್ನು ಕೇಳುತ್ತಾರೆ:—ಕಾರ್ಯಾರಂಭದಲ್ಲಿ ಕಾರ್ಯವು ನಿರ್ವಿಘ್ನವಾಗಿ ಪರಿಸಮಾಪ್ತಿಹೊಂದುವದಕ್ಕಾಗಲಿ, ಅಥವಾ ದುಸ್ಸ್ವಪ್ನಗಳ ಬಾಧೆ ಇಲ್ಲದಿರುವದಕ್ಕಾಗಲಿ, ಅಥವಾ ಇತರ ಅಮಂಗಳಗಳು ಪ್ರಾಪ್ತವಾಗದಿರುವದಕ್ಕಾಗಲಿ, ಏನು ಮಾಡತಕ್ಕದ್ದೆಂದು ಪ್ರಶ್ನಿಸಲು, ವಿಷ್ಣುಧರ್ಮದಲ್ಲಿರುವ ಮಾಂಗಲ್ಯವಿವೃದ್ಧಿಸ್ತೋತ್ರವನ್ನು ಪಠಿಸಿದರೆ ಈ ಮೇಲೆ ಹೇಳಿದವುಗಳೆಲ್ಲಾ ಸಿದ್ಧಿಸುವದೆಂದು ಉಪದೇಶಮಾಡಿದರು, ಆ ಸ್ತೋತ್ರದಲ್ಲಿ ನೃಸಿಂಹಾವತಾರಿಯಾದ ಶ್ರೀ ಹರಿಯನ್ನು ಸ್ತೋತ್ರಮಾಡಿರುವ ಈ ಶ್ಲೋಕದಲ್ಲಿ **"ಪ್ರಣಮನ್ತಿದೇವತಾಃ"** ಎಂದಿರುತ್ತದೆ.

ಇದರ ತಾತ್ಪರ್ಯವೇನೆಂದರೆ:—"ಯಾವ ಮಹಾನುಭಾವನನ್ನು ಸ್ತೋತ್ರಮಾಡುವದರಿಂದ ದೈತ್ಯರೆಲ್ಲಾ ಓಡಿಹೋಗುವರೋ, ದೇವತೆಗಳು ನಮಸ್ಕರಿಸುವರೋ, ರಾಕ್ಷಸರೆಲ್ಲಾ ನಾಶಹೊಂದುವರೋ, ಶತ್ರುಗಳೆಲ್ಲಾ ತೊಲಗುವರೋ, ಅಂತಹ ಆಶ್ಚರ್ಯಕರವಾದ ರೂಪವುಳ್ಳ ನರಹರಿ ರೂಪಾವತಾರಿಯಾದ ಶ್ರೀಹರಿಯು ನಮಗೆ ಮಂಗಳಗಳ ಆಧಿಕ್ಯವನ್ನುಂಟುಮಾಡಲಿ". ಅಮಂಗಳಗಳುತೊಲಗಿ ಮಾಂಗಲ್ಯವಿವೃದ್ಧಿಯುಳ್ಳ ಸ್ಥಿತಿಯನ್ನು ಹೊಂದುವರು ಎಂಬ ಭಾವವು.

ಅವತಾರಿಕೆ—ಮುಮುಕ್ಷುವಿಗೆ ಸಂಸಾರವೆಲ್ಲಾ ಹೇಯವಾದುದರಿಂದಲೂ, ಭಗವದನುಭವವು ವಿಲಕ್ಷಣವಾದುದರಿಂದಲೂ ಇಲ್ಲಿ ಮುಖ್ಯವಾಗಿ ಪ್ರವೃತ್ತಿಧರ್ಮಗಳಿಂದ ನಿವೃತ್ತಿಯೂ ಮತ್ತು ನಿವೃತ್ತಿಧರ್ಮದಲ್ಲಿ ಪ್ರವೃತ್ತಿಯೂ, ಉಪದೇಶಿಸಲ್ಪಟ್ಟವು. ಇದು ಸ್ವಪ್ರಯತ್ನಮಾತ್ರದಿಂದಲೇ ಸಿದ್ಧಿಸಲಾರದೆಂಬಭಿಪ್ರಾಯವನ್ನು ಮನಸ್ಸಿನಲ್ಲಿಟ್ಟು ಆಚಾರ್ಯಕೃಪೆಯಿಂದಲೇ ದೊರೆಯತಕ್ಕದ್ದೆಂದು ಹೇಳುತ್ತಾರೆ.

ಅರ್ಥ:—**ನಿನ್ರ ಪುರಾಣನ** – ಹಿಂದಿನ ಅಧಿಕಾರ ಸಂಗ್ರಹ ಪಾಶುರಾಂತ್ಯದಲ್ಲಿ **"ತಿರುವಾದುಡಂ ನಿನ್ರಪುರಾಣನೇ"** ಎಂದಿರುವದರಿಂದ ಲಕ್ಷ್ಮೀ ಎಂಬ ಯುವತಿಯೊಂದಿಗೇನೇ ಯಾವಾಗಲೂ ಇರುವ ಎಂಬರ್ಥವನ್ನು **ನಿನ್ರ** ಎಂಬುವ

ನನ್ರಿದು ತೀಯದಿದೆನ್ರು ನವಿನ್ರವರ್ ನಲ್ಲರುಳಾಲ್ ।
ವೆನ್ರು ಪುಲನ್ಗಳೈ ವೀ(ಡೆನ)ಡಿಡೈ ವೇಣ್ಡುವುಂ ಪೆರುವ್ಪಯನೇ ॥೧೪॥

ದಕ್ಕೆ ಕೊಡತಕ್ಕದ್ದು. ಅಂತಹ **ಪುರಾಣನ** - ಅನಾದಿಪುರುಷನ, **ಅಡಿಯಿಣೈ**-ಚರಣದ್ವಂದ್ವಗಳನ್ನು, ಅನ್ಯೋನ್ಯಸೌಂದರ್ಯಸಾದೃಶ್ಯದಿಂದಲೂ ಪರನೋತ್ತಾರಕತೆಯಿಂದಲೂ ಪರಮ ಭೋಗ್ಯಗಳಾದ ಆತನ ಪಾದಯುಗಗಳನ್ನು, **ಏನ್ದುಂ** - ಶಿರಸಾವಹಿಸಿ, **ನೆಡುವ್ಪಯನುಮುಂ** - ಶ್ಲಾಘ್ಯವಾದ ಪ್ರಯೋಜನವನ್ನೂ, ಅದು ಯಾವುದೆಂದರೆ ದಿವ್ಯ ವೈಕುಂಠದಲ್ಲಿ ಪ್ರಾಪ್ಯನಾದ ಅವನನ್ನು ಅನುಭವಿಸಿ ಆತನಿಗೆ ಇಷ್ಟವಾದ ಕೈಂಕರ್ಯಗಳನ್ನು ಮಾಡುವ ಪ್ರಯೋಜನವನ್ನೂ, ಮತ್ತು, **ಪೊನ್ರುತಲೆ**-ನಾಶವಾಗುವದೇ, **ನಿಲೈ**-ಸ್ವಭಾವವು, **ಎನ್ರಿಡ** - ಎಂದು ಹೇಳುವ ಹಾಗೆ, **ಪೊಱ್ರುಮ್** - ವ್ಯಯಿಸೊಂದುವ **ಪನಕ್ಕಡಲುಮ್** - ಭವಸಮುದ್ರವನ್ನೂ, ಸಂಸಾರಸಮುದ್ರವನ್ನೂ ಸಹ, ಅಂತಹ ಮೋಕ್ಷರೂಪವಾದ ಶ್ಲಾಘ್ಯ ಪ್ರಯೋಜನವನ್ನೂ, ಈಹೇಯವಾದ ಸಂಸಾರವನ್ನೂ ಸಹ, **ನನ್ರಿದು** - ದಿವ್ಯ ವೈಕುಂಠದಲ್ಲಿ ಭಗವದನುಭವರೂಪವಾದ ಇದು ಬಹು ಉತ್ಕೃಷ್ಟವಾದುದು' **ತೀಯದಿದು** - ಸಂಸಾರಸಮುದ್ರವಾದ ಇದು ಹೇಯವಾದುದು, **ಎನ್ರು** - ಎಂಬದಾಗಿ, **ನವಿನ್ರವರ್** - ಉಪದೇಶಿಸಿದ ಮಹೋಪಕಾರಿಗಳಾದ ಆಚಾರ್ಯರುಗಳು, ಅಂಥಾವರುಗಳ, **ನಲ್ಲರುಳಾಲ್** - ಉತ್ಕೃಷ್ಟವಾದ ಕೃಪೆಯಿಂದ, ಹೇಗೆ ಉತ್ಕೃಷ್ಟವೆಂದರೆ ತಮಗೊಂದು ಪ್ರಯೋಜನವನ್ನೂ ಕೋರದೆ, ಪರರು ಉಜ್ಜೀವಿಸಲಿ ಎಂಬ ಉದಾರಭಾವವಿರುವದರಿಂದ ಉತ್ಕೃಷ್ಟವಾದುದು, **ಪುಲನ್ಗಳೈವೆನ್ರು**-ಇಂದ್ರಿಯಗಳನ್ನು ಜಯಿಸಿ ಎಂದರೆ ಐಹಿಕ ವಿಷಯಭೋಗಗಳಲ್ಲಿ ಆಶೆಯನ್ನು ತೊರೆದು, **ವೀಡೆನ** ಅಥವಾ **ವೀಡಿಡೈ** ಎಂದರೆ ಮೋಕ್ಷವನ್ನು, **ವೇಣ್ಡುಮ್** - ಅಪೇಕ್ಷಿಸುವ, **ಪೆರುವ್ಪಯನೇ** - ಪರಮ ಭಾಗ್ಯವನ್ನು ಹೊಂದಿದವರಲ್ಲವೇ ನಾವು ಎಂಬ ಭಾವವು,

ತಾತ್ಪರ್ಯ:—ಪರಮ ಸುಂದರವಾಗಿಯೂ ಮತ್ತು ಪಾಪರಾಶಿಗಳಿಗೆಲ್ಲಾ ನಾಶಕವಾಗಿಯೂ ಇರುವ ಆ ಶ್ರಿಯಃಪತಿಯ ಪಾದದ್ವಂದವನ್ನು ಶಿರಸ್ಸಿನಲ್ಲಿ ಧರಿಸುವದರಿಂದುಂಟಾಗುವ ದಿವ್ಯ ವೈಕುಂಠಪ್ರಾಪ್ತಿ, ನಿರತಿಶಯಭೋಗಗಳೂ ಆನಂದವೂ, ಭಗವದನುಭವವೂ ಇವೆಲ್ಲಾ ಎಲ್ಲಿ ? ಪುನಃಪುನಃ ಸಂಸಾರದಲ್ಲೇ ಬಿದ್ದು ಬಹು ಕ್ಲೇಶಗಳನ್ನು ಹೊಂದಿ ನರಳುತ್ತಿರುವ ದುರ್ದೆಶೆ ಎಲ್ಲಿ? ಮೊದಲನೇದು ಎಷ್ಟು ವಿಲಕ್ಷಣವಾದುದು ? ಎರಡನೇದು ಎಷ್ಟು ಹೇಯವಾದುದು? ಎಂದು ಹೀಗೆಲ್ಲಾ ಅವುಗಳಿಗಿರುವ ತಾರತಮ್ಯವನ್ನು ಬಹು ಚನ್ನಾಗಿ ಉಪಪಾದಿಸಿ

ನಮ್ಮ ಆಚಾರ್ಯರುಗಳು ನಮಗೆ ಪರಮ ಕೃಪಯಾ ಉಪದೇಶಿಸಿದುದರಿಂದ ಇಂದ್ರಿಯಗಳ ಹಾವಳಿಗೆ ಸಿಲುಕದೆ ಅವುಗಳನ್ನು ಗೆದ್ದು ತನ್ಮೂಲಕ ಐಹಿಕದಲ್ಲಿ ವೈರಾಗ್ಯವೂ, ಸರ್ವೇಶ್ವರನ ಪಾದಕಮಲದಲ್ಲಿ ಭಕ್ತಿಯೂ ಪ್ರಾಪ್ತವಾದುದರಿಂದ ನಾವು ಪರಮ ಭಾಗ್ಯಶಾಲಿಗಳೆಂದು ಹೇಳುತ್ತಾರೆ.

ನಿನ್ರಪುರಾಣರ್. ಹಿಂದಿನ ಅಧಿಕಾರದಲ್ಲಿ ಹೇಳಿದ ಹಾಗೆ ಬ್ರಹ್ಮರುದ್ರಾದಿಗಳು ಪ್ರಳಯದಲ್ಲಿ ಲಯಹೊಂದುತ್ತಾರಾದುದರಿಂದ, ಹಾಗೆ ಯಾವದೊಂದು ಉಪಾಧಿಯೂ ಇಲ್ಲದೆ ಸ್ಥಿರವಾಗಿರುವವನು ಎಂಬಭಿಪ್ರಾಯದಿಂದ ಹೇಳಿರಬಹುದು. ಅಥವಾ ಲಕ್ಷ್ಮೀಯುಕ್ತನಾಗಿ,

"ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ ।
ರಕ್ಷಕಸ್ಸರ್ವಸಿದ್ಧಾನ್ತೇ ವೇದಾಂತೇಷು ಚ ಗೀಯತೇ॥"

ಎಂದು ಹೇಳಿರುವ ಹಾಗೆ ಕಂಕಣಬದ್ಧನಾಗಿ ಜೀವಾತ್ಮರ ಉದ್ಧಾರಕ್ಕಾಗಿ ಅವಸರ ಪ್ರತೀಕ್ಷೆಯೊಂದಿಗೆ ನಿಂತಿರುವನು ಎಂಬಭಿಪ್ರಾಯದಿಂದಾಗಲಿ **ನಿನ್ರ** ಎಂದು ಹೇಳಿರಬಹುದು. ಹಾಗೆಯೇ ಭಕ್ತಾದಿಗಳಿಗೆ ತನ್ನಲ್ಲಿ ಅನುರಾಗ ಉಂಟಾಗಿ ತನ್ನನ್ನು ಹೊಂದುವ ಮಾರ್ಗಗಳನ್ನವಲಂಬಿಸಲಿ ಎಂದು ಪರಮ ಕೃಪಯಾ ಅತೀವ ಪ್ರಿಯದರ್ಶನನಾಗಿ ಅರ್ಚ್ಯಾವತಾರಿಯಾಗಿ ನಿಂತಿದ್ದಾನೆಂದು ತಿಳಿಸುವದಕ್ಕಾಗಿಯಾಗಲಿ **ನಿನ್ರಪುರಾಣರೆಂದು** ಪ್ರಯೋಗಿಸಿರಬಹುದು.

ಅಡಿಯಿಣೈ ಯೇನ್ದು. ಆ ಮಹಾನುಭಾವನ ದಿವ್ಯ ತಿರುವಡಿಗಳನ್ನು ಶಿರಸಾ ಧರಿಸುವ ಭಾಗ್ಯವು ಎಲ್ಲರಿಗೂ ದೊರೆಯಲಾರದು. ಮಹಾಭಕ್ತಶಿರೋಮಣಿಯಾದ ಭರತನಿಗೆ ಪಾದುಕೆಗಳನ್ನು ಧರಿಸುವ ಭಾಗ್ಯವುಂಟಾಯಿತು. ಇತರರಿಗೆ ಉಂಟಾಗಲಿಲ್ಲವು. ಹಾಗೆ ಕಷ್ಟತರವಾಗಿದ್ದರೂ, ನಮ್ಮ ಆಚಾರ್ಯರುಗಳ ನಿರ್ಹೇತುಕ ಕೃಪೆಯಿಂದ ಅದು ಸಾಧ್ಯವೆಂಬ ಭಾವವು.

ಅವರುಗಳ ಅಂತಹ ಕೃಪೆಯಿಂದ ಲಭಿಸುವ ಪ್ರಯೋಜನವು ಮಹತ್ತರವಾದುದು, **ನೆಡುಮ್ ಪಯನುಮ್,** ನಿತ್ಯವಾಗಿ ಸ್ಥಿರವಾದುದು, ಎಂದಿಗೂ ಚ್ಯುತಿ ಇಲ್ಲದುದು. ಈಗಿರುವ ದುರ್ದಿಸೆಯಾದರೋ, ಭವಸಮುದ್ರದಲ್ಲಿರುವದು; ಅನಿತ್ಯ ಭೋಗಗಳ, ಕ್ಲೇಶಗಳ ಆಧಿಕ್ಯವುಳ್ಳದು. ಆದುದರಿಂದ **ಪೋಜ್ಗು** ಎಂಬ ಪ್ರಯೋಗವು. ಸಂಸಾರಸಂಸಾರಕ್ಕೂ ದುಷ್ಕರ್ಮಗಳು ಅಭಿವೃದ್ಧಿಯಾಗುತ್ತಾ ಹೋಗುವದರಿಂದಲೂ **ಪೋಜ್ಗು** ಎಂಬ ಪ್ರಯೋಗವು, ಅದೂ ಅಲ್ಲದೆ "ಸತತವಿಕ್ರಿಯಾ" ಎಂದು ಹೇಳಿರುವ ಹಾಗೆ ಯಾವಾಗಲೂ ಆರು ವಿಧ ವಿಕಾರಗಳನ್ನು ಹೊಂದುವದೇ ಪ್ರಕೃತಿಗೆ ಸ್ವಭಾವವಾದುದರಿಂದ **ಪೊನ್ರುತಲೇ ನಿಲೈಯೆನ್ರಿಡ** ಎಂದು ಹೇಳಿ

ರುತ್ತಾರೆ. ಹೀಗೆ ಇಲ್ಲಿ ನಾವು ಹೊಂದತಕ್ಕ ಪ್ರಯೋಜನಗಳೆಲ್ಲಾ ನಾಶಯುಕ್ತವಾದವು, ಅಲ್ಪವಾಗಿಯೂ ಅಸ್ಥಿರವಾದವುಗಳು. ದಿವ್ಯ ವೈಕುಂಠದಲ್ಲಿ ಹೊಂದತಕ್ಕದ್ದಾದರೋ ನಿತ್ಯವಾಗಿಯೂ ನಿರತಿಶಯವಾದವುಗಳು. ಈ ಕಾರಣದಿಂದ, ಇವೆರಡಕ್ಕೂ ಇರುವ ವ್ಯತ್ಯಾಸಗಳನ್ನು **ಚನ್ನಾಗಿ ಉಪದೇಶಿಸಿ, ನಮ್ಮ "ದೇಶಿಕೋ ಮೇ ದಯಾಳುಃ"** ಎಂದು ಹೇಳಿರುವ ಮೇರಿಗೆ ಪರಮ ಕೃಪಾಳುಗಳಾದ ನಮ್ಮ ಆಚಾರ್ಯರು, ಇಲ್ಲಿ ಇರುವವುಗಳೆಲ್ಲಾ "**ತೀಯದು**" ಹೇಯವಾದುವೆಂದೂ, ದಿವ್ಯ ವೈಕುಂಠದಲ್ಲಿ ಲಭಿಸತಕ್ಕದ್ದೆಲ್ಲಾ **ನಿನ್ರಿದು,** ಬಹಳ ಉತ್ಕೃಷ್ಟವಾದವೆಂದೂ, ಉಪದೇಶಿಸಿರುತ್ತಾರೆ. ಆ ಕಾರಣದಿಂದ ನಾವುಗಳು ನಮ್ಮ ಇಂದ್ರಿಯಗಳ ಹಾವಳಿಗೆ ಸಿಕ್ಕದೆ, ಅವುಗಳನ್ನು ಜಯಿಸಿರುತ್ತೇವೆ. ಸುಸಾರಥಿಯ ಹಾಗೆ ಆ ದುಷ್ಟ ಕುದುರೆಗಳನ್ನು ನಮಗೆ ಆಚಾರ್ಯರಿಂದ ದೊರೆತ ವಿವೇಕದಿಂದ ನಿಗ್ರಹಿಸುತ್ತೇವೆ. ಯಾವಾಗ ಇಂದ್ರಿಯಗಳನ್ನು ಜಯಿಸಿದೆವೋ, "**ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ**" ಎಂದು ಹೇಳಿರುವ ಹಾಗೆ ಪ್ರಜ್ಞೆಯು ಕರಗತವಾಯಿತು. ಆ ಪ್ರಜ್ಞೆಯೊಂದು ಯಾವಾಗ ನಮಗೆ ವಶವಾಗಿ ಸುಪ್ರತಿಷ್ಠಿತವಾಯಿತೋ, ಆವಾಗ ಮೋಕ್ಷಪ್ರಾಪ್ತಿಯವರಿವಿಗೂ ಎಲ್ಲವೂ ಕೈಗೂಡುವದು ಎಂಬಭಿಪ್ರಾಯವು. ಇದೀಗ ಪರಮ ಭಾಗ್ಯವು ನಾವು ನಮ್ಮ ಆಚಾರ್ಯರವರುಗಳಿಂದ ಹೊಂದಿರುವದು, ಎಂದು **ಪೆರುಂ ಪಯನೇ** ಎಂಬದಾಗಿ ಹೇಳಿರುತ್ತಾರೆ. ಮುಮುಕ್ಷುವೆಂದು ಹೇಳಿಸಿಕೊಳ್ಳಲು ಎಂಥಾವರಾಗಿರಬೇಕೆಂದು ವಿಶದವಾಗಿ ಉಪಪಾದಿಸಿ, ಅಂತಹ ಸ್ವರೂಪಸ್ಥಿತಿಪ್ರವೃತ್ತಿಗಳು ಆತನಲ್ಲಿ ಉಂಟಾಗಬೇಕಾದರೆ, ವೃಥಾ ತನ್ನ ಪ್ರಯಾಸಮಾತ್ರದಿಂದಲೇ ಲಭಿಸಲಾರದೆಂದೂ, ಅಂತಹ ಪ್ರಾಪ್ತಿಗೆ **ಸದಾಚಾರ್ಯಪ್ರಾಪ್ತಿ, ಅವರ ಅನುಗ್ರಹ,** ಉಪದೇಶಾದಿಗಳು ಪ್ರಧಾನಕಾರಣಗಳಾದುದರಿಂದ, ಅಂತಹ ಆಚಾರ್ಯಪ್ರಾಪ್ತಿರೂಪ ಭಾಗ್ಯೋದಯವು ಈತನಿಗೆ ಇರಬೇಕೆಂದು ಉಪದೇಶಿಸಲ್ಪಟ್ಟಿತು.

ಅವತಾರಿಕೆ:—ಹಿಂದಿನ ಪಾಶುರದಲ್ಲಿ ಮೋಕ್ಷಾಧಿಕಾರಿಯಾಗಬೇಕಾದರೆ ಈತನಿಗೆ ಸದಾಚಾರ್ಯಪ್ರಾಪ್ತ್ಯುಪದೇಶಗಳು ಆವಶ್ಯಕವೆಂದು ಹೇಳಿದರು. ಈ ಶ್ಲೋಕದಲ್ಲಿ ಹಾಗೆ ಸದಾಚಾರ್ಯಪ್ರಾಪ್ತಿ ಮತ್ತು ಅವರ ಅನುಗ್ರಹೋಪದೇಶಗಳು ಎಲ್ಲರಿಗೂ ದೊರೆಯಲಾರದು, ಹಾಗೆ ದೊರೆಯುವದು ಪರಮ ದುರ್ಲಭವೆಂದೂ, ಎಲ್ಲೋ ಒಬ್ಬೊಬ್ಬರಿಗೆ ಸಿದ್ಧೋಪಾಯನಾದ ಸರ್ವೇಶ್ವರನ ಕೃಪೆಯಿಂದುಂಟಾದೀತೆಂದೂ, ಆದುದರಿಂದ ಹೀಗೆ ಮುಮುಕ್ಷುವೆಂದೆನಿಸಲು ಸರ್ವೇಶ್ವರನೇ ಮೂಲಕಾರಣವೆಂದೂ, ತಿಳಿಯಪಡಿಸುತ್ತಾರೆ,

ವಿಷಮಧುಬಹಿಷ್ಕುರ್ವನ್ ಧೀರೋ ಬಹಿರ್ವಿಷಯಾತ್ಮಕಂ ।
ಪರಿಮಿತರಸಸ್ವಾತ್ಮಪ್ರಾಪ್ತಿಪ್ರಯಾಸಪರಾಙ್ಮುಖಃ ॥
ನಿರವಧಿಮಹಾನಂದಬ್ರಹ್ಮಾನುಭೂತಿಕುತೂಹಲೀ ।
ಜಗತಿ ಭವತಿ ದೈವಾತ್ಕಶ್ಚಿಜ್ಜಿಹಾಸಿತಸಂಸೃತಿಃ ॥೧೯॥

ಅರ್ಥಃ—**ಜಗತಿ** - ಈ ಲೋಕದಲ್ಲಿ, **ಧೀರಃ** - ಬುದ್ಧಿವಿವೇಕದಿಂದ ರವಿಸುವವನು, ಅಂದರೆ ವಿಷಯಗಳಿಗೆ ಮನಸ್ಸನ್ನು ಕೊಡದೆ ಚಿತ್ತಸ್ಥೈರ್ಯಹೊಂದಿದ ಪ್ರಾಜ್ಞನು, ಪಂಡಿತನು ಎಂಬರ್ಥವು, ಅಂತಹ, **ಕಶ್ಚಿತ್** – ಒಬ್ಬಾನೊಬ್ಬನು, **ದೈವಾತ್** - ದೈವವಶಾತ್, ದೈವ ಸಙ್ಕಲ್ಪದಿಂದ, ಜಾಯಮಾನಕಾಲದಲ್ಲಿ ದಿವ್ಯ ಕಟಾಕ್ಷದಿಂದ ನೋಡೋಣವೇ ಮೊದಲಾದುದರಿಂದ, **ಬಹಿರ್ವಿಷಯಾತ್ಮಕಂ** – ಹೊರಗಿನ ವಿಷಯಭೂತಗಳಾಗಿರುವ, **ವಿಷಮಧು** – ವಿಷಯುಕ್ತವಾದ ಮಧುವನ್ನು ಎಂದರೆ ಜೀನುತುಪ್ಪವನ್ನು, **ಬಹಿಷ್ಕುರ್ವ್ವನ್**-ಬಿಟ್ಟು ಬಿಟ್ಟವನಾಗಿ, ಮತ್ತು, **ಪರಿಮಿತರಸ**-ಅಲ್ಪವಾದ ಆನಂದವುಳ್ಳ, **ಸ್ವಾತ್ಮಪ್ರಾಪ್ತಿ** - ತನ್ನ ಆತ್ಮವನ್ನು ಅನುಭವಿಸುವದರಿಂದುಂಟಾದ, **ಪ್ರಯಾಸ** – ಆಯಾಸಕ್ಕೆ, **ಪರಾಙ್ಮುಖಃ** - ವಿಮುಖನಾಗಿ ಎಂದರೆ ಅಂತಹ ಆಯಾಸವನ್ನು ಹೊಂದದವನಾಗಿ, **ನಿರವಧಿಮಹಾನಂದಬ್ರಹ್ಮಾನುಭೂತಿಕುತೂಹಲೀ, ನಿರವಧಿ**-ಅವಧಿಯಿಲ್ಲದ, **ಮಹಾನಂದ** - ಮನುಷ್ಯ, ಗಂಧರ್ವ, ಬ್ರಹ್ಮ ಮೊದಲಾದವರ ಆನಂದಗಳಿಗಿಂತಲೂ ಹೆಚ್ಚಾದ ಆನಂದವುಳ್ಳವನಾದುದರಿಂದ, ಅಂತಹ ಆನಂದವುಳ್ಳ, **ಬ್ರಹ್ಮಾನುಭೂತಿ** - ಪರಬ್ರಹ್ಮನ ಅನುಭವದಲ್ಲಿ, **ಕುತೂಹಲೀ**-ಹೆಚ್ಚಾದ ಅಭಿಲಾಷೆಯುಳ್ಳವನಾಗಿಯೂ, **ಜಿಹಾಸಿತಸಂಸೃತಿಃ** - ಹೇಯವಾಗಿ ತಿಳಿಯಲ್ಪಟ್ಟುದರಿಂದ ತ್ಯಜಿಸಬೇಕೆಂಬಿಚ್ಛೆಯುಳ್ಳ ಸಂಸಾರವುಳ್ಳವನಾಗಿ ಎಂದರೆ ಸಂಸಾರವು ಹೇಯವೆಂದು ತಿಳಿದು ಅದರಲ್ಲಿ ಆಸಕ್ತಿ ಇಲ್ಲದವನಾಗಿ, **ಭವತಿ** ಎಂಬುವದು **ಭವಿತಾ** ಎಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ, ಆಗುವನು ಎಂಬರ್ಥವು.

ತಾತ್ಪರ್ಯ—ಮುಮುಕ್ಷುವಾಗಬೇಕಾದರೆ ಮುಖ್ಯವಾಗಿ ಈತನಿಗೆ ದೈವಾನುಗ್ರಹ ಬೇಕು ಎಂದು **ದೈವಾತ್** ಎಂದು ಪ್ರಯೋಗಿಸಿರುತ್ತಾರೆ. ದೈವಾನುಗ್ರಹವನ್ನು ಈತನು ಸಂಪಾದಿಸಿಕೊಳ್ಳದಿದ್ದರೆ ಈತನ ಸರ್ವ ಪ್ರಯತ್ನವು ವ್ಯರ್ಥವು ಎಂಬಭಿಪ್ರಾಯವು. ಹಾಗೆ ದೈವಾನುಗ್ರಹವನ್ನು ಸಂಪಾದಿಸಿಕ್ಕೊಂಡು ಮುಮುಕ್ಷುವಾಗಿರುವವರು ತುಂಬಾ ವಿರಳರು, **"ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ"** (ಗೀ ೭—೩) ಎಂದು ಹೇಳಿರುವಹಾಗೆ ಎಲ್ಲೋ ಸಾವಿರಕ್ಕೊಬ್ಬನು ಎಂದು ಹೇಳುವದಕ್ಕಾಗಿ **"ಕಶ್ಚಿತ್"** ಎಂಬದಾಗಿ ಇಲ್ಲಿ ಪ್ರಯೋ

ಗವು. ಅಂತಹ ದೈವಾನುಗ್ರಹವುಳ್ಳ, ಮುಮುಕ್ಷುವಿಗೆ ಐಹಿಕದಲ್ಲಿ ಜಿಹಾಸೆ ಹುಟ್ಟಿ ವೈರಾಗ್ಯವುಂಟಾಗುತ್ತದೆಂದು **ಜಿಹಾಸಿತಸಂಸೃತಿಃ** ಎಂಬುವದರಿಂದ ತಿಳಿಯ ಪಡಿಸಿರುತ್ತಾರೆ. ಹಾಗೆ ಸಂಸೃತಿಯಲ್ಲಿ ಆತನಿಗೆ ವೈರಾಗ್ಯ ಉಂಟಾಗಬೇಕಾದರೆ ಇಂದ್ರಿಯಗಳನ್ನು ಆತನು ಜಯಿಸಬೇಕು, ಹಾಗೆ ಜಯಿಸಿದವನೇ ಧೀರನು, ಮಹಾ ಪ್ರಾಜ್ಞನು ಎಂದು ಹೇಳಿರುತ್ತಾರೆ. ಅಂಥಾವನು **ಬಹಿರ್ವಿಷಯಾತ್ಮಕಂ,** ಹೊರಗೆ ಈ ಜಗತ್ತಿನಲ್ಲಿ ಶಬ್ದಾದಿ ವಿಷಯಗಳನ್ನೆಲ್ಲಾ, **ವಿಷಮಧು,** ವಿಷಮಿಶ್ರವಾದ ಜೇನುತುಪ್ಪದಹಾಗೆ ಭಾವಿಸುವನು. ವಿಷಯಭೋಗಗಳೇನೋ ಪ್ರಥಮತಃ ಸುಖಕರವಾಗಿ ತೋರಬಹುದು. ಆದರೆ ಪರಿಣಾಮದಲ್ಲಿ ದುಃಖೋತ್ಪಾದಕತ್ವ, ದುಃಖಮಿಶ್ರತ್ವ ಮೊದಲಾದ ದೋಷಯುಕ್ತಗಳಾಗಿರುವವು. ವಿಷಮಿಶ್ರ ಮಧುವು ಸೇವನೆ ಮಾಡುವಾಗ ಬಹುರುಚಿಯಾಗಿರಬಹುದು ; ಅದರೆ ವಿಷಮಿಶ್ರವಾಗಿರುವದರಿಂದ ಇವನಿಗೆ ಸಕಲವಿಧ ಕ್ಲೇಶಕ್ಕೆ ಮುಂದೆ ಕಾರಣವಾಗಬಹುದು. ಹಾಗೆಯೇ ವಿಷಯ ಸುಖಗಳೆಲ್ಲಾ ಅಂತ್ಯದಲ್ಲಿ ಕ್ಲೇಶಾವಹವು. ಆದುದರಿಂದ ಧೀರನಾದವನು **ಬಹಿಷ್ಕುರ್ವ್ಯ,** ಅಂತಹ ವಿಷಯ ಸುಖಗಳನ್ನೆಲ್ಲಾ ದೂರೀಕೃತಮಾಡುವನು, ಎಂದು ಹೇಳುತ್ತಾರೆ. ಹೀಗೆ ಸರ್ವವಿಧ ಐಹಿಕ ಸುಖಗಳನ್ನೂ ಪತನಭಯವೇ ಮೊದಲಾದ ಕ್ಲೇಶಗಳುಳ್ಳ ಸ್ವರ್ಗಾದಿ ಭೋಗಗಳನ್ನೂ ತ್ಯಜಿಸುವನು ಎಂಬ ಭಾವವು. ಹಾಗೆಯೇ, ಪರಬ್ರಹ್ಮಾನುಭವಕ್ಕೆ ಹೋಲಿಸಿದುದಾದರೆ **ಪರಮಿತರಸಸ್ಯಾತ್ಮಪ್ರಾಪ್ತಿ,** ಅಲ್ಪಾನಂದವುಳ್ಳ ಕೈವಲ್ಯಪ್ರಾಪ್ತಿಯೂ ಕೂಡಾ ವೃಥಾಯಾಸವೆಂದು ಭಾವಿಸಿ ಅದಕ್ಕಾಗಿ ಪ್ರಯತ್ನಿಸದೇ ಇರುವನು. ಕೈವಲ್ಯಪ್ರಾಪ್ತಿಗೆ ಯಮನಿಯಮಾಸನಾದಿಗಳಿಂದ ಕೂಡಿದ ಧ್ಯಾನವು ಆವಶ್ಯಕವು. ಇದು ತುಂಬಾ ಪ್ರಯಾಸದಿಂದುಂಟಾಗತಕ್ಕದ್ದು. ಭಜನಕಾಲದಲ್ಲಿ ಸ್ವಲ್ಪಮಟ್ಟಿಗೇನೋ ಆನಂದ ಉಂಟು. ಮತ್ತು ಐಹಿಕಾನಂದಗಳಿಗಿಂತಲೂ ಸ್ವಲ್ಪ ಉತ್ತಮವಾದರೂ ವಿಶೇಷ ದೇಹಾಯಾಸದಿಂದುಂಟಾಗತಕ್ಕದ್ದು. ಆದರೆ ಫಲವಾದರೋ ಅತ್ಯಲ್ಪವು. ಇದಕ್ಕೂ ಪರಬ್ರಹ್ಮಾನುಭವಾನಂದಕ್ಕೂ ಅಜಗಜನ್ಯಾಯವಾದುದರಿಂದ, **"ಪರ್ವತಂ ಖನಿತ್ವಾ ಮೂಷಿಕಾಗ್ರಹಣಂ"** ಎನ್ನುವಹಾಗೆ ಪರ್ವತವನ್ನಗದು ಇಲಿಯನ್ನು ಹಿಡಿದಂತಾಗುತ್ತದೆ. ಈ ಅಭಿಪ್ರಾಯದಿಂದ **ಪ್ರಯಾಸಪರಾಜ್ಮುಖಃ** ಯೆಂದು ಹೇಳಿರುತ್ತಾರೆ. ಈ ಬ್ರಹ್ಮಾನುಭವಕ್ಕೆ ಹೋಲಿಸಿದರೆ, ಅವುಗಳೆಲ್ಲಾ, **" ಏತೇ ವೈ ನಿರಯಾಸ್ತಾ ತೇ ಸ್ಥಾನಸ್ಯ ಪರಮಾತ್ಮನಃ "** ಎಂದು ಹೇಳಿದಹಾಗೆ ನರಕಕ್ಕೆ ಸಮಾನವಾವವುಗಳು. ಹೀಗೆ ಐಹಿಕ, ಸ್ವರ್ಗಾದಿ ಲೋಕ ಸುಖಗಳನ್ನೂ ತೊರೆದು, ಕೈವಲ್ಯಾದಿಗಳನ್ನು ಪರಿತ್ಯಜಿಸಿ ಯಾವುದರಲ್ಲಿ ಆ ಮುಮುಕ್ಷುವು ಕುತೂಹಲವುಳ್ಳವನಾಗುತ್ತಾನೆಂದರೆ ಹೇಳುತ್ತಾರೆ. **ನಿರವಧಿ ಮಹಾನಂದ ಬ್ರಹ್ಮಾನುಭೂತಿ** ಯಲ್ಲಿ ಕುತೂಹಲವುಳ್ಳವನಾಗುತ್ತಾನೆ. ಪರ

ಬ್ರಹ್ಮಾನಂದವು ಎಷ್ಟು ಪರಿಮಾಣವುಳ್ಳದ್ದಿಂದು ಶ್ರುತಿಯು ಆನಂದವಲ್ಲಿಯಲ್ಲಿ ಪರ್ಯಾಲೋಚಿಸಲು ಹೊರಟು, ಒಂದಕ್ಕಿಂತ ಇನ್ನೊಂದು ಆನಂದವು ಅದರ ನೂರ ರಷ್ಟು, ಇದರ ನೂರರಷ್ಟು ಇನ್ನೊಂದು ಎಂದು ಹೀಗೆ ಹೇಳುತ್ತಾ ಹೋಗಿ,ಆಗಲೂ ಕೂಡ ಪರಬ್ರಹ್ಮಾನಂದವಿಷ್ಟೆಂದು ಹೇಳಲು ಸಾಧ್ಯವಿಲ್ಲದೆ "**ಯತೋ ವಾಚೋ ನಿವರ್ತಂತೇ**" ಎಂದು ಹೇಳಿ ವಿರಾಮವನ್ನು ಹೊಂದಿತು. ಆದುದರಿಂದ **ನಿರವಧಿ ಮಹಾನಂದ** ವೆಂದು ಬ್ರಹ್ಮಾನಂದವು ಹೇಳಲ್ಪಟ್ಟಿತು. ಪರಬ್ರಹ್ಮಾನುಭವದಿಂ ದುಂಟಾಗುವ ಆನಂದವೂ ಕೂಡ ಅಂಥಾದ್ದೇ ; ಅಂಥಾದ್ದನ್ನು ಪಡೆಯಬೇಕೆಂಬ ಉತ್ಕಟಾಭಿಲಾಷೆಯನ್ನು ಈ ಮುಮುಕ್ಷುವು ಹೊಂದುತ್ತಾನೆ. ಇಲ್ಲಿ **ಪರಬ್ರಹ್ಮಾನುಭೂತಿ** ಎಂದು ಪ್ರಯೋಗಿಸುವದರಿಂದ ಶ್ರೀಮದಾಚಾರ್ಯರವರಿಗೆ ಪರಬ್ರಹ್ಮವೇ ಬೇರೆ, ಅನುಭೂತಿಯೇ ಬೇರೆ ಎಂದು ಹೇಳುವ ಅಭಿಪ್ರಾಯವಾಗಿರುತ್ತದೆ. ಶ್ರೀ ಶಂಕರಾಚಾರ್ಯರು ಅನುಭೂತಿ ಎಂದರೆ ಅನುಭವವೇ ಪರಬ್ರಹ್ಮವೆಂದು ಹೇಳಿ ಬಿಟ್ಟರು. ಅಂತಹ ಜ್ಞಾನಕ್ಕೆ ಅಧಿಷ್ಠಾತಾವಾಗಿ ಬೇರೇ ಪರಬ್ರಹ್ಮನಿದ್ದಾನೆಂದು ತಿಳಿಯದೇ ಹೋದರು. ನಮ್ಮ ವಿಷಯದಲ್ಲೇನೋ ತೋರುವ ಅಹಂಭಾವವು ಅಹಙ್ಕಾರ ತತ್ವದ ಮಹಿಮೆಯೆಂದು ಹೇಳಿದರು. ಪರಬ್ರಹ್ಮನಿಗೆ **ಅಹಂ** ಎಂದು ತೋರುವದಿಲ್ಲವೋ, ಅದಕ್ಕೆ ಸಮಾಧಾನ ಹೇಗೆ ಎಂದು ಚರ್ಚಿಸದೆ ಅಹಂಭಾವವು ಮಿಥ್ಯಾ ಎಂದು ಹೇಳಿದರು. ಅದು ಸರಿಯಲ್ಲವೆಂದು ತಿಳಿಸುವದಕ್ಕಾಗಿ **ಪರಬ್ರಹ್ಮಾನುಭೂತಿ** ಎಂದು ಇಲ್ಲಿ ಹೇಳಿ ಅನುಭೂತಿಯು ಪರಬ್ರಹ್ಮವಿಷಯವಾದುದ ಎಂದು ತೋರ್ಪಡಿಸಿರುತ್ತಾರೆ.

ಆದುದರಿಂದ ಮುಮುಕ್ಷುವಿಗೆ ಮುಖ್ಯವಾಗಿ ಇಹದಲ್ಲಿ ಇಂದ್ರಿಯನಿಗ್ರಹ ಪೂರ್ವಕ ಐಹಿಕಾದಿ ಸುಖಭೋಗಗಳಲ್ಲಿ ವೈರಾಗ್ಯವೂ ಮತ್ತು ಪರಬ್ರಹ್ಮಾನುಭವದಲ್ಲಿ ಉತ್ಕಟೇಚ್ಛೆಯೂ ಆವಶ್ಯಕವೆಂದು ಹೇಳಿ ಈ ಅಧಿಕಾರ ಪರಿಸಮಾಪ್ತಿಯನ್ನು ಮಾಡಿರುತ್ತಾರೆ.

ಶ್ರೀಮತೇ ನಿಗಮಾನ್ತಮಹಾದೇಶಿಕಾಯ ನಮಃ
ಶ್ರೀಮತೇ ಶ್ರೀನಿವಾಸಮಹಾದೇಶಿಕಾಯ ನಮಃ

ಶ್ರೀಮದ್ರಹಸ್ಯತ್ರಯಸಾರದ ಏಳನೆಯದಾದ **ಮುಮುಕ್ಷುತ್ವಾಧಿಕಾರಕ್ಕೆ**

ತಿರುನಾರಾಯಣಪುರಂ ವಿಜಯರಾಘವಶರ್ಮಕೃತ

"ಆಚಾರ್ಯ ಹೃದಯಾನ್ವೇಷಿಣೀ"

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದುವು.

ಶುದ್ಧಾಶುದ್ಧ ಪತ್ರಿಕೆ.

ಪುಟ	ಪಙ್ತಿ	ಅಶುದ್ಧವು	ಶುದ್ಧವು
೬೨೮	೨೨	ಜ್ಞಾಜ್ಞೌಜ್ಞ ಅಜಾ	ಜ್ಞಾಜ್ಞೌಜ್ಞ ದ್ವಾವಜಾ
೬೨೯	ಕೊನೇಪಙ್ತಿ	ಅಯನಾಯ"	ಅಯನಾಯ."
೬೩೦	೧	ಯಶ್ಚಾನ್ಯಾ	ಯಾಶ್ಚಾನ್ಯಾ
೬೩೩	೧೦	ದೆಂದು	ದೆಂದೂ,
೬೩೪	೧೧	ಆಲೋಢ್ಯ	ಆಲೋಡ್ಯ
೬೩೬	೨	ಜುಕ್ಕಡೈಯಾ	ಜೂಕ್ಕಡಾನೈ
,,	೧೧	,,	,,
೬೩೮	೧೮	ಎಂಬರ್ಥವು	ಎಂಬರ್ಥವು.
೬೪೫	೧೬	ಆದ	ಆದು
,,	೧೭	ಳಾದುದರಿಂದು	ಳಾದುದರಿಂದ
,,	ಕೊನೇಪಙ್ತಿ	ಗಳೆಲಾ	ಗಳೆಲ್ಲಾ
೬೫೨	೨೫	ಧಾತೃಶ್ವಂ	ಧಾತೃತ್ವಂ
೬೬೨	೧೯	ಆಶಯವು.	ಆಶ್ರಯವು.
೬೬೪	೫	ಸಿದಂ	ಸಿದ್ಧಂ.
೬೬೫	೨೦	ಸಲ್ಪಟ್ಟಿ	ಸಲ್ಪಟ್ಟ
೬೬೭	೧೭	ಪ್ರಮಾಣು	ಪ್ರಮಾಣ
೬೭೫	೫	ದುಷ್ಟ್ರಕೃತಿ	ದುಷ್ಟಪ್ರಕೃತಿ
೬೯೧	೬	ಐಹಿಕಗಳಾಗಿ	ಐಹಿಕಗಳಾದ
,,	೧೪	ಮಾಹಾತ್ಮ್ಯಂ-ಮಾಹಾತ್ಮ್ಯಂ	ಮಾಹಾತ್ಮ್ಯಂ-ಮಾಹಾತ್ಮ್ಯಂ
೬೯೨	೨೩	ಗಗಳನ್ನು	ಗಳನ್ನು
೬೯೯	ಕೊನೇಪಙ್ತಿ	ತ್ಕೋಕವು	ಶ್ಲೋಕವು
೭೦೫	೧೧	ಯದಪುಣ್ಯಾನಾಂ	ಯದಪುಣ್ಯಾನಾಂ
೭೧೬	೨೭	ರುದ್ರನ್ಮೋ	ರುದ್ರನೋ
೭೧೯	೫	ಯನಾ ಯ್	ಯನ್ವಾಯ್
೭೨೧	೨	ಕಣ್ಣೀ	ಕಣ್ಣೀ
,,	೧೧	ಗಳ	ಗಳು
೭೨೪	೨೦	ಶಿಶುಸ್ತಸಂಥಯೋ	ಶಿಶುಸ್ತನಂಧಯೋ
೭೩೦	೧೨	ಸ್ವಾವಿ	ಸ್ವಾಮಿ
೭೩೩	೬	ಪರುಮಾರಿಗಿರ	ಪರಿಮಾರುಗಿರ
೭೫೦	೨೨	ಪುರುಷೋತ್ವಮ	ಪುರುಷೋತ್ತಮ
೭೫೨	೭	ಗತಿಯಿಲ್ಲವು.	ಗತಿಯಿಲ್ಲವು,
೭೫೫	೨೨	ವಿಕಾರಗಳನ	ವಿಕಾರಗಳನ್ನು
,,	೨೩	ಸಂಬಂಧವ್ನು	ಸಂಬಂಧವು
೭೬೦	೭	ಜ್ಞಾಜ್ಞೌಜ್ಞವಜಾ	ಜ್ಞಾಜ್ಞೌಜ್ಞ ದ್ವಾವಜಾ
,,	೧೪	ಸಾಧ	ಸಾಧ್ಯ
೭೭೨	೨೦	ಭುಂಜಿಸಿ	ಭುಜಿಸಿ
೭೪೧	೧೭	ಕರ್ಮ ಶ	ಕರ್ಮ
೭೯೨	೪	ವಿಧವು	ವಿಷವು.
	೧೩	ಎಂದರೆ	ಎಂದರೆ:—
೭೯೪	೨೦	ಪ್ರಶ್ನೆಯು	ಪ್ರಶ್ನೆಯು.